
ಪುಸ್ತಕ ಪ್ರಪಂಚ

ಜನವರಿ ೧೯೬೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಸಂಪುಟ ೪೯ ಸಂಚಿಕೆ ೪ ಜನವರಿ ೧೯೯೯

'ಪುಸ್ತಕ ಪ್ರಪಂಚ' ಲೇಖಕ ಹಾಗೂ ಓದುಗ ಬಳಗಕ್ಕೆ ಹೊಸ ವರ್ಷದ ಶುಭಾಶಯಗಳು

ಪರಿವಿಡಿ

ಮುಖ ಚಿತ್ರ : ಡಾ॥ ಜಿ. ಎಸ್. ಶಿವರುದ್ರಪ್ಪ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು—೫೭೦ ೦೦೬

೧೯೯೯ ವೃದ್ಧರ ಸಂವತ್ಸರ

ಜಾತಸ್ಯ ಹಿ ಧ್ರುವೋ ಮೃತ್ಯುಃ ಎಂಬುದಾಗಿ ಗೀತೆ ನುಡಿಯುತ್ತದೆ. ಹುಟ್ಟಿದ್ದು ಸಾಯಬೇಕು, ಸತ್ತದ್ದು ಹುಟ್ಟಬೇಕು. ಒಂದು ಮತ್ತೊಂದರ ಅವಸ್ಥಾಂತರ. ಹುಟ್ಟು ಸಾವುಗಳ ಏಣಿಯ ಮೇಲೆ ಆತ್ಮ ನಿರಂತರವಾಗಿ ಊರ್ಧ್ವಮುಖವಾಗಿ ಚಲಿಸುತ್ತದೆ. ಶೈಶವ, ಬಾಲ್ಯ, ಕೌಮಾರ, ಯೌವನ, ಪ್ರೌಢತ್ವ ಮತ್ತು ವೃದ್ಧಾಪ್ಯ–ಇವು ಹುಟ್ಟು ಸಾವುಗಳ ನಡುವಣ ಅವಸ್ಥಾಂತರಗಳು. ಇವು ನಿಸರ್ಗ ಸಹಜ ಬೆಳವಣಿಗೆಗಳು. ಇವುಗಳಿಂದ ಯಾವ ಜೀವಿಯೂ ತಪ್ಪಿಸಿಕೊಳ್ಳುವಂತಿಲ್ಲ. ಜೀವಾವಧಿ ಜೀವಿಯಿಂದ ಜೀವಿಗೆ ವ್ಯತ್ಯಾಸವಾಗುತ್ತದೆ. ಕ್ರಿಮಿಕೀಟಾದಿ ಜೀವಿಗಳು ಕೆಲವು ಗಂಟೆ ಮಾತ್ರ ಬದುಕುವುದಾದರೆ, ಮನುಷ್ಯ ನೂರು ವರ್ಷ ಬದುಕುತ್ತಾನೆ. ನೂರಿಪ್ಪತ್ತು ವರ್ಷ ಬದುಕಿದವರೂ ಇದ್ದಾರೆ. ನಾಲ್ಕು ಸಾವಿರ ವರ್ಷ ಬದುಕಿರುವ ಕೆಂಪು ಮರಗಳಿವೆ- ಜಪಾನ್ ಮತ್ತು ಸ್ಕ್ಯಾಂಡಿನೇವಿಯಾ ದೇಶಗಳ ಜನರ ಸರಾಸರಿ ವಯಸ್ಸು ೮೦ ವರ್ಷ. ಭಾರತೀಯರ ಸರಾಸರಿ ವಯಸ್ಸು ೬೨ ವರ್ಷ. ಹಾರ್ಮೋನುಗಳನ್ನು ಶರೀರದೊಳಗೆ ಸೇರಿಸುವ ಮೂಲಕ ಮನುಷ್ಯನ ಆಯುಸ್ಸನ್ನು ಹೆಚ್ಚಿಸಬಹುದೆಂದು ವೈಜ್ಞಾನಿಕ ಸಂಶೋಧನೆಯಿಂದ ತಿಳಿಯುತ್ತದೆ. ಅನು ತಾತ್ಕಾಲಿಕ ಪರಿಹಾರವಷ್ಟೆ. ಒಂದಲ್ಲ ಒಂದು ದಿನ ಮುಪ್ಪು ಸಾವುಗಳು ಅನಿವಾರ್ಯ. ವಯೋಮಾನಕ್ಕೂ ವೃದ್ಧಾಪ್ಯಕ್ಕೂ ಸಂಬಂಧವಿಲ್ಲ. ಕೆಲವರ ದೇಹದಲ್ಲಿ ಐವತ್ತು ವರ್ಷಕ್ಕೆ ಮುಪ್ಪು ಕಾಣಿಸಿಕೊಂಡರೆ, ಮತ್ತೆ ಕೆಲವರಲ್ಲಿ ಎಂಬತ್ತು ವರ್ಷಗಳ ನಂತರ ಗೋಚರಿಸಬಹುದು. ತರಹೆವಾರಿ ಪ್ರಕೃತಿಯಿಂದಾಗಿ ಸುಕ್ಕು, ಮಂದ ದೃಷ್ಟಿ, ಕೆಪ್ಪು, ಪಚನಶಕ್ತಿವಿನಾಶ, ಮರೆವು ಮೊದಲಾದ ಮುಪ್ಪಿನ ಲಕ್ಷಣಗಳು ಮನುಷ್ಯರಿಂದ ಮನುಷ್ಯರಿಗೆ ವ್ಯತ್ಯಾಸ ಹೊಂದುತ್ತವೆ. ದೈಹಿಕ ಹಾಗೂ ಮಾನಸಿಕ ಶಕ್ತಿ ಕ್ಷೀಣತೆಯಿಂದಾಗಿ ವೃದ್ಧಾಪ್ಯ ಜೀವನ ಸಮಾಜದ ಸಹಕಾರ ಸಹಾನುಭೂತಿಗಳನ್ನಪೇಕ್ಷಿಸುತ್ತದೆ.

ಶಸ್ತ್ರಚಿಕಿತ್ಸೆಯ ಮೂಲಕ ಸುಕ್ಕು ಸರಿಪಡಿಸಿಕೊಳ್ಳಬಹುದು, ಕೂದಲ ನಾಟಿ ಸಾಧ್ಯವಾಗಬಹುದು, ವಕ್ಷೋಜಗಳನ್ನು ಬೇಕಾದ ಹಾಗೆ ಸಾವಗಿಸಿಕೊಳ್ಳಬಹುದು ; ಆದರೂ ಯಮನನ್ನು ವಂಚಿಸಲಾಗದು. ಹಿಂದಿನ ಕಾಲದಲ್ಲಿಯೂ ಯೌವನವನ್ನು ಚೇತರಿಸಲು ದೊರೆಗಳು ಮತ್ತು ಶ್ರೀಮಂತರು ನಾನಾ ಉಪಾಯಗಳನ್ನು ಹುಡುಕುತ್ತಿದ್ದರು. ಡೇವಿಡ್ ದೊರೆ ಯೌವನದ ಪುನರುತ್ಥಾನಕ್ಕಾಗಿ ಕನ್ಯಾಮುಕುಳಗಳನ್ನು ಅರಸಿಕೊಂಡು ಹೋಗುತ್ತಿದ್ದನಂತೆ. ಹೆಚ್ಚು ಕಡಮೆ ಯಯಾತಿಯ ಕತೆಯೂ ಅಂಥದೇ. ವಯಸ್ಸಾದಂತೆಲ್ಲ ಜಗತ್ತನ್ನು ನಿಸರ್ಗವನ್ನು ಪ್ರೀತಿಸುವಂತಾದರೆ, ಮುಪ್ಪಿನ ಬೇನೆ ಬವಣೆ ಬೇಸರಗಳು ದೂರವಾಗುತ್ತವೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಜೀವನೋ-

ತ್ಸಾಹವನ್ನು ಬೆಳೆಸಿಕೊಂಡದ್ದಾದರೆ ವಯಸ್ಸು ಹೊರೆಯಾಗಲಾರದು. ವಯಸ್ಸು ಹೆಚ್ಚಿದಂತೆಲ್ಲ ಅಂಗಾಂಗಗಳಲ್ಲಿ, ಮನೋಧರ್ಮದಲ್ಲಿ ಬದಲಾವಣೆಗಳು ಸಂಭವಿಸುತ್ತವಷ್ಟೆ. ಅವುಗಳೊಡನೆ ಹೊಂದಿಕೊಂಡಾಗ, ವೃದ್ಧಾಪ್ಯವೂ ಸಾರವತ್ತಾದ ಅನುಭವವೆಂದು ಮನವರಿಕೆಯಾದಾಗ ಜೀವನ ಸುಖಮಯವಾಗಿ ತೋರುತ್ತದೆ.

ಅರವತ್ತು ವರ್ಷ ತುಂಬಿದವರನ್ನು ಸಾರಾಸಗಟಾಗಿ ವೃದ್ಧರ ವರ್ಗಕ್ಕೆ ಜಮಾ ಮಾಡುವುದುಂಟಷ್ಟೆ. ಮಾನವ ಮಾನವನಿಂದ ಸರಾಸರಿ ಆಯುರ್ಮಾನ ಹೆಚ್ಚಿರುವ ಈ ಕಾಲದಲ್ಲಿ, ಅರುವತ್ತಕ್ಕೊಂದು ಗಡಿರೇಖೆಯೆಳೆದು, ಅವರನ್ನು ಸರ್ಕಾರಿ ನೌಕರಿಯಿಂದ ನಿವೃತ್ತಿಗೊಳಿಸಿದರೂ, ಕಾಯಕದಿಂದ ವಿಮೋಚನೆಗೊಳಿಸುವುದು ಸೂಕ್ತವಲ್ಲ. ರೈತರಿಗೆ, ಕಾರ್ಮಿಕರಿಗೆ, ವಕೀಲರಿಗೆ, ವೈದ್ಯರಿಗೆ ಮತ್ತು ಸಾಹಿತಿಗಳಿಗೆ ನಿವೃತ್ತಿಯಿಲ್ಲವಷ್ಟೆ. ಅಂತೆಯೇ ಬೇರೆ ಬೇರೆ ವೃತ್ತಿಗಳಲ್ಲಿ ಯಶಸ್ಸು ಪಡೆದ ನಿವೃತ್ತರ ಸೇವೆಯನ್ನು ದೇಶಹಿತದಷ್ಟಿಯಿಂದ ಬಳಸಿಕೊಳ್ಳಬೇಕಾದ್ದು ಸಮಾಜದ ಹಾಗೂ ಸರ್ಕಾರದ ಕರ್ತವ್ಯ. ಗಟ್ಟಿಮುಟ್ಟಾದ ಪಿಂಚಣಿದಾರರು ಸಮಾಜಕ್ಕೆ ಪ್ರತಿಫಲ ನೀಡದೆ, ದೇಶದ ಆರ್ಥಿಕ ಶಕ್ತಿಯನ್ನು ಕರಗಿಸುತ್ತ ಸೋಮಾರಿ ಜೀವನವನ್ನು ನಡಸುವುದು ದೇಶದ್ರೋಹವಾಗುತ್ತದ, ದೈವನಿಂದೆಯಾಗುತ್ತದೆ. ಸರ್ಕಾರದಿಂದ ಅಥವಾ ಸಮಾಜದಿಂದ ಸಂಬಳ ಸಂಭಾವನೆಗಳನ್ನಪೇಕ್ಷಿಸದೆ, ಪಿಂಚಣಿಯನ್ನೇ ಸಂಬಳವೆಂದು ತಿಳಿದು, ಶಕ್ತಿಯಿರುವ ತನಕ ದುಡಿಯಬೇಕಾದ್ದು ಅವರ ಕರ್ತವ್ಯ, ದುಡಿಸಿಕೊಳ್ಳಬೇಕಾದ್ದು ಸರ್ಕಾರದ ಹಾಗೂ ಸಮಾಜದ ಕರ್ತವ್ಯ. ಇಂಥ ನಿಷ್ಕಾಮ ಕರ್ಮದಿಂದ ಕರ್ತೃವಿಗೆ ಮನಸ್ತೃಪ್ತಿ, ಸಮಾಜಕ್ಕೆ ಖರ್ಚಿಲ್ಲದ ಪ್ರಯೋಜನ. ಕಾಯಕ ಯಾವಾಗಲೂ ಸೃಜನಶೀಲವಾದದ್ದು. ಸೃಜನಶೀಲತೆಯಿಂದಾಗಿ ಮನಸ್ಸು ಚುರುಕಾಗಿರುತ್ತದೆ, ಆರೋಗ್ಯಪೂರ್ಣವಾಗಿರುತ್ತದೆ. ಮಾನಸಿಕ ಆರೋಗ್ಯ ಶರೀರವನ್ನು ಸುಸ್ಥಿತಿಯಲ್ಲಿರಿಸುತ್ತದೆ.

ಉದ್ಯೋಗದಿಂದ ನಿವೃತ್ತರಾಗಿ, ಕುಟುಂಬದ ಯಜಮಾನ್ಯವೂ ತಪ್ಪಿಹೋಗಿ, ಮಾಡಲು ಬೇರೆ ಕೆಲಸವಿಲ್ಲದಾಗ ಮನುಷ್ಯ ಬಹುಬೇಗನೆ ಮುದುಕನಾಗುತ್ತಾನೆ. ರುಚಿಅಭಿರುಚಿ ಮನೋಧರ್ಮ ಸಂಸ್ಕೃತಿಗಳಲ್ಲಿ ತೀರ ಭಿನ್ನರಾದ, ಮಾನವೀಯತೆಯಿಲ್ಲದ, ಸಜ್ಜನಿಕೆಯಿಲ್ಲದ, ತಮ್ಮನ್ನು ಗೌರವಿಸದ ಪ್ರೀತಿಸದ ಹೆಣ್ಣುಮಕ್ಕಳು ಬೇರೆ ಮನೆಗಳಿಂದ ಬಂದಾಗ, ಮನೆಯ ಹಿರಿಯರನ್ನು ಖಿನ್ನತೆ ವೈಕಲ್ಯ ವಿಷಣ್ಣತೆಗಳು ಆವರಿಸಿಕೊಳ್ಳುತ್ತವೆ. ಅಂಥ ಸಂದರ್ಭದಲ್ಲಿ ಹಿಂದೆ ತಾನು ಬದುಕಿದ ಮನೆಯೇ ನರಕವಾಗುತ್ತದೆ. ಅವರು ಪ್ರತ್ಯೇಕವಾಗಿ ವಾಸಿಸುವುದಾದರೆ ಎಲ್ಲರಿಗೂ ಸುಖವಾಗುತ್ತದೆ. ವೃದ್ಧಾಪ್ಯದಲ್ಲಿ ಔಷಧಗಳೇ ವಿಷವಾಗುವುದರಿಂದ, ಅವನ್ನು ಕಡಮೆ ಮಾಡುವುದೊಳ್ಳೆಯದು. ಮಿತಿಯಾದ ಯುಕ್ತಾಹಾರ, ಧ್ಯಾನ, ಆಲೋಚನೆ, ಓದು, ವ್ಯಾಯಾಮ, ತಿರುಗಾಟ, ಯೋಗಾಸನ ಮತ್ತು ಶಿಸ್ತಿನ ಜೀವನ ಮುಪ್ಪಿಗೆ ಚೈತನ್ಯವನ್ನು ನೀಡುತ್ತವೆ. ಸಂಗೀತ ಪ್ರವಾಸಾದಿ ಮನರಂಜನ ಕಾರ್ಯಕ್ರಮಗಳು ವಿಷಣ್ಣತೆಯನ್ನು ದೂರ ಓಡಿಸುತ್ತವೆ. ಮುದುಕರಿಗೆ ಬೇಕಾದ್ದು ಸಮಾಜ ಮತ್ತು ಬಂಧುಗಳ ಪ್ರೀತಿಯೇ

ಹೊರತು ಅನುಕಂಪೆಯಲ್ಲ, ನಿಜ. ಆದರೂ ಅವರ ಕ್ಷೇಮ ಅವರ ಮಾನಸಿಕ ಆರೋಗ್ಯ ಮತ್ತು ಆತ್ಮಶಕ್ತಿಯನ್ನವಲಂಬಿಸಿದೆಯೆಂಬುದಂತು ದಿಟ.

ವೃದ್ಧರ ಸಮಸ್ಯೆಗಳ ಕಡೆಗೆ ಸರ್ಕಾರ ಹಾಗೂ ಸಮಾಜಗಳ ನಿಗಾ ಸೆಳೆಯುವ, ವೃದ್ಧಾಪ್ಯ ಭಾರವಲ್ಲ, ಸ್ವಾದನೀಯ ಅನುಭವವೆಂದು ಮನದಟ್ಟು ಮಾಡಿಕೊಡುವ ವಾತಾವರಣವನ್ನು ಮೂಡಿಸಲು, ಪ್ರಪಂಚ ಸಂಸ್ಥೆ ೧೯೯೮–೯೯ ರ ನಡುವಣ ಅವಧಿಯನ್ನು ವೃದ್ಧರ ಸಂವತ್ಸರವೆಂದು ಘೋಷಿಸಿದೆ. ವೃದ್ಧರ ಸ್ವಭಾವ ಆಗತ್ಯ ಸಮಸ್ಯೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೆಲವು ಸಲಹೆಗಳನ್ನಿಲ್ಲಿ ಸೂಚಿಸಲಾಗಿದೆ. ಸರಕಾರಕ್ಕೆ ಆರ್ಥಿಕ ನಷ್ಟ ಸಂಭವಿಸದಂತೆ, ಶಕ್ತರಾದವರಿಗೆ ಅವರ ಸಾಮರ್ಥ್ಯಕ್ಕನುಗುಣವಾದ ಕಾಯಕವನ್ನು ಕಲ್ಪಿಸತಕ್ಕದ್ದು. ಅನುಕೂಲವಿಲ್ಲದವರಿಗೆ ವೃದ್ಧಾಪ್ಯವೇತನವನ್ನು ಮಂಜೂರು ಮಾಡಬೇಕು. ಹಳ್ಳಿಗರಿಗೆ ಮತ್ತು ಮಹಿಳೆಯರಿಗೆ ಆರೋಗ್ಯಕರವಾದ ಅಶನವಸತಿ ಸೌಕರ್ಯಗಳನ್ನೊದಗಿಸಬಹುದು. ವೈದ್ಯಕೀಯ ಸೌಲಭ್ಯಗಳು ಉಚಿತವಾಗಿ ದೊರೆಯುವಂತಾಗಬೇಕು. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ರೂಪಿಸಬೇಕು. ವೃದ್ಧರು ಮಕ್ಕಳು ಮೊಮ್ಮಕ್ಕಳೊಡನೆ ವಾಸಿಸುವ ಅವಕಾಶವಿದ್ದರೆ ಮೇಲು ; ಇಲ್ಲವಾದರೆ ಮಾದರಿ ವೃದ್ಧಾಶ್ರಮಗಳನ್ನು ಏರ್ಪಡಿಸಬೇಕು. ಖಾಸಗಿ ಸಂಸ್ಥೆಗಳು, ಸ್ವಯಂಸೇವಕ ಸಂಘಗಳು ಮತ್ತು ಶ್ರೀಮಂತರು ವೃದ್ಧರಿಗೆ ಸರ್ವವಿಧವಾದ ನೆರವು ನೀಡುವಂತೆ ಪ್ರೋತ್ಸಾಹಿಸತಕ್ಕದ್ದು. ಹಳ್ಳಿಗಾಡು ಸೇರಿದಂತೆ ಅನುಕೂಲ ದೂರದಲ್ಲಿ ವೃದ್ಧಾಸ್ಪತ್ರೆಗಳನ್ನೊ, ಅಸ್ಪತ್ರೆಭಾಗಗಳನ್ನೊ ವ್ಯವಸ್ಥೆಗೊಳಿಸಬೇಕು ; ವೃದ್ಧ ವೈದ್ಯ ಸಂಶೋಧನೆಯು ಮತ್ತು ಬೋಧನೆಯು ವಿಷಯವಾಗತಕ್ಕದ್ದು. ದೂರದರ್ಶನದಲ್ಲಿ ವೃದ್ಧರಿಗಾಗಿಯೇ ಸಂಗೀತ ಪ್ರಧಾನವಾದ ಮನರಂಜನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು. ಪ್ರವಾಸಕ್ಕನುಕೂಲವಾಗುವಂತೆ, ಎಲ್ಲ ಬಗೆಯ ವಾಹನಗಳಲ್ಲಿ ರಿಯಾಯಿತಿ ದರಗಳನ್ನು ಘೋಷಿಸಬೇಕು ; ಅಷ್ಟೇ ಅಲ್ಲ, ಪ್ರತ್ಯೇಕ ಸ್ಥಾನಗಳನ್ನು ಕಾದಿರಿಸಬೇಕು. ಸಿನಿಮಾ ನಾಟಕ ಸಂಗೀತ ನೃತ್ಯ ಮೊದಲಾದ ಮನರಂಜನ ಕಾರ್ಯಕ್ರಮಗಳಿಗೂ ರಿಯಾಯಿತಿಯ ಏರ್ಪಾಡಿರಬೇಕು. ಸಮಾಜಕಲ್ಯಾಣ ವಿಭಾಗದಲ್ಲಿ ವೃದ್ಧ ಕ್ಷೇಮ ವಿಭಾಗವನ್ನು ತೆರೆಯಬೇಕು. ಒಟ್ಟನಲ್ಲಿ ವೃದ್ಧರು ಒಂಟಿತನದ ಬೇಸರದಿಂದ, ಹಲವು ಬಗೆಯ ಕೊರತೆಗಳ ಚಿಂತೆಯಿಂದ, ಸಮಾಜ ಹಾಗೂ ಕುಟುಂಬದ ನಿರ್ಲಕ್ಷ್ಯಕ್ಕೊಳಗಾದ ಸಂಕಟದಿಂದ ಮತ್ತು ವಿಷಣ್ಣತೆಯಿಂದ ನರಳದಂತೆ, ಮುಪ್ಪು ವಿಶ್ರಾಂತಿಯ ಮತ್ತು ತಪಸ್ಸಿನ ಸ್ಥಿತಿಯೆಂಬುದನ್ನರಿತು, ನಿರಾಳವಾಗಿ ಬದುಕತಕ್ಕಂಥ ಸನ್ನಿವೇಶ ನಿರ್ಮಾಣ ಅತ್ಯಗತ್ಯವೆಂಬುದನ್ನು ಈ ಸಂದರ್ಭದಲ್ಲಿ ಸರ್ಕಾರ-ಸಮಾಜ ಮನವರಿಕೆ ಮಾಡಿಕೊಂಡು ಕೃತಸಂಕಲ್ಪರಾಗಬೇಕಾಗಿದೆ.

ಏಕತೆಯೆ ವರ ಪ್ರತ್ಯೇಕತೆಯೆ ಶಾಪ

ಕರ್ನಾಟಕ ಏಕೀಕರಣವಾಗಿ ನಲವತ್ತೆರಡು ವರ್ಷ ಸಂದಿವೆ. ಅದಕ್ಕಾಗಿ ಉತ್ತರ ಕರ್ನಾಟಕದ ಬಹುಮಂದಿ, ಹಳೆಯ ಮೈಸೂರಿನ ಕೆಲವು ಮಂದಿ ಶ್ರಮಿಸಿದ್ದಾರೆ. ಅವರ ಪೈಕಿ ನಿಜಲಿಂಗಪ್ಪನವರು ಮುಖ್ಯರು. ಆ ಸಂದರ್ಭದಲ್ಲಿ ಅವರು ಮಾಡಿದ ತ್ಯಾಗ ಅಪಾರ. ಇಂಡಿಯಾದಲ್ಲಿಯೇ ಹಳೆಯ ಮೈಸೂರು ಪ್ರಗತಿಪರ ಸಂಸ್ಥಾನವಾಗಿದೆ ; ಕರ್ನಾಟಕಕ್ಕೆ ಸೇರಲಿರುವ ಭಾಗಗಳು ತುಂಬ ಹಿಂದುಳಿದಿವೆ ; ಎರಡು ಭಾಗಗಳು ಒಟ್ಟಿಗೆ ಸೇರಿದಾಗ ಹಳೆಯ ಮೈಸೂರಿನ ಪ್ರಗತಿಗೆ ಧಕ್ಕೆಯೊದಗುತ್ತದೆ ; ಒಂದು ಮತಕ್ಕೆ ಸೇರಿದವರ ಪ್ರಾಬಲ್ಯ ಹೆಚ್ಚುತ್ತದೆ–ಈ ಕಾರಣಗಳಿಂದ ಹಳೆಯ ಮೈಸೂರಿನ ಹಲವು ನಾಯಕರು ಜಾತಿಭೇದವಿಲ್ಲದೆ ಏಕೀಕರಣವನ್ನು ವಿರೋಧಿಸಿದ್ದಲ್ಲದೆ, ದ್ವಿಕರ್ನಾಟಕ ತತ್ತ್ವವನ್ನು ಎತ್ತಿ ಹಿಡಿದದ್ದುಂಟು.

ಏಕೀಕರಣವಾದ ನಂತರ, ರಾಜ್ಯದ ಬಹುಪಾಲು ಆದಾಯವನ್ನು ಉತ್ತರ ಕರ್ನಾಟಕದ ಉನ್ನತಿಗಾಗಿ ಖರ್ಚು ಮಾಡಲಾಗುತ್ತಿದೆಯೆಂಬ ಗೊಣಗಿದ್ದರೂ, ಹಳೆಯ ಮೈಸೂರು ಜನ ಭಾವುಕತೆಯನ್ನು ತ್ಯಜಿಸಿ, ನೂತನ ವಾತಾವರಣಕ್ಕೆ ಹೊಂದಿಕೊಂಡಿದ್ದಾರೆಂಬುದಂತು ಸತ್ಯ. ಹಿಂದುಳಿದ ಭಾಗಗಳಿಗೆ ವಿಶೇಷ ಸವಲತ್ತು ನೀಡಬೇಕೆನ್ನುವ ವಾದ ಸರಿಯೆನಿಸಿದರೂ, ಮುಂದುವರಿದ ಪ್ರದೇಶದ ಪ್ರಗತಿಯ ವೇಗದ ಬಗ್ಗೆ ಅಸೂಯೆ ಪಡುವುದು ಯೋಗ್ಯವಲ್ಲ. ಇಡೀ ರಾಜ್ಯದ ಹಿತದ ದೃಷ್ಟಿಯಿಂದ ಮಾತ್ರವಲ್ಲ, ಹಿಂದುಳಿದ ಪ್ರದೇಶದ ದೃಷ್ಟಿಯಿಂದಲೂ ಕೆಲವು ಪ್ರದೇಶಗಳ ಮುಂದುವರಿಕೆ ಅತ್ಯಗತ್ಯ. ರೋಗಿಗೆ ವಿಶೇಷೋಪಚಾರ ಬೇಕು, ನಿಜ ; ಆದರೆ ನಿರೋಗಿಯ ಆರೋಗ್ಯನಾಶದಿಂದ ರೋಗಿಯ ಉದ್ಧಾರ ಸಾಧ್ಯವಾಗದು. ಹಳೆಯ ಕಾಯಿಲೆ ವಾಸಿಯಾಗಲು ಹೆಚ್ಚು ದಿನ ಬೇಕು. ಅಲ್ಲಿಯ ತನಕ ; ನಿರೋಗಿಯ ಕುಟುಂಬದ ಜನ ಉಪವಾಸವಿರಬೇಕೆ ? ಭೌಗೋಲಿಕ ಹಾಗೂ ಐತಿಹಾಸಿಕ ಕಾರಣಗಳಿಂದಾಗಿ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆಯುತ್ತಿರುವ ಹಳೆಯ ಮೈಸೂರಿನ ನಗರಗಳ ಬಗ್ಗೆಯೂ ಅವಜ್ಞೆ ಸಲ್ಲದು. ವಿದೇಶೀಯರು ಬೆಂಗಳೂರನ್ನಪೇಕ್ಷಿಸುತ್ತಾರೆಂಬುದನ್ನು ವಿವೇಕಿಗಳು ಗಮನಿಸಬೇಕು.

ತಾಯಿ ಹಾಲು ಕೊಡುವುದು ಮಗು ಅತ್ತಾಗಲೇ. ತಮ್ಮ ಭಾಗದ ದುಸ್ಥಿತಿಯನ್ನು ಕುಂದುಕೊರತೆಗಳನ್ನು ಮೇಲಿಂದ ಮೇಲೆ ಸರ್ಕಾರದ ಮತ್ತು ಸಾರ್ವಜನಿಕರ ಗಮನಕ್ಕೆ ತರಬೇಕಾದ್ದು, ಗುಡುಗಬೇಕಾದ್ದು ತಪ್ಪಲ್ಲ. ಅದಕ್ಕಾಗಿ ಹಳೆಯ ಮೈಸೂರಿನವರನ್ನು, ಅಧಿಕಾರಿಗಳನ್ನು ದೂರಬೇಕಾಗಿಲ್ಲ. ಏಕೀಕರಣವಾದನಂತರ ರಾಜ್ಯದ ಆದಾಯವೆಷ್ಟು, ಉತ್ತರ ಮತ್ತು ದಕ್ಷಿಣ ಕರ್ನಾಟಕಗಳಲ್ಲಿ ಯಾವ ಯಾವ ಬಾಬತ್ತಿಗೆ ಎಷ್ಟೆಷ್ಟು ಹಣ

ಖರ್ಚಾಗುತ್ತಿದೆ? ಎಷ್ಟು ಶಾಲಾ ಕಾಲೇಜು ಮತ್ತು ಆರೋಗ್ಯ ಕೇಂದ್ರಗಳನ್ನು ತೆರೆಯ ಲಾಗಿದೆ? ನೀರಾವರಿಗಾಗಿ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಎಷ್ಟು ಹಣ ಖರ್ಚಾಗಿದೆ? ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತಾರ ದಾಮಾಶಯದ ಪ್ರಕಾರ ಹಣ ಹಂಚಿಕೆಯಾಗುತ್ತಿದೆಯೆ ಇಲ್ಲವೆ?—ಈ ಅಂಕಿ ಅಂಶಗಳ ಮೂಲಕ ಆ ಪ್ರದೇಶ ಕ್ಕಾಗಿರುವ ಅನ್ಯಾಯವನ್ನು ಪ್ರತಿಭಟಿಸಬೇಕಾದ್ದು ನ್ಯಾಯ.

ಆಯಾಯಾ ಪ್ರದೇಶಗಳ ಜಿಲ್ಲೆಯ ಅಥವಾ ತಾಲ್ಲೂಕುಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದವರು ಸಂಸದೀಯರು ಮತ್ತು ಶಾಸಕರು. ಯಾವುದಾದರೂ ಜಿಲ್ಲೆ ಅಥವಾ ತಾಲ್ಲೂಕು ಹಿಂದುಳಿದಿದ್ದರೆ, ಅದಕ್ಕೆ ಅವರೇ ಪೂರ್ಣ ಜವಾಬ್ದಾರರು. ಐಷಾರಾಮ ಜೀವನ ನಡಸಲಿಕ್ಕೆಂದು ಅವರನ್ನು ಜನ ಆರಿಸಿ ಕಳಿಸಿಲ್ಲವಷ್ಟೆ. ಬೇರೆ ಕಡೆಯ ಶಾಸಕರಿಗಿಂತ ಸಂಖ್ಯೆಯಲ್ಲಿಯೂ ಉತ್ತರದವರೇ ಹೆಚ್ಚಲ್ಲವೆ? ಮಂತ್ರಿಗಳೂ ಅಷ್ಟೇ. ಅಷ್ಟೇ ಅಲ್ಲ, ಇಲ್ಲಿಯವರೆಗೆ ಆದ ಮುಖ್ಯಮಂತ್ರಿಗಳ ಪೈಕಿ ಹಳೆಯ ಮೈಸೂರಿನವರು ಮೂವರು ತಾನೆ! ನಿಜಲಿಂಗಪ್ಪನವರು ಎರಡು ಕಡೆಯೂ ಸಲ್ಲುವಂಥವರು. ಉಳಿದವ ರೆಲ್ಲ ಅಲ್ಲಿಯವರಲ್ಲವೆ? ಇಷ್ಟೆಲ್ಲ ಅನುಕೂಲಾವಕಾಶಗಳಿರುವಾಗ, ಕುಂದುಕೊರತೆಗಳಿಗೆ ಅಲ್ಲಿಯ ಶಾಸಕರೇ ಜವಾಬ್ದಾರರಾಗಿರುವಾಗ, ಯಾವು ಯಾವುದೋ ನೆಪವೆತ್ತುಕೊಂಡು ಹಳೆಯ ಮೈಸೂರನ್ನು ಟೀಕಿಸುವ ಮತ್ತು ಪ್ರತ್ಯೇಕತಾಭಾವವನ್ನು ಬಿತ್ತುವ ಹವಣು ಸರಿಯಲ್ಲವೆಂದೇ ವಿಷಾದದಿಂದ ಹೇಳಬೇಕಾಗಿದೆ. ಜಾತೀಯ ಮತೀಯ ಮೂಲಭೂತ ಭಾವನೆಯನ್ನು ಬಿಟ್ಟು, ಒಬ್ಬಳೇ ತಾಯಿಯ ಮಕ್ಕಳಂತೆ ನಾವೆಲ್ಲರೂ ವರ್ತಿಸುವು ದಾದರೆ ಏರುಪೇರುಗಳು ಒಡಕು ಬಿರುಕುಗಳು ಮಾಯವಾಗಿ, ಭಾವೈಕ್ಯ ಮತ್ತು ಆತ್ಮೀಯತೆಗಳು ಸರ್ವತ್ರ ಪರಿಮಳಿಸುವುದರಲ್ಲಿ ಸಂದೇಹವಿಲ್ಲ.

ಕೊಡಗಿನ ಸಮಸ್ಯೆಯೂ ಇಂಥದೇ ಆದ್ದರಿಂದ ಪೂರ್ವೋಕ್ತ ವಿಚಾರಗಳು ಅಲ್ಲಿಗೂ ಅನ್ವಯಿಸುತ್ತವೆ. ಕಾರ್ಯಪ್ಪ ತಿಮ್ಮಯ್ಯರಂಥ ಮಹಾಸೇನಾನಿಗಳನ್ನು, ಮಹಾವೀರರನ್ನು ಪಡೆದದ್ದೇ ಕರ್ನಾಟಕದ ಪುಣ್ಯ. ಅವರು ನಮ್ಮವರು, ಕನ್ನಡಿಗರು. ಅವರ ಕೊಡಗನ್ನು ಕರ್ನಾಟಕದಿಂದ ಹೊರಗಿಡುವುದೆಂತು? ಏನು ಬೆಲೆ ತೆತ್ತಾದರೂ ಕೊಡಗನ್ನು ಕರ್ನಾಟಕದಲ್ಲುಳಿಸಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ. ಅಲ್ಲಿಯ ನಾಲ್ಕೈದು ಲಕ್ಷ ಜನರಲ್ಲಿ ಕೊಡವರ ಸಂಖ್ಯೆ ಎಂಬತ್ತುಸಾವಿರ ಮಾತ್ರ. ಎಂಬತ್ತು ಸಾವಿರ ಜನರಿಗೆ, ಒಂದೊಂದು ಜಾತಿಗೆ, ಒಂದೊಂದು ಭಾಷೆಯ ಜನರಿಗೆ ಒಂದೊಂದು ರಾಜ್ಯ ನಿರ್ಮಾಣ ಮಾಡುವುದಾದರೆ ಭಾರತಿಯ ದೇಹವನ್ನು ಸಾವಿರ ಹೋಳಾಗಿ ಕತ್ತರಿಸಬೇಕಾಗುತ್ತದೆ. ಆಗ ಇಂಡಿಯಾ ಇಲ್ಲವಾಗುತ್ತದೆ, ಕೊಡಗೂ ಇಲ್ಲವಾಗುತ್ತದೆ. ಕೊಡಗಿನ ಲೆಕ್ಕಾಚಾರದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಆಳಿದ ದಕ್ಷಿಣ ಕನ್ನಡದ ತುಳು ಜನ ಪ್ರತ್ಯೇಕ ರಾಜ್ಯ ಕೇಳಲು ಹೆಚ್ಚು ಅರ್ಹರೆಂದೇ ಹೇಳಬೇಕಾಗು ತ್ತದೆ. ಅಮೆರಿಕೆಯ ವಿವಾಹ ವಿಚ್ಛೇದನ ಪದ್ಧತಿಯಷ್ಟು ಇಲ್ಲಿಯ ರಾಜ್ಯಗಳ ವಿಚ್ಛೇದನ ಸುಲಭವಾಗಬಾರದು, ಕ್ಷುಲ್ಲಕವಾಗಬಾರದು. ಏಕತೆಯೆ ವರ; ಪ್ರತ್ಯೇಕತೆಯೆ ಶಾಪ.

ನಾವೆಲ್ಲರೂ ದೊಡ್ಡ ರಾಜ್ಯದ ದೊಡ್ಡವರಾಗೋಣ, ಸಣ್ಣ ರಾಜ್ಯದ ಸಣ್ಣವರಾಗುವುದು ಬೇಡ; ಭಾರತೀಯರಾಗುಳಿಯುವ ಪುಣ್ಯವಂತರಾಗೋಣ.

ಲಿಪಿ ಸಮಸ್ಯೆಯ ಬಗ್ಗೆಯೂ ಅಲ್ಲಿ ಇಲ್ಲಿ ವಾದವೆದ್ದಿದೆ. ಈ ಮಹಾರಾಷ್ಟ್ರದ ಎಲ್ಲ (ಸುಮಾರು ೧೬೦೦) ಭಾಷೆಗಳಿಗೂ ಒಂದೇ ಲಿಪಿಯಾದರೆ ಮೇಲು. ಅದಿಲ್ಲ, ಆಯಾಯ ಪ್ರಾದೇಶಿಕ ಭಾಷೆಗಳ ಲಿಪಿಗಳನ್ನು ಅಲ್ಲಲ್ಲಿಯ ಭಾಷೆಗಳಿಗೆ ಬಳಸಿಕೊಳ್ಳುವುದಾದರೆ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಹಾಗೂ ಆಡಳಿತಾತ್ಮಕವಾಗಿ ಸಾಮರಸ್ಯ ಮತ್ತು ಭಾವೈಕ್ಯ ಸಮನಿಸುತ್ತವೆ; ಇಲ್ಲವಾದರೆ ಗೊಂದಲ ಅನೈಕ್ಯ ಅರಾಜಕತೆ ಹಾಗೂ ಸಂಘರ್ಷ ಸಿಡಿಯುತ್ತವೆ. ಜಗತ್ತಿನ ಹಲವು ಜನಾಂಗಗಳು ತಂತಮ್ಮ ಭಾಷೆಗಳಿಗೆ ರೋಮನ್ ಲಿಪಿಯನ್ನು ಬಳಸಿಕೊಂಡಿಲ್ಲವೆ? ಸಾವಿರಾರು ವರ್ಷಗಳಿಂದ ಒಟ್ಟಿಗಿರುವ ಸೋದರ ಹಾಗೂ ಜ್ಞಾತಿ ಭಾಷೆಗಳು ಪ್ರಾದೇಶಿಕ ಭಾಷೆಗಳ ಲಿಪಿಗಳನ್ನೇಕೆ ಬಳಸಿಕೊಳ್ಳಬಾರದು? ಈಗಂತು ಅದೇ ರೂಢಿ ಜಾರಿಯಲ್ಲಿದೆಯೆಂಬುದು ತೃಪ್ತಿಯ ಸಂಗತಿ.

*

ಕೃಪಾಂಕ ಪ್ರದಾನ

ನನಗೆ ಅರವತ್ತು ವರ್ಷಗಳಿಂದ ಭಾರತೀಯ ಶಿಕ್ಷಣ ಪದ್ಧತಿಯ ಅನುಭವವಿದೆ. ನಾನು ಮೊದಲು ನೌಕರಿಗೆ ಸೇರಿದ್ದೇ ಹಿಂದಿನ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ಪರೀಕ್ಷಾ ವಿಭಾಗದಲ್ಲಿ. ಕೆಲವು ವರ್ಷ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಧಿಕಾರಿಯಾಗಿದ್ದೆ. ಕರ್ನಾಟಕ ಸರ್ಕಾರದ ಪದವಿಪೂರ್ವ ಶಿಕ್ಷಣ ಮಂಡಲಿಯ ಅಧ್ಯಕ್ಷನೂ ಆಗಿದ್ದೆ. ಈ ತನಕ ಕೃಪಾಂಕ ಪ್ರದಾನ ರೂಢಿಯಲ್ಲಿಲ್ಲದ ಪರೀಕ್ಷೆಗಳೇ ನನ್ನ ಗಮನಕ್ಕೆ ಬಂದಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಕೃಪಾಂಕಗಳ ದಾನ ನಡೆಯುತ್ತಲೇ ಇದೆ.

ಪರೀಕ್ಷೆಗಳಲ್ಲಿ ಪಠ್ಯದಾಚೆಗಿನ ವಿಷಯವನ್ನು ಕುರಿತಂತೆ ಪ್ರಶ್ನೆ ಬಂದದ್ದಾದರೆ, ಅದಕ್ಕೆ ನಿಗದಿಪಡಿಸಿರುವ ಅಂಕಗಳನ್ನು ನೀಡುವ ನೆಪದಲ್ಲಿ ವಿದ್ಯಾರ್ಥಿಗಳಿಗೆ ಕೃಪೆ ತೋರಿಸಲಾಗುತ್ತದೆ. ವೈದ್ಯ ಪರೀಕ್ಷೆಗಳಲ್ಲಿ ನಿರ್ದಿಷ್ಟ ಕೃಪಾಂಕಗಳನ್ನು ನೀಡುವ ಸೌಲಭ್ಯವನ್ನು ಸ್ಟಾಚ್ಯೂಟ್‌ಗಳಲ್ಲಿಯೇ ಕಡ್ಡಾಯಗೊಳಿಸಲಾಗಿದೆ. ಕೆಲವು ಪರೀಕ್ಷೆಗಳಲ್ಲಿ ಫಲಿತಾಂಶಗಳನ್ನು ಉತ್ತಮಪಡಿಸುವ ಸಲುವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಸಾಕಷ್ಟು ಅಂಕಗಳನ್ನು ತುಂಬುವುದುಂಟು. ಫೇಲಾದವರಿಗೆ ಮಾತ್ರವೇ ಕೃಪಾಂಕಗಳನ್ನು ನೀಡುವ ಪರಿಪಾಠವೂ ಉಂಟು. ಅಂದಮೇಲೆ ಕೃಪಾಂಕ ಪ್ರದಾನ ಶೈಕ್ಷಣಿಕ ನೀತಿಯ ಭಾಗವಾಗಿದ್ದು, ಪರೀಕ್ಷಾ ವಿಧಾನದ ಒಡಲಿನಲ್ಲಿಯೇ ಸೇರಿಕೊಂಡಿದೆಯೆಂದು ಹೇಳಬಹುದಾಗಿದೆ.

ಗ್ರಾಮೀಣ ಪರಿಸರದಿಂದ ಬಂದ ವಿದ್ಯಾರ್ಥಿ ಅಥವಾ ಅಭ್ಯರ್ಥಿಗಳಿಗೆ ಕೃಪಾಂಕ ಪ್ರದಾನದ ವಿಶೇಷ ಸೌಲಭ್ಯವನ್ನು ಕಲ್ಪಿಸಿದ್ದೇಕೆ? ಶ್ರೀ ಬಂಗಾರಪ್ಪ ಮತ್ತು ಶ್ರೀ ವೀರಪ್ಪಮೊಯಿಲಿಯವರು ಈ ಪದ್ಧತಿಯನ್ನು ಜಾರಿಗೆ ತಂದ ಮೊದಲಿಗರು. ನಗರ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ನಡುವಣ ಅಸಮಾನತೆಯನ್ನು ನಿವಾರಿಸುವುದೇ ಕೃಪಾಂಕ ಪದ್ಧತಿಯ ಹಿನ್ನೆಲೆಯಲ್ಲಿರುವ ತತ್ತ್ವ. ಶಿಕ್ಷಣ ಯಶಸ್ವಿಯಾಗಿ ಫಲಪ್ರದವಾಗಬೇಕಾದರೆ, ಆನುವಂಶೀಯ ಹಿನ್ನೆಲೆ, ವಾತಾವರಣ ಭೂಮಿಕೆ, ಆರೋಗ್ಯ ಸಾಧನ ಮತ್ತು ಕನಿಷ್ಠ ಸೌಲಭ್ಯಗಳ ನಿರ್ಮಾಣ ಅತ್ಯಗತ್ಯ. ನಿರಕ್ಷರ ಕುಕ್ಷಿಗಳ ಹೊಟ್ಟೆಯಲ್ಲಿ, ಕುರಿ ಮೇಕೆಗಳ ಕೊಪ್ಪಲಲ್ಲಿ, ಬಡತನದಲ್ಲಿ, ಪುಷ್ಟಿಕರವಾದ ಆಹಾರ ದೊರೆಯದ ಮನೆಯಲ್ಲಿ, ದೀಪಕ್ಕೂ ಗತಿಯಿಲ್ಲದ ಗುಡಿಸಲಲ್ಲಿ ಹುಟ್ಟಿದ ಮಕ್ಕಳಿಗೆ ವಿದ್ಯೆ ಹೇಗೆ ಬರಬೇಕು? ದಿನವೂ ಶಾಲೆ ಸೇರಬೇಕಾದರೆ ಎಂಟು-ಹತ್ತು ಮೈಲಿ ನಡೆಯಬೇಕು; ಕೆಲಸವಿದ್ದ ದಿನ ಶಾಲೆಗೆ ಹೋಗುವಂತಿಲ್ಲ; ರಜಾ ದಿನಗಳಲ್ಲಂತು ಆಡುಕುರಿ ಮೇಯಿಸಬೇಕು, ಹೊಲದಲ್ಲಿ ಉಳಬೇಕು. ಕುರಿಮಂದೆಯೊಳಗೆ ಬೆಳೆದ ಮರಿಹುಲಿಯ ಪರಿಸ್ಥಿತಿ ಅವರದು. ಪಟ್ಟಣಗಳಲ್ಲಿ ಹುಟ್ಟಿದ ಮಕ್ಕಳು ಹಳ್ಳಿಯ ಮಕ್ಕಳ ರಿಕ್ತಸ್ಥಿತಿಯನ್ನು ಹಾಗೂ ದೈಹಿಕ ಶ್ರಮವನ್ನು ಅನುಭವಿಸಬೇಕಾಗಿಲ್ಲ. ಸಂಸ್ಕೃತಿಯ ವಾತಾವರಣದಲ್ಲಿ ಹುಟ್ಟಿ, ವಿದ್ಯಾವಂತ ತಂದೆತಾಯಿಯರ ಹಾಗೂ ಅಜ್ಜಂದಿರ ಹೆಗಲನ್ನೇರಲಿರುವ ಅವರಿಗೆ ತೊಟ್ಟಿಲಿಂದಲೇ ಏಕೆ-ಗರ್ಭಕೋಶದಿಂದಲೇ—ಶಿಕ್ಷಣ ಪ್ರಾರಂಭವಾಗುತ್ತದೆ. ಅವರು ಕೊರತೆಯೆಂಬುವದನ್ನೇ ಕಾಣರು. ದೇಶಾಭ್ಯುದಯ ಮತ್ತು ಸಾಮಾಜಿಕ ನ್ಯಾಯವನ್ನು ಕುರಿತು ಮಾತಾಡುವವರು ಈ ಅಂಶಗಳನ್ನು ತೀವ್ರವಾಗಿ ಗಮನಿಸಬೇಕಾಗಿದೆ. ನ್ಯಾಯಾಧೀಶರು ಒಂದು ವಾರವಾದರೂ ಕುಗ್ರಾಮಗಳಲ್ಲಿ ವಾಸಿಸುವುದಾದರೆ ಹಳ್ಳಿಯ ಮಕ್ಕಳ ಅನಾಥ ಪರಿಸ್ಥಿತಿ ಮನವರಿಕೆಯಾದೀತು; ಮಾನವೀಯತೆಯ ಅರಿವಾದೀತು.

ಪಟ್ಟಣದ ಮಕ್ಕಳು ಎಲ್ಲಿದ್ದರೂ, ಎತ್ತ ಹೋದರೂ ಅವರಿಗರಿವಿಲ್ಲದಂತೆಯೇ ಜ್ಞಾನವರ್ಧಕ ಸಂಗತಿಗಳು ಅವರ ಕಿವಿಗಳನ್ನು ತಾಕುತ್ತವೆ, ಕಣ್ಣಿಗೆ ಬೀಳುತ್ತವೆ. ಜ್ಞಾನಾರ್ಜನೆ ಅವರ ಜೀವನದ ಪ್ರಧಾನೋದ್ದೇಶವಾಗಿರುತ್ತದೆ. ಹಳ್ಳಿಯ ಮಕ್ಕಳಿಗೆ ಈ ಯಾವ ಅನುಕೂಲಾವಕಾಶಗಳೂ ಇಲ್ಲ. ಬಿಡುವು ವೇಳೆಯಲ್ಲಿ ಮಾತ್ರ ಅವರನ್ನು ಅಪ್ಪ ಶಾಲೆಗಟ್ಟುತ್ತಾನೆ; ಮಳೆ ಗಾಳಿ ಚಳಿಬಿಸಿಲುಗಳಲ್ಲಿ ಕುರಿ ದನ ಕಾಯುವ ಶ್ರಮ ತಪ್ಪುತ್ತದೆ, ತಮ್ಮ ಸಮವಯಸ್ಸಿನ ಮಕ್ಕಳು ಸ್ಕೂಲಿಗೆ ಹೋಗುತ್ತವೆ; ಅವರಂತೆ ತಾವು ಶಾಲೆಗೆ ಹೋಗಬೇಕೆಂಬ ಭಾವನೆಯಿಂದ ಅವರು ಸ್ಕೂಲಿಗೆ ಹೋಗುತ್ತಾರೆಯೇ ಹೊರತು ಅವರಿಗೆ ಬೇರಾವ ಉದ್ದೇಶವೂ ಇಲ್ಲ. ಹಳ್ಳಿಯ ಶಾಲೆಗಳಂತು ಕೊಟ್ಟಿಗೆಗಳು. ಹಲವು ಉಪಾಧ್ಯಾಯರ ಶಕ್ತಿ ಸಾಮರ್ಥ್ಯ ಪ್ರಾಮಾಣಿಕತೆ ಕರ್ತವ್ಯಶ್ರದ್ಧೆಗಳೂ ಪ್ರಶ್ನಾತೀತವಲ್ಲ. ಇಷ್ಟೊಂದು ಸಾಮಾಜಿಕಾರ್ಥಿಕ ಶೈಕ್ಷಣಿಕ ತಾರತಮ್ಯವಿದ್ದರೂ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನಗಳು ಎಲ್ಲ ಮಕ್ಕಳಿಗೂ ಏಕಪ್ರಕಾರ

ವಾಗಿರುವುದರಿಂದ, ಹಳ್ಳಿಯ ಮಕ್ಕಳು ಪಟ್ಟಣದ ಮಕ್ಕಳೊಂದಿಗೆ ಸ್ಪರ್ಧಿಸಬಲ್ಲರೆ ? ಏಗಬಲ್ಲರೆ ? ಇದು ಸಾಮಾಜಿಕ ಅನ್ಯಾಯವಲ್ಲವೆ ? ಪಟ್ಟಣವರ್ಗ ಗ್ರಾಮೀಣ ವರ್ಗವನ್ನು ಶೋಷಿಸುವ ಮಾರ್ಗವಲ್ಲವೆ ? 'ಸರ್ವರಿಗೆ ಸಮಬಾಳು' ಎನ್ನುವ ಯುಗದಲ್ಲಿ ಹಿಂದುಳಿದವರಿಗೆ ಹಾಗೂ ಹಳ್ಳಿಗರಿಗೆ ಸಮಾನಾವಕಾಶವನ್ನು ಕಲ್ಪಿಸಬೇಕಲ್ಲವೆ ? ಅಂಥ ಅವಕಾಶವನ್ನು ಕಲ್ಪಿಸುವುದಾದರೆ, ಹಳ್ಳಿಗರಿಗೇ ಬೇರೆ, ಪಟ್ಟಣದ ವಿದ್ಯಾರ್ಥಿಗಳಿಗೇ ಬೇರೆ ಪಠ್ಯಕ್ರಮವನ್ನು ರೂಪಿಸಬೇಕಾಗುತ್ತದೆ ; ಪರೀಕ್ಷಾ ವಿಧಾನಗಳೂ ಬೇರೆ ಬೇರೆಯಾಗಬೇಕಾಗುತ್ತದೆ. ಇದರಿಂದ ಅನೇಕ ಗೊಂದಲಗಳು ಮತ್ತು ಸಮಸ್ಯೆಗಳು ಏಳುವ ಸಂಭವವುಂಟು. ಉಳಿದಿರುವ ಏಕಮಾತ್ರ ಉಪಾಯವೆಂದರೆ, ಹಳ್ಳಿಗಳ ವಿದ್ಯಾರ್ಥಿಗಳಿಗೆ ಮತ್ತು ಅಭ್ಯರ್ಥಿಗಳಿಗೆ ಹತ್ತೊ ಹದಿನೈದೂ ಕೃಪಾಂಕಗಳನ್ನು ಕೊಡುವುದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ, ಶತಶತಮಾನಗಳಿಂದ ಪ್ರಬಲ ವರ್ಗಗಳು ಅವರನ್ನು ಅಜ್ಞಾನದ ಅಂಧಕಾರದಲ್ಲಿ ಸೆರೆಗೈದಿರುವ ಕಾರಣದಿಂದ, ಕೃಪಾಂಕ ಪ್ರದಾನ ನ್ಯಾಯಸಮ್ಮತ. ಮೀಸಲಾತಿಗೂ ಕೃಪಾಂಕ ಪ್ರದಾನಕ್ಕೂ ನಂಟುಗಂಟುಹಾಕುವ ಯುಕ್ತಿ ಸಾಧುವಲ್ಲ, ವಿವೇಕಯುತವಾದದ್ದಲ್ಲ.

ಜಗತ್ತಿನಲ್ಲಿ ನ್ಯಾಯಮೂರ್ತಿಗಳಿಂದ ಹಿಡಿದು ಮಂತ್ರಿ ಪ್ರಾಧ್ಯಾಪಕರ ತನಕ ಯಾರೂ ಸರ್ವಜ್ಞರಲ್ಲ ; ತಂತಮ್ಮ ಕ್ಷೇತ್ರಗಳಲ್ಲಿ ಮಾತ್ರ ಅವರು ತಜ್ಞರು. ಅನ್ಯ ವಿಷಯಗಳ ಬಗ್ಗೆ ಮಾತಾಡುವಾಗ ಎಚ್ಚರದಿಂದಿರಬೇಕು, ಸಂಬಂಧಪಟ್ಟ ತಜ್ಞರ ನೆರವು ಪಡೆಯಬೇಕು. ನ್ಯಾಯಮೂರ್ತಿಗಳು ಕಾನೂನಿನಲ್ಲಿ ಬಲ್ಲಿದರೆ ಹೊರತು, ಶಿಕ್ಷಣ ಸಾಹಿತ್ಯ ಭೌತವಿಜ್ಞಾನ ಮೊದಲಾದ ವಿಷಯಗಳಲ್ಲಲ್ಲ. ಅಂಥ ವಿಷಯಗಳ ಬಗ್ಗೆ ತೀರ್ಪು ಕೊಡುವಾಗ ತಜ್ಞರ ನೆರವು ಪಡೆದರೆ ಮಾತ್ರ ಕಕ್ಷಿಗಳಿಗೆ ನ್ಯಾಯ ದೊರಕಿಸಿ ಕೊಡಲು ಸಾಧ್ಯವಾಗುತ್ತದೆ. ಅನೇಕ ನತದೃಷ್ಟ ಕಕ್ಷಿದಾರರಿಗೆ ಅನ್ಯಾಯವಾಗುವುದೇ ಹೀಗೆ. ಈ ದೇಶದಲ್ಲಿ ಜಾತೀಯತೆಯೂ ಮತೀಯತೆಯೂ ಪ್ರಬಲ ಪಾತ್ರ ವಹಿಸುವಂತೆ ಕಾಣುತ್ತದೆ. ಮೊದಲೇ ವಿಲಂಬದಿಂದಾಗಿ ಸಂಬಂಧಪಟ್ಟವರಿಗೆ ನ್ಯಾಯ ದೊರಕುತ್ತಿಲ್ಲ. ದೇಶದಲ್ಲಿ ಮೂರು ಕೋಟಿ ಮೊಕದ್ದಮೆಗಳು ಧೂಳಿಡಿದು ಉಸಿರುಕಟ್ಟಿ ಗತಪ್ರಾಣವಾಗಿವೆ. ಈ ಮಾತು ಹೇಳುವವರೇ ರಾಷ್ಟ್ರಪತಿಗಳು (೬–೧೨–೯೮ ನೆಯ ದಿನಾಂಕದ ಹಿಂದೂ ಪತ್ರಿಕೆ) ನ್ಯಾಯ ಸತ್ಯ ಧರ್ಮಗಳಿಗೆ ಈ ದೇಶದಲ್ಲಿ ಜಯವಾಗಲಿ, ಮುಗ್ಧರಿಗೆ ಮೋಸವಾಗದಿರಲಿ, ಹಳ್ಳಿಯ ಮಕ್ಕಳಿಗೆ ಸಾಮಾಜಿಕ ನ್ಯಾಯ ದೊರಕಲಿ ಎಂದು ಭಗವಂತನಲ್ಲಿ ಮೊರೆಯಿಡೋಣ.

ದೇಜಗೌ

ಸ್ವಾಮಿ ವಿವೇಕಾನಂದ

ಪ್ರೊ॥ ಕೆ. ಕೇಶವಮೂರ್ತಿ
ಎಲ್–೪೧೧, ೭ನೇ ಮುಖ್ಯ ರಸ್ತೆ
ರಾಮಕೃಷ್ಣನಗರ-ಹೆಚ್ ಬ್ಲಾಕ್
ಮೈಸೂರು—೫೭೦೦೨೩

ಸಂನ್ಯಾಸಾಶ್ರಮವೆಂಬುದು ಮಠಮಾನ್ಯಗಳಲ್ಲಿ ಧರ್ಮಾಧಿಕಾರಿಯಾಗಿ ಪಾದಪೂಜಾ ವಿಧಾನೇನ ಧನಸಂಗ್ರಹ ಮಾಡುವುದಲ್ಲ. ಅದು ಧರ್ಮಾನುಷ್ಠಾನ ಮತ್ತು ಪ್ರಚಾರಕ್ಕಾಗಿ; ದೀನದಲಿತರ ಉದ್ಧಾರಕ್ಕಾಗಿ; ಕೇವಲ ಆತ್ಮೋದ್ಧಾರಕ್ಕಲ್ಲ. "ನಾವು ಕುರಿಗಳಲ್ಲ; ಸಿಂಹದ ಮರಿಗಳು; ಆ ಸಿಂಹ ಪರಾಕ್ರಮ ನಮ್ಮಲ್ಲಿದೆ. ಏಳಿ, ಎದ್ದೇಳಿ"—ಎಂದು ಸಿಂಹವಾಣಿಯೊಡನೆ ನಮ್ಮನ್ನು ಬಡಿದೆಬ್ಬಿಸಿದ ವೀರಸಂನ್ಯಾಸಿ ವಿವೇಕಾನಂದರ ೧೩೬ನೇ ಈ ಜಯಂತಿ ಜನವರಿ ೧೨.

"ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ"—'ಏಳಿ, ಎಚ್ಚರಗೊಳ್ಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ'—ಎಂಬ ಉಪನಿಷದ್ವಾಕ್ಯವನ್ನು ತಮ್ಮ ಜೀವನದ ಧ್ಯೇಯವಾಗಿಸಿಕೊಂಡು ಜನತೆಗೆ ಬೋಧಿಸಿ, ನೊಂದವರ ಕಣ್ಣೀರೊರೆಸಿ, ಯುವಕರಲ್ಲಿ ಸಿಂಹಸಾಹಸ ತುಂಬಿ, ವಿದೇಶದಲ್ಲಿ ಭಾರತದ ಕೀರ್ತಿಪತಾಕೆ ಹಾರಿಸಿದ ಮಹಾನ್ ಚೇತನ ಸ್ವಾಮಿ ವಿವೇಕಾನಂದ. ಸಂನ್ಯಾಸಾಶ್ರಮವೆಂಬುದು ಆಶ್ರಮವಾಸವಲ್ಲ. ಅದು ಮುಳ್ಳಿನ ಹಾಸಿಗೆ ಎಂಬುದನ್ನು ಜಗತ್ತಿಗೆ ತೋರಿಸಿದ ಮಹಾನುಭಾವ. ಕೇವಲ ಮೂವತ್ತೊಂಬತ್ತು ವರ್ಷದ ಅಲ್ಪಾಯುಷ್ಯದಲ್ಲಿ ಅದ್ಭುತ ಸಾಧಿಸಿ, ಅಮರರಾದ ಅವರ ಇತಿಹಾಸ ಚಿರಸ್ಮರಣೀಯ.

ಕಲ್ಕತ್ತಾದಲ್ಲಿ ೧೮೬೩ರ ಜನವರಿ ೧೨ರಂದು ಜನನ. ತಂದೆ ಶ್ರೇಷ್ಠ ವಕೀಲ ವಿಶ್ವನಾಥದತ್ತ ಮತ್ತು ತಾಯಿ ಭುವನೇಶ್ವರೀ ದೇವಿ.

ಬಾಲ್ಯ ಮತ್ತು ವಿದ್ಯಾಭ್ಯಾಸ

ಮಗುವಿಗೆ ರಾಮಾಯಣ ಹಾಗೂ ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದ ತಂದೆ ತಾಯಿಗಳ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡ ನರೇಂದ್ರ ಗುರುಗಳಿಗೆ ಅಚ್ಚುಮೆಚ್ಚಿನ ಶಿಷ್ಯನಾದ.

ನ್ಯಾಯಶಾಸ್ತ್ರ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ವೇದಾಂತ, ಭಗವದ್ಗೀತೆ ಇತ್ಯಾದಿ ಭಾರತೀಯ ದರ್ಶನಗಳ ಅಭ್ಯಾಸದಲ್ಲಿ ಅಪಾರ ಆಸಕ್ತಿ. ಸಂಗೀತ, ಸಾಹಿತ್ಯ, ಕಲೆ ಇವುಗಳಲ್ಲಿ ಅಸಾಧಾರಣ ಪ್ರತಿಭೆ. ಹಾಡಲು ಆರಂಭಿಸಿದರೆ ಜನ ಮಂತ್ರಮುಗ್ಧರಾಗುತ್ತಿದ್ದರು. ಶಾಲೆಯಲ್ಲಿ ಇಂಗ್ಲೀಷು, ಸಂಸ್ಕೃತ,

ಇತಿಹಾಸಾದಿಗಳಲ್ಲಿ ಅತೀವ ಆಸಕ್ತಿ. ಆದರೆ ಗಣಿತವೆಂದರೆ ತೀವ್ರ ನಿರಾಸಕ್ತಿ.

ಸರ್ವಪ್ರವೀಣ್ಯ

ಉಪಾಧ್ಯಾಯರನ್ನೇ ಬೆರಗುಗೊಳಿಸುವಂಥ ಮೇಧಾಶಕ್ತಿ. 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ'ದ ಹತ್ತು ಸಂಪುಟಗಳು ಅವನಿಗೆ ಕಂಠಸ್ಥವಾಗಿದ್ದವು. ಕೇವಲ ಬೌದ್ಧಿಕಶಕ್ತಿಯಲ್ಲಿ ಮಾತ್ರವಲ್ಲ. ದೈಹಿಕ ಶಕ್ತಿಯಲ್ಲೂ ಅಷ್ಟೇ ಸಮರ್ಥಶಾಲಿ.ಅಡುಗೆ ಕಲೆಯೇ ಆದಿಯಾಗಿ ಹಲವು ಹತ್ತು ಕಲೆಗಳಲ್ಲಿ ಪ್ರವೀಣ.

ಕಾಲೇಜಿನಲ್ಲಿರುವಾಗಲೇ ಶೆಲ್ಲಿ, ವರ್ಡ್ಸ್‌ವರ್ತ್‌ರ ಕವನಗಳನ್ನು ಮಿಲ್ ಮತ್ತು ಸ್ಪೆನ್ಸರ್ ತತ್ತ್ವಜ್ಞಾನವನ್ನೂ ಓದಿ ಮುಗಿಸಿದ್ದ.

ಅಧ್ಯಾತ್ಮದತ್ತ ಒಲವು

ನರೇಂದ್ರನಿಗೆ ಅಧ್ಯಾತ್ಮದತ್ತ ಹೆಚ್ಚು ಒಲವು. ಪ್ರಾಪಂಚಿಕ ಸುಖಕ್ಕಿಂತ ವೈರಾಗ್ಯದಲ್ಲಿ ಆಸಕ್ತಿ. ಈ ಯುವಕನಿಗೆ ಹೆಣ್ಣು ಕೊಡಲು ನಾಮುಂದು ತಾಮುಂದು ಎಂದು ಕನ್ಯಾಪಿತೃಗಳು ಮುನ್ನುಗ್ಗುತ್ತಿದ್ದುದರಲ್ಲಿ ಅಚ್ಚರಿಯೇನಿಲ್ಲ. ಆದರೆ ನರೇಂದ್ರನ ಜಾಡೇ ಬೇರೆಯಾಗಿತ್ತು. ಒಂದು ಕುಟುಂಬದ ಯಜಮಾನನಾಗಿ ಜೀವನ ಸಾಗಿಸುವ ಬದಲು ವಿಶ್ವಕುಟುಂಬಿಯಾಗಬೇಕೆಂಬ ಹಂಬಲ ಬೇರೂರಿತ್ತು.

ಬ್ರಹ್ಮ ಸಮಾಜಕ್ಕೆ ಪ್ರವೇಶ

ತನ್ನ ಉದ್ದೇಶದ ಈಡೇರಿಕೆಗಾಗಿ ನರೇಂದ್ರ ಕೇಶವಚಂದ್ರಸೇನರಿಂದ ಸ್ಥಾಪಿತವಾಗಿದ್ದ ಬ್ರಹ್ಮ ಸಮಾಜಕ್ಕೆ ಸೇರಿದ. ಅಲ್ಲಿ ವಿಗ್ರಹಾರಾಧನೆಗೆ ಎಡೆಯಿಲ್ಲ. ನಿರ್ಗುಣ-ಬ್ರಹ್ಮತತ್ತ್ವವನ್ನು ಕುರಿತು ಚಿಂತನೆ ನಡೆಯುತ್ತಿತ್ತು. ಆದರಿಂದ ನರೇಂದ್ರನ ಮನಸ್ಸಿಗೆ ನೆಮ್ಮದಿ ಸಿಕ್ಕಿತೇ ಹೊರತು ತೃಪ್ತಿ ಸಿಗಲಿಲ್ಲ.

ದೇವರನ್ನು ಕಾಣುವ ಹಂಬಲ

ದೇವರು ಇದ್ದಾನೆಯೇ? ಇದ್ದರೆ ಹೇಗಿದ್ದಾನೆ? ಎಂದು ತಿಳಿಯುವ ಹಂಬಲ, ನೋಡಬೇಕೆಂಬ ಕಾತುರ ದಿನದಿನಕ್ಕೆ ತೀವ್ರವಾಯಿತು. ಅಂದಿನ ಪ್ರಸಿದ್ಧ ಮೇಧಾವಿಗಳಲ್ಲೊಬ್ಬರಾದ ಮಹರ್ಷಿ ದೇವೇಂದ್ರನಾಥ ಠಾಕೂರರೇ ಆದಿಯಾಗಿ ಹಲವು ಹತ್ತು ಮುಮುಕ್ಷುಗಳನ್ನು "ನೀವು ದೇವರನ್ನು ನೋಡಿದ್ದೀರಾ?" ಎಂದು ಪ್ರಶ್ನಿಸಲು ಆರಂಭಿಸಿ ಉತ್ತರ ಸಿಗದೆ ಹತಾಶನಾದ. ಇವನ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡ ಕಾಲೇಜಿನ ಪ್ರಾಚಾರ್ಯರಾದ ವಿಲಿಯಮ್ ಹೇಸ್ಟಿಯವರು ಶ್ರೀ ರಾಮಕೃಷ್ಣರ ಹೆಸರು ಹೇಳಿದರು. ಆಗ ನರೇಂದ್ರ ಕಲ್ಕತ್ತೆಯ ಸ್ಕಾಟಿಷ್ ಚರ್ಚ್ ಕಾಲೇಜಿನ ಬಿ.ಎ. ವಿದ್ಯಾರ್ಥಿಯಾಗಿದ್ದ. ಅಷ್ಟು ಹೊತ್ತಿಗಾಗಲೇ ಶ್ರೀ ರಾಮಕೃಷ್ಣರು ಪರಮಹಂಸರಾಗಿ ಪ್ರಸಿದ್ಧರಾಗಿದ್ದರು.

ಶ್ರೀ ರಾಮಕೃಷ್ಣರ ಭೇಟಿ

ಒಂದು ದಿನ ನರೇಂದ್ರ ತನ್ನ ಕೆಲವು ಸ್ನೇಹಿತರೊಡನೆ ಶ್ರೀ ರಾಮಕೃಷ್ಣರನ್ನು ಕಾಣಲು ದಕ್ಷಿಣೇಶ್ವರಕ್ಕೆ ಹೋದ. ಅವರನ್ನು ಕಂಡೊಡನೆಯೇ "ಮಹಾಶಯರೇ, ನೀವು ದೇವರನ್ನು ಕಂಡಿದ್ದೀರಾ?" ಎಂದ. 'ಕಂಡಿದ್ದೇನೆ' ದೃಢವಾದ ಧ್ವನಿಯಲ್ಲಿ ಶ್ರೀ ರಾಮಕೃಷ್ಣರು ನುಡಿದರು. "ಮಾತನಾಡಿದ್ದೀರಾ?" ಪ್ರಶ್ನೆ ಮುಂದುವರಿಯಿತು. "ಮಾತನಾಡಿ

ದ್ದೇನೆ." "ನನಗೆ ತೋರಿಸುತ್ತೀರಾ?" "ತೋರಿಸುತ್ತೇನೆ" ಎಂದರು ರಾಮಕೃಷ್ಣರು. ನರೇಂದ್ರ ಚಕಿತನಾದ. ಹಾರಿಕೆ ಉತ್ತರಗಳನ್ನು ಕೇಳಿ ಕೇಳಿ ಬೇಸತ್ತಿದ್ದ ಅವನಿಗೆ ಅವರ ಮಾತುಗಳು ಬಹು ಅಪ್ಯಾಯಮಾನವಾದುವು. ಜೀವನದಲ್ಲಿ ಇಂಥ ವ್ಯಕ್ತಿಯೊಬ್ಬರನ್ನು ಆತ ಸಂಧಿಸಿದ್ದು ಅದೇ ಮೊದಲು. "ಹಾಗಾದರೆ ತೋರಿಸಿ" ಎಂದ ನರೇಂದ್ರ.

ಒಡನೆಯೇ ಪರಮಹಂಸರು ತಮ್ಮ ಬಲಗಾಲನ್ನು ನರೇಂದ್ರನ ತೊಡೆಯ ಮೇಲಿಟ್ಟರು. ನರೇಂದ್ರ ಹಿಂದೆಂದೂ ಕಾಣದ ವಿಚಿತ್ರ ಅನುಭವವನ್ನು ಕಂಡ. ಬಾಹ್ಯಪ್ರಜ್ಞೆ ಹೊರಟೇಹೋಯಿತು. ಅಂತಃಸತ್ವ ಜಾಗ್ರತವಾಯಿತು. ಎಲ್ಲ ವಸ್ತುಗಳೂ ಮಾಯವಾಗತೊಡಗಿದುವು. ತನ್ನ ವ್ಯಕ್ತಿತ್ವವೂ ಕರಗಿ ಪ್ರಾಣಹೋಗುವಂತಾಗಿ ಕೂಗಿಕೊಂಡ. ಒಡನೆಯೇ ಶ್ರೀ ರಾಮಕೃಷ್ಣರು ನಸುನಗುತ್ತಾ, "ಇವತ್ತಿಗೆ ಇಷ್ಟು ಸಾಕು" ಎಂದು ಹೇಳುತ್ತಾ ಕಾಲನ್ನು ಹಿಂತೆಗೆದರು.

ಮತ್ತೆ ಮತ್ತೆ ಭೇಟಿ

ತನ್ನ ವಜ್ರಮನಸ್ಸನ್ನು ಕುಟ್ಟಿ ಪುಡಿ ಪುಡಿ ಮಾಡಿದ ರಾಮಕೃಷ್ಣರ ವಿಚಾರದಲ್ಲಿ ಗೌರವ ಮೂಡಿದರೂ ಅದೆಲ್ಲಾ ಇಂದ್ರಜಾಲವಿದ್ಯೆ ಎಂದುಕೊಂಡ. ಪದೇ ಪದೇ ದಕ್ಷಿಣೇಶ್ವರಕ್ಕೆ ಹೋಗಿಬರುತ್ತಿದ್ದ. ರಾಮಕೃಷ್ಣರು ಕಾಮಿನೀ ಕಾಂಚನ ತ್ಯಾಗ ಮಾಡಿದ್ದ ಪರಮಯೋಗಿಗಳು ಅದನ್ನೆಲ್ಲಾ ಪರೀಕ್ಷಿಸಿ ಅವರು ನಿಜವಾದ ಸಾಕ್ಷಾತ್ಕಾರವಾದ ಪುರುಷರೆಂದು ಅವರನ್ನು ತನ್ನ ಗುರುವಾಗಿ ಸ್ವೀಕರಿಸಿ ಅಧ್ಯಾತ್ಮ ಸಾಧನೆಯಲ್ಲಿ ಅವರಿಂದ ಮಾರ್ಗದರ್ಶನ ಪಡೆದು ದಿವ್ಯಚೇತನನಾದ. ಈ ಗುರುಶಿಷ್ಯರ ಬಾಂಧವ್ಯ 'ನ ಭೂತೋ ನ ಭವಿಷ್ಯತಿ."

ಪಿತೃವಿಯೋಗ

ನರೇಂದ್ರನ ಬಿ.ಎ. ಪರೀಕ್ಷೆ ಮುಗಿಯಿತು. ಈ ಮಧ್ಯೆ ತಂದೆ ವಿಶ್ವನಾಥದತ್ತರು ಹೃದಯಾಘಾತದಿಂದ ಕೊನೆಯುಸಿರೆಳೆದರು. ಇಬ್ಬರು ತಮ್ಮಂದಿರು, ಇಬ್ಬರು ತಂಗಿಯರು ಮತ್ತು ತಾಯಿ—ಇವರನ್ನು ಸಾಕುವ ಹೊಣೆ ನರೇಂದ್ರನ ಮೇಲೆ ಬಿತ್ತು. ತಂದೆ ಮಾಡಿದ ಆಸ್ತಿಗಿಂತ ಸಾಲವೇ ಅಧಿಕವಾಗಿತ್ತು. ದರಿದ್ರಲಕ್ಷ್ಮಿ ಗೃಹಪ್ರವೇಶ ಮಾಡಿದಳು. ಎರಡು ಹೊತ್ತಿನ ಊಟಕ್ಕೂ ಕಷ್ಟಪಡಬೇಕಾಯಿತು.

ಗುರುವಿಯೋಗ

ನರೇಂದ್ರ ಲಾ ಕಾಲೇಜಿಗೆ ಸೇರಿದ. ಅದನ್ನು ಪೂರೈಸುವುದಕ್ಕೆ ಮೊದಲೇ ಶ್ರೀ ರಾಮಕೃಷ್ಣರು ಗಂಟಲು ಕ್ಯಾನ್ಸರ್ ನಿಂದಾಗಿ ಹಾಸಿಗೆ ಹಿಡಿದರು. ಇನ್ನೇನು ಮರಣ ಸನ್ನಿಹಿತವಾಗುತ್ತಿದೆ ಎನ್ನುವಾಗ ಪ್ರಿಯಶಿಷ್ಯ ನರೇಂದ್ರನನ್ನು ಹತ್ತಿರ ಕರೆದು ತಮ್ಮ ಆಧ್ಯಾತ್ಮಿಕ ಸಾಧನೆಯ ಸಂಪತ್ತೆಲ್ಲವನ್ನೂ ಆತನಿಗೆ ಧಾರೆ ಎರೆದು, "ನರೇನ್, ನೀನು ಕೇವಲ ನಿನ್ನ ಉದ್ಧಾರಕ್ಕಾಗಿ ಹುಟ್ಟಿಲ್ಲ. ರಾಷ್ಟ್ರದ ಹಿತಕ್ಕಾಗಿ, ದೀನದಲಿತರ ಉದ್ಧಾರಕ್ಕಾಗಿ ಹುಟ್ಟಿದ್ದೀಯೆ! ಈ ಶಕ್ತಿಯನ್ನು ಅದಕ್ಕಾಗಿ ವಿನಿಯೋಗಿಸು" ಎಂದು ಹೇಳಿ ೧೮೮೬ರ ಆಗಸ್ಟ್ ೧೬ರಂದು ಕೊನೆಯುಸಿರೆಳೆದರು.

ನರೇಂದ್ರ ವಿವೇಕಾನಂದರಾದುದು

ಪರಮಹಂಸರ ಮಹಾಸಮಾಧಿಯ ನಂತರ ನರೇಂದ್ರ ತನ್ನ ಗುರುವಿನಾಜ್ಞೆಯಂತೆ

ಜಗತ್ಕಲ್ಯಾಣಕ್ಕಾಗಿ ದುಡಿಯುತ್ತೇನೆಂಬ ವೀರಪ್ರತಿಜ್ಞೆಯೊಂದಿಗೆ ಸಂನ್ಯಾಸ ಸ್ವೀಕರಿಸಿ ಸ್ವಾಮಿ ವಿವೇಕಾನಂದರಾದರು.

ವಿವೇಕಾನಂದರು ಎಂದೂ ತಾಳ್ಮೆಗೆಡುತ್ತಿರಲಿಲ್ಲ. ತಮ್ಮನ್ನು ಬಯಸಿ ಬಂದವರಿಗೆ ಆಶ್ರಯ ನೀಡುತ್ತಿದ್ದರು. ಇವರ ಬಹುಮುಖ ಪ್ರತಿಭೆ ಕೇವಲ ಭಾರತೀಯರನ್ನೇ ಅಲ್ಲ ; ವಿದೇಶೀಯರನ್ನೂ ಆಕರ್ಷಿಸಿತು.

ಜಗದ್ವಿಖ್ಯಾತರಾದುದು

೧೮೯೩ನೇ ಸೆಪ್ಟೆಂಬರ್‌ನಲ್ಲಿ ಅಮೆರಿಕಾದ ಚಿಕಾಗೋ ನಗರದಲ್ಲಿ ಸರ್ವಧರ್ಮ ಸಮ್ಮೇಳನವೊಂದು ಜರಗಿತು. ದೇಶವಿದೇಶದ ವಿದ್ವನ್ಮಣಿಗಳೆಲ್ಲಾ ಆ ವಿಶ್ವಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ೫೦೦೦ಕ್ಕಿಂತಲೂ ಹೆಚ್ಚು ಜನ ಆ ಸಭೆಯಲ್ಲಿ ಉಪಸ್ಥಿತರಿದ್ದರು. ಭಾರತದಿಂದಲೂ ಜೈನ, ಬೌದ್ಧ, ಬ್ರಹ್ಮ ಸಮಾಜದ ಪ್ರತಿನಿಧಿಗಳು ಆಗಮಿಸಿದ್ದರು. ಒಬ್ಬೊಬ್ಬರೂ ವೇದಿಕೆಯ ಏರಿ ತಮ್ಮ ಧರ್ಮದ ಶ್ರೇಷ್ಠತೆಯನ್ನು ಪ್ರತಿಪಾದಿಸಿ ನಿರ್ಗಮಿಸುತ್ತಿದ್ದರು.

ಕಡೆಗೆ ವಿವೇಕಾನಂದರು ಸಭಾಸದರನ್ನು "ನನ್ನ ಅಮೆರಿಕದ ಸೋದರ ಸೋದರಿಯರೇ" ಎಂದು ಸಂಬೋಧಿಸಿದಾಗ ಐದು ನಿಮಿಷ ಕರತಾಡನ. ಎಲ್ಲರೂ ಮಂತ್ರಮುಗ್ಧರು. ಭಗವದ್ಗೀತೆಯ "ಯೋ ಯಥಾ ಮಾಂ ಪ್ರಪದ್ಯಂತೇ...." ಎಂಬ ಶ್ಲೋಕವೊಂದನ್ನು ಉದ್ಧರಿಸಿ ಇಪ್ಪತ್ತು ನಿಮಿಷ ಮಾತನಾಡಿದರು. ಅವರ ಸರಳ ಶೈಲಿ, ವಾಗ್ವೈಖರಿ, ಸರ್ವ ಧರ್ಮಗಳೂ ಒಂದೇ, ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ ಎಂಬ ವಿಶ್ವಭ್ರಾತೃತ್ವ ಕಂಡ ಜನ ಭಾರತೀಯ ವೇದಾಂತ ತತ್ತ್ವಕ್ಕೆ ಮಾರುಹೋದರು. ಭಾರತೀಯ ತತ್ತ್ವಶಾಸ್ತ್ರವನ್ನು ವಿಕೃತವಾಗಿ ಅರ್ಥಮಾಡಿಕೊಂಡಿದ್ದ ಜನತೆಗೆ ವಿವೇಕಾನಂದರ ವಾಣಿ ಕಣ್ಣು ತೆರೆಸಿತು. ಅದುವರೆಗೆ ಅಮೆರಿಕಾದಲ್ಲಿ ಅಜ್ಞಾತರಾಗಿದ್ದ ವಿವೇಕಾನಂದರು ಕೇವಲ ತಮ್ಮ ಇಪ್ಪತ್ತು ನಿಮಿಷಗಳ ಭಾಷಣದಲ್ಲಿ ಜಗದ್ವಿಖ್ಯಾತರಾದರು. ಅಮೆರಿಕೆಯ ಜನತೆಯ ಮೇಲೆ ಈ ಭಾಷಣ ಅಗಾಧ ಪ್ರಭಾವ ಬೀರಿತು.

ವಿವೇಕಾನಂದರಲ್ಲಿ ರಾಷ್ಟ್ರಪ್ರೇಮ ಮತ್ತು ಹಿಂದೂಧರ್ಮದ ಬಗ್ಗೆ ಅಭಿಮಾನ ಎರಡೂ ಸಮ್ಮಿಳಿತವಾಗಿದ್ದವು. ಭಾರತೀಯರಲ್ಲಿ ಧಾರ್ಮಿಕ ಪುನರುಜ್ಜೀವನವಾಗಬೇಕಾಗಿದೆ ಎಂದು ಹೇಳಿ ಅದಕ್ಕಾಗಿ ನಿರಂತರವಾಗಿ ಶ್ರಮಿಸಿದರು. ಜೀವನದಲ್ಲಿ ಎದುರಾದ ಕಷ್ಟ ಸಮಸ್ಯೆಗಳನ್ನು ಎದುರಿಸಿ ಹೊಸ ದಾರಿ ಹುಡುಕುವ ಧೈರ್ಯ ಭಾರತೀಯರಲ್ಲಿಲ್ಲ. ಹೋರಾಡುವ ಛಲವಿಲ್ಲ ; ಮಿಗಿಲಾಗಿ ಶ್ರದ್ಧೆಯಿಲ್ಲ. ಇದರಿಂದಾಗಿ ಭಾರತ ದರಿದ್ರವಾಗಿದೆ, ಅಶಕ್ತವಾಗಿದೆ ಎಂಬುದನ್ನರಿತು ಅವರನ್ನು ವೀರರನ್ನಾಗಿ ಮಾಡಲು ಶ್ರಮಿಸಿದರು.

ಶಿಕ್ಷಣವೇತ್ತ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಭಾರತೀಯ ಶ್ರೇಷ್ಠ ಶಿಕ್ಷಣತಜ್ಞರೂ ಹೌದು. ಶಿಕ್ಷಣ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಗಣನೀಯ. 'ಮನುಷ್ಯನಲ್ಲಿ ಈಗಾಗಲೇ ಅಂತರ್ಗತವಾಗಿರುವ ಪರಿಪೂರ್ಣತೆಯನ್ನು ವ್ಯಕ್ತಗೋಳಿಸುವುದೇ ಶಿಕ್ಷಣ' ಎಂಬುದು ಶಿಕ್ಷಣಕ್ಕೆ ನೀಡಿದ ವ್ಯಾಖ್ಯೆ. ಜ್ಞಾನ ಹೊರಗಿನಿಂದ ಬರುವುದಲ್ಲ. ಅದು ಒಳಗೇ ಅಡಗಿದೆ. ಅದನ್ನು

ಅನಾವರಣಮಾಡುವುದಷ್ಟೇ ಶಿಕ್ಷಕನ ಕೆಲಸ. ಆತ್ಮವಿಶ್ವಾಸ ಮತ್ತು ಶ್ರದ್ಧೆಯನ್ನು ಬೆಳೆಸುವುದೇ ಶಿಕ್ಷಣದ ಗುರಿ. ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ವ್ಯಕ್ತಿಯಲ್ಲಿ ಮೂಡಿಸುವುದೇ ಶಿಕ್ಷಣ. ಪ್ರತಿಯೊಬ್ಬರೂ ತಮಗೆ ತಾವೇ ಕಲಿತುಕೊಳ್ಳುತ್ತಾರೆ. ಗುರು ಕೇವಲ ಮಾರ್ಗದರ್ಶಕ. ಶಿಕ್ಷಕನ ಬೋಧನೆಗಿಂತ ಅವನ ನಡೆನುಡಿಗಳು ಶಿಷ್ಯನಿಗೆ ಪಾಠವಾಗಬೇಕು. ಮುಕ್ತವಾತಾವರಣದಲ್ಲಿ ಶಿಕ್ಷಣ ನಡೆಯುಬೇಕು. ಶಿಸ್ತು ಎಂಬ ಹೆಸರಿನಲ್ಲಿ ಶಿಕ್ಷಕ ಮಗುವಿಗೆ ಭಯೋತ್ಪಾದಕನಾಗಬಾರದು.

ಕೇವಲ ಮಾಹಿತಿ ಸಂಗ್ರಹವೇ ಶಿಕ್ಷಣವಲ್ಲ. ಹಾಗಾಗಿದ್ದರೆ ಶಿಕ್ಷಣ—ಪುಸ್ತಕ ಭಂಡಾರಗಳೇ ವಿಶ್ವವಿದ್ಯಾಲಯಗಳಾಗಿರುತ್ತಿದ್ದುವು! ವಿಶ್ವಕೋಶಗಳೇ ಮುನಿಗಳಾಗಿರುತ್ತಿದ್ದವು. ವಿಶ್ವವಿದ್ಯಾಲಯದ ಪದವಿಗಳಿಸುವುದೇ ಶಿಕ್ಷಣದ ಗುರಿಯಲ್ಲ. ಯಾವುದೋ ಒಂದು ಉದ್ಯೋಗಕ್ಕೆ ನಿಮ್ಮನ್ನು ತರಬೇತುಗೊಳಿಸುವುದು ಶಿಕ್ಷಣದ ಉದ್ದೇಶವಲ್ಲ. ಅನ್ನಕ್ಕೆ ನೆಲೆವೀಡಾದ ಭಾರತದಲ್ಲಿ ಒಪ್ಪೊತ್ತಿನ ಕೂಳಿಗಾಗಿ ಏಳುತ್ತಿರುವ ಹೃದಯವಿದ್ರಾವಕ ಕೂಗನ್ನು ಕೇಳಿ ನಿಮ್ಮ ಶಿಕ್ಷಣ ಆ ಕೊರತೆಯನ್ನು ಪೂರೈಸುತ್ತದೆಯೇ? ಆತ್ಮಚಿಂತನೆಮಾಡಿ. ಯಾವ ಶಿಕ್ಷಣ ಅನುದಿನದ ಜೀವನ ಹೋರಾಟಕ್ಕೆ ನಿಮ್ಮನ್ನು ಅಣಿಗೊಳಿಸಲಾರದೋ, ಯಾವ ಶಿಕ್ಷಣ ನಿಮ್ಮಲ್ಲಿ ಶೀಲವನ್ನು ಸಂವರ್ಧಿಸಲಾರದೋ, ಯಾವ ಶಿಕ್ಷಣ ನಿಮ್ಮನ್ನು ಸಿಂಹಪರಾಕ್ರಮಿಗಳನ್ನಾಗಿ ಮಾಡಲಾರದೋ ಅದನ್ನು ಶಿಕ್ಷಣ ಎಂದು ಕರೆಯಲಾದೀತೇ? ಶೀಲವನ್ನುರೂಪಿಸುವ, ಮಾನಸಿಕ ಶಕ್ತಿಯನ್ನು ಹೆಚ್ಚಿಸುವ ಹಾಗೂ ಬುದ್ಧಿಯನ್ನು ವಿಕಾಸಗೊಳಿಸುವ, ಸ್ವಂತ ಕಾಲಮೇಲೆ ನಿಲ್ಲಬಲ್ಲ ಶಿಕ್ಷಣ ನಮಗೆ ಬೇಕು. ಎಲ್ಲ ಶಿಕ್ಷಣದ ಪ್ರಧಾನಗುರಿಯೆಂದರೆ ಯೋಗ್ಯ ಮಾನವರನ್ನು ಸೃಜಿಸುವುದು. ಇಂಥ ಸರ್ವತೋಮುಖ ವಿಕಾಸಮಾಡುವ ಶಿಕ್ಷಣ ನಮಗೆ ಅಗತ್ಯವಾಗಿರಬೇಕು.

ಸಂದೇಶ

ಸ್ವಾಮಿ ವಿವೇಕಾನಂದರ ಸಂದೇಶ ಅಗಾಧ. ಭಗವದ್ಭಕ್ತರು ಅಂತೆಯೇ ತಮ್ಮ ಶಕ್ತಿಯಲ್ಲೂ ಅವರಿಗೆ ನಂಬಿಕೆಯಿತ್ತು. ಅದನ್ನೇ ಜನತೆಗೆ ಬೋಧಿಸಿದರು. "ನೀವು ಭಗವಂತನ ಮಕ್ಕಳು. ದಿವ್ಯಾತ್ಮರು, ನೀವು ಕೇವಲ ದೇಹಗಳಲ್ಲ. ನೀವು ಕುರಿಗಳೆಂಬ ಭ್ರಮೆ ತೊರೆಯಿರಿ. ಸಿಂಹಪರಾಕ್ರಮ ನಿಮ್ಮಲ್ಲಿದೆ. ಸತತ ಪ್ರಯತ್ನ ಮತ್ತು ಧೃಢ ಸಂಕಲ್ಪದಿಂದ ನೀವು ಜಯಗಳಿಸುವಿರಿ. ಶಕ್ತಿಯೇ ಬದುಕು, ದುರ್ಬಲತೆಯೇ ಸಾವು. ಜಯಾಪಜಯಗಳು ಜೀವನದ ಸುಂದರ ಅಂತಃಸತ್ತ್ವ. ನಾವು ಬೋಧಿಸಬೇಕಾದ ಧರ್ಮವೊಂದಿದ್ದರೆ ಅದು ನಿರ್ಭಯತೆಯ ಧರ್ಮಮಾತ್ರ. ಲೌಕಿಕ ಪ್ರಪಂಚದಲ್ಲಾಗಲೀ, ಪಾರಮಾರ್ಥಿಕ ವಲಯದಲ್ಲಾಗಲೀ ಅವನತಿ ಮತ್ತು ಪಾಪ ಪ್ರಜ್ಞೆಗೆ ಮುಖ್ಯಕಾರಣ ಅಂಜಿಕೆ. ಅದನ್ನು ಹೊಡೆದೋಡಿಸಿ ಬಡಜನರಿಗೆ ನೀವು ಕೃತಜ್ಞರಾಗಿರಿ. ಏಕೆಂದರೆ ನಿಮ್ಮ ದಾನವನ್ನು ಸ್ವೀಕರಿಸಲು ಒಬ್ಬ ವ್ಯಕ್ತಿ ನಿಮಗೆ ಸಿಗುತ್ತಾನೆ. ಯಾವುದು ಸ್ವಾರ್ಥದಿಂದ ಕೂಡಿದೆಯೋ ಅದು ಅನೀತಿಯುತವಾದದ್ದು. ಯಾವುದು ನಿಸ್ವಾರ್ಥತೆಯಿಂದ ಕೂಡಿ

ದೆಯೋ ಅದು ನೀತಿಯುತವಾದದ್ದು. ಎಲ್ಲ ಪೂಜೆ ಪುರಸ್ಕಾರಗಳ ಸಾರಾಂಶವಿಷ್ಟೆ. ಬಡವರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಯಾರು ಭಗವಂತನನ್ನು ಕಾಣುತ್ತಾನೋ ಅವನೇ ನಿಜವಾದ ಆರಾಧಕ. ಮೊದಲು ಅನ್ನಬ್ರಹ್ಮ, ಅನಂತರ ನಿರ್ಗುಣಬ್ರಹ್ಮ. ಹಸಿದು ಕಂಗಾಲಾದ ಜನತೆಗೆ ಜ್ಞಾನದಾನಕ್ಕಿಂತ ಅನ್ನದಾನಮಾಡಿ ಸತ್ಯಕ್ಕೆ ಜಯ ಖಂಡಿತ. ಈ ಜೀವನ ಕ್ಷಣಿಕ, ಜಗತ್ತಿನ ಎಲ್ಲ ಆಡಂಬರ ನಶ್ವರ. ವಿಕಾಸವೇ ಜೀವನ, ಸಂಕೋಚನವೇ ಮರಣ. ಜಗತ್ತಿಗೆ ಇಂದು ಬೇಕಾಗಿರುವುದು ಸಚ್ಚಾರಿತ್ರ್ಯ.

ವಿವೇಕಾನಂದ ಅಮರ

೧೯೦೨ ನೇ ಜುಲೈ ೪ರಂದು ಸೂರ್ಯ ಅಸ್ತಮಯವಾಗಿ ಕೇವಲ ಎರಡೂವರೆಗಂಟೆ ಸಂದಿದೆ. ಅಂದರೆ ರಾತ್ರಿ ೯ ಗಂಟೆಯ ಸಮಯ. ತಾವು ಬಂದ ಕಾರ್ಯವಾಯಿತೆಂದು ತಮ್ಮ ಕೇವಲ ೩೯ ನೆಯ ವಯಸ್ಸಿನಲ್ಲಿ ಧ್ಯಾನಾವಸ್ಥೆಯಲ್ಲಿ ದೇಹತ್ಯಾಗಮಾಡಿದರು.

ನರೇಂದ್ರರಾಗಿ ಜನಿಸಿದರು; ಸ್ವಾಮಿ ವಿವೇಕಾನಂದರಾದರು; ನವಯುಗ ಪ್ರವರ್ತಕರಾದರು; ಧರ್ಮಗುರುವಾದರು; ಸರ್ವಧರ್ಮಸಮನ್ವಯಾಚಾರ್ಯರಾದರು; ವಿಶ್ವವಿಖ್ಯಾತರಾದರು; ಇದರ ರಹಸ್ಯವಾದರೂ ಏನು? ರಾಮಕೃಷ್ಣ ಪರಮಹಂಸರಂಥ ಗುರುಗಳು ಅವರಿಗೆ ದೊರೆತದ್ದರಿಂದ. ಅವರು ಕಣ್ಮರೆಯಾದರೇನು? ಅವರ ಸಂದೇಶ ಇಂದಿಗೂ, ಎಂದೆಂದಿಗೂ ಅಮರ.



ಪ್ರೀತಿ ಎಂದಿಗೂ ಸೋಲುವುದಿಲ್ಲ; ಇಂದು ಅಥವಾ ನಾಳೆ, ವರ್ಷಗಳೇ ಉರುಳಲಿ, ಸತ್ಯಕ್ಕೆ ಜಯ ಖಂಡಿತ.

ಸುಖ ಹಂಚಿದಷ್ಟೂ ಹೆಚ್ಚುತ್ತದೆ, ದುಃಖ ಹಂಚಿದಷ್ಟೂ ಕಡಿಮೆ ಆಗುತ್ತದೆ.

—ಸ್ವಾಮಿ ವಿವೇಕಾನಂದ

ಜಿಎಸ್ಎಸ್ ಕಿರೀಟಕ್ಕೆ ಪಂಪ ಪ್ರಶಸ್ತಿಯ ಗರಿ

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು

"ವ್ಯಾಸ ಸಮ್ಮಾನ್" ಪ್ರಶಸ್ತಿ ವಿಜೇತ ಸುಪ್ರಸಿದ್ಧ ಹಿಂದಿ ಲೇಖಕ ಗೋವಿಂದ ಮಿಶ್ರ ಅವರ ಸನ್ಮಾನ ಸಮಾರಂಭ ಇತ್ತೀಚೆಗೆ ಜರುಗಿತು. ಆ ಸಮಾರಂಭದಲ್ಲಿ ಮಾತನಾಡಿದ ವರಿಷ್ಠರು ಒಂದು ಅಂಶವನ್ನು ಒತ್ತಿ ಒತ್ತಿ ಹೇಳಿದರು. ಅವರ ಪ್ರಕಾರ ಇಂಗ್ಲಿಷ್ ಭಾಷೆ ಯೂರೋಪಿನ ಜನಸಮುದಾಯಕ್ಕೆ ವ್ಯವಹಾರದ ಭಾಷೆಯಾಗಿ ದಕ್ಕುತ್ತಿದೆ. ಭಾರತದ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಜನ ಸಂಪರ್ಕ ಭಾಷೆಯಾಗಿ ದುಡಿಯಲು ಹಿಂದಿ ಮಾತ್ರ ಅರ್ಹವಾಗಿದೆಯಂತೆ. ಎಲ್ಲರ ಮೇಲೆ ಹಿಂದಿಯನ್ನು ಹೇರುವ ಮುನ್ನುಡಿ ಮಾತುಗಳು ಇವು ಎಂಬುದನ್ನು ಪ್ರತ್ಯೇಕ ಹೇಳುವ ಅಗತ್ಯವಿಲ್ಲ.

ಪ್ರಾಚೀನತೆಯಲ್ಲಿ, ಸಮೃದ್ಧಿಯಲ್ಲಿ, ಶ್ರೀಮಂತಿಕೆಯಲ್ಲಿ ಕನ್ನಡ ಹಾಗೂ ತಮಿಳಿನಂಥ ಭಾಷೆಗಳನ್ನು ಹೊಂದಿಯೂ ಹಿಂದೀಯರು ಈ ಮೇಲಿನಂತೆ ಮಾತನಾಡುವುದು ಅತಾರ್ಕಿಕವೂ, ಅವೈಜ್ಞಾನಿಕವೂ ಆಗಿದೆ. ಪಂಪನಿಂದ ಹಿಡಿದು ಇಲ್ಲಿಯವರೆಗೆ ನಮ್ಮ ಭಾಷೆಯನ್ನು ಶ್ರೀಮಂತಗೊಳಿಸಿರುವ ಮಹನೀಯರ ಗಡಣ ದೊಡ್ಡದು. ಅವರು ದುಡಿದಿರುವುದರಿಂದ, ದುಡಿಯುತ್ತಿರುವುದರಿಂದ ನಾವು ನಾಲ್ಕರ ಸಮಕ್ಕೆ ತಲೆಯೆತ್ತಿ ತಿರುಗಾಡಬಹುದಾಗಿದೆ. ನಿಲ್ಲದ ಅವರ ಲೇಖನಿ ನಮ್ಮ ಜ್ಞಾನದ ಕಣಜವನ್ನು ನಿರಂತರವಾಗಿ ತುಂಬುತ್ತಿದೆ. ಒಂದು ಭಾಷೆಯ ವೈಭವ ಬೆಳಗಬೇಕಾದರೆ ಕೇವಲ ಸಾಹಿತಿಗಳಿಂದ ಮಾತ್ರ ಸಾಧ್ಯವಾಗದು. ಆ ಭಾಷೆಯ ಚರಿತ್ರಕಾರರು, ಭೂಗೋಳ ಹಾಗೂ ಅರ್ಥಶಾಸ್ತ್ರಜ್ಞರು. ತತ್ವಜ್ಞಾನಿಗಳು ಸ್ವೋಪಜ್ಞವಾಗಿ ಚಿಂತಿಸುವುದರ ಜೊತೆಗೆ ವಿಪುಲವಾದ ಶಾಸ್ತ್ರ ಸಾಹಿತ್ಯವನ್ನು ರಚಿಸಬೇಕೆಂಬುದು [illegible] ಒಪ್ಪತಕ್ಕದ್ದೇ. ಕನ್ನಡ ವೃಕ್ಷ ಸರ್ವಶಾಖೆಗಳ ಸೌಷ್ಠವದಿಂದ ನಳನಳಿಸುವಂತೆ ಸಂಕಲ್ಪಬದ್ಧರಾಗಿ ದುಡಿಯುವವರ ಪಡೆಯೊಂದು ನಿರ್ಮಾಣವಾಗಬೇಕಾಗಿದೆ.

ಪ್ರಾಪಂಚಿಕ ಹಾಗೂ ಆರ್ಥಿಕ ಜಾಗತೀಕರಣದ ಅರ್ಭಟದಲ್ಲಿ ನಮ್ಮ ನುಡಿಯನ್ನು ಜೀವಂತ ಕಾಪಾಡುವುದು ಕಷ್ಟದ ಕೆಲಸವಾಗಿದೆ. ಪರಂಪರೆ ನಮಗೆ ಬಳುವಳಿಯಾಗಿ ನೀಡಿರುವ ಭಾಷಾಸಮೃದ್ಧಿಗೆ ತಮ್ಮ ಅನನ್ಯ ಕೊಡುಗೆಗಳನ್ನು ಸೇರ್ಪಡೆ ಮಾಡಿ ಧನ್ಯರಾದ ಕವಿ ಸಾಹಿತಿಗಳನ್ನು

ಗೌರವಿಸುವ ಮಾರ್ಗ ಅನುಕರಣೀಯ ವಾದದ್ದು. ಹಿರಿಯ ಬರಹಗಾರರ 'ಗುರುತ್ವ' ವನ್ನು ಗುರ್ತಿಸುವಲ್ಲಿ ಕನ್ನಡಿಗರು ಮೈಮರೆವನ್ನು ಪ್ರದರ್ಶಿಸಿಲ್ಲ ಎಂಬುದು ಹೆಮ್ಮೆ ಪಡಬೇಕಾದ ಸಂಗತಿ.

೧೯೯೮ರಲ್ಲಿ ಹಿರಿಯ ಸಾಹಿತಿಗಳನೇಕರನ್ನು ಕಳೆದುಕೊಂಡು ನಮ್ಮ ಕಣ್ಣೀರು ಬತ್ತಿಹೋಗಿರುವ ಸಂದರ್ಭದಲ್ಲಿ ಅವರ ನಿರ್ಗಮನದಿಂದಾದ ನಷ್ಟವನ್ನು ತುಂಬಲು ನಮಗೆ ಮಾರ್ಗದರ್ಶಕರಾಗಿ ನಿಂತ ಚಿಂತಕರ ಸಾಧನೆಯನ್ನು ಕೊಂಡಾಡುವ ಹಬ್ಬವನ್ನು ಆಚರಿಸುತ್ತಿದ್ದೇವೆ. ಈ ಬಗೆಯ ಮನುಷ್ಯ ವ್ಯಾಪಾರಕ್ಕೆ ಅರ್ಥವಿದೆ. ಕ್ರಿಸ್ತ ಅಳಿದನೆಂದು ದುಃಖಿಸುತ್ತಾ ಏಕಕಾಲದಲ್ಲಿ ಕ್ರಿಸ್ತನ ಪುನರುತ್ಥಾನದ ಸಂಭ್ರಮಕ್ಕಾಗಿ ಸಂತೋಷ ಪಡುವ ಪರಿಪಾಠವುಂಟು.

೧೯೯೭ನೇ ಸಾಲಿನ ಪ್ರತಿಷ್ಠಿತ "ಪಂಪ ಪ್ರಶಸ್ತಿ" ನಾಡಿನ ಖ್ಯಾತ ಕವಿಗಳು, ಚಿಂತಕರೂ ಆದ ಡಾ|| ಜಿ. ಎಸ್. ಶಿವರುದ್ರಪ್ಪನವರಿಗೆ ಸಂದಿದೆ. ಆಯಾ ವರ್ಷದ ಪ್ರಶಸ್ತಿಯನ್ನು ವರ್ಷ ಮುಗಿಯುವ ಮೊದಲೇ ಸಲ್ಲಿಸುವುದು ಸೂಕ್ತವೆಂದು ತಿಳಿದು ಸರ್ಕಾರ ೧೯೯೮ನೇ ಸಾಲಿನ "ಪಂಪ ಪ್ರಶಸ್ತಿ"ಯನ್ನು ನಾಡಿನ ಹಿರಿಯ ಬರಹಗಾರರು, ಜೀವನ ಚರಿತ್ರಕಾರರು ಹಾಗೂ ಚಿಂತಕರಾದ ಡಾ|| ದೇಜಗೌ ಅವರಿಗೆ ನೀಡಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ದೃಷ್ಟಿಯಿಂದ ಇದೊಂದು "ಡಬಲ್ ಬೆನಿಫಿಟ್" ಎಂದರೆ ಉತ್ಪ್ರೇಕ್ಷೆಯಾಗದು. ಸುಗಮ ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿರುವ ಅಮೋಘ ಸೇವೆಗಾಗಿ ಖ್ಯಾತ ಗಾಯಕಿ ಅನುರಾಧಾ ಧಾರೇಶ್ವರ ಅವರು "ಸಂತ ಶಿಶುನಾಳ ಶರೀಫ" ಪ್ರಶಸ್ತಿಯನ್ನು ಗೆದ್ದಿದ್ದಾರೆ. ಪ್ರಸ್ತುತ ಲೇಖನ ಕವಿ ಜಿಎಸ್‌ಎಸ್ ಅವರ ವಿಚಾರಧಾರೆಯನ್ನು ಸ್ಥೂಲವಾಗಿ ತಿಳಿಸಲು ಪ್ರಯತ್ನಿಸುತ್ತದೆ.

ಆರಂಭದಲ್ಲಿ ಜಿಎಸ್‌ಎಸ್ ಅವರ ಹೃದಯ ವೈಶಾಲ್ಯತೆಯ ಬಗ್ಗೆ ಒಂದು ಘಟನೆ ನೆನಪಾಗುತ್ತದೆ. ಹತ್ತು ವರ್ಷಗಳ ಹಿಂದೆ ನನ್ನದೊಂದು ಕವನಸಂಕಲನ ಅಚ್ಚಾಗಿತ್ತು. ಬೆಂಗಳೂರಿಗೆ ಯಾವುದೋ ಕೆಲಸದ ಮೇಲೆ ಹೋಗಿದ್ದೆ; ಜಿಎಸ್‌ಎಸ್ ಆಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ನನ್ನ ಕವನಗಳನ್ನು ಅವರು ಓದಬೇಕೆಂದು ಆಸೆಯಾಯಿತು. ಅಕಾಡೆಮಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. "ಇಲ್ಲೇ ಇರುತ್ತೇನೆ ಇನ್ನೂ ಸ್ವಲ್ಪ ಸಮಯ ; ಈ ಕೂಡಲೇ ಬನ್ನಿ" ಎಂದರು. ಅಕಾಡೆಮಿ ತಲುಪಿದಾಗ ನಗುಮುಖದಿಂದ ಬರಮಾಡಿಕೊಂಡು ನನ್ನ ಸಂಕಲನದ ಕವನಗಳ ಮೇಲೆ ಕಣ್ಣಾಡಿಸಿದರು. ಅಷ್ಟರಲ್ಲಿ ಡಾ|| ಬಸವರಾಜ ಸಾದರ್ ಅಲ್ಲಿಗೆ ಬಂದರು. ನನ್ನನ್ನು ಅವರಿಗೆ ಪರಿಚಯ ಮಾಡಿಕೊಡುತ್ತಾ "ಇವರದು ಒಂದು ಒಳ್ಳೆಯ ಕವನ ಸಂಕಲನ ಬಂದಿದೆ" ಎಂದು ಹೇಳಿದರು. ಸಾದರ್ ಅವರ ವಿಚಾರವಾಗಿ "ಇವರು ಇತ್ತೀಚೆಗೆ ವಚನ ಚಳವಳಿಯ ಬಗ್ಗೆ ಒಂದು ಉತ್ತಮವಾದ ಗ್ರಂಥವನ್ನು ಪ್ರಕಟಿಸಿದ್ದಾರೆ. ವಾಸ್ತವವಾಗಿ ಅದು ಇವರ ಪಿಎಚ್‌ಡಿ ವಿಷಯವೂ ಹೌದು. ನಾನು ಮಾರ್ಗದರ್ಶಕ ಎಂಬೋದು ಇನ್ಸಿಡೆಂಟಲ್" ಎಂದು ಹೇಳಿದರು. ನಮ್ಮಿಬ್ಬರನ್ನು ಪರಸ್ಪರರಿಗೆ ಜಿಎಸ್‌ಎಸ್ ಪರಿಚಯಿಸಿದ ರೀತಿ ಬಹುಕಾಲ ಮನಸ್ಸಿನಲ್ಲಿ ಉಳಿಯುವಂತಾಗಿದೆ. ಸಂಸ್ಕೃತಿಯೊಂದನ್ನು ಕಟ್ಟುವವರ

ರೀತಿ ಇದು. ಹೊಸ ತಲೆಮಾರಿನ ಬರಹಗಾರರನ್ನು ಹುರಿದುಂಬಿಸಿ ಅವರಿಂದ ಅರ್ಥಪೂರ್ಣ ಕೆಲಸ ಆಗಲಿ ಎಂದು ಹಾರೈಸುವವರ ಹೃದಯ ವೈಶಾಲ್ಯತೆಯ ದ್ಯೋತಕ ಇದು.

ಜಿಎಸ್ಎಸ್ ಕುರಿತಾದ ಇನ್ನೊಂದು ಅನುಭವ ನೆನಪಾಗುತ್ತಿದೆ. ಹತ್ತಿರ ಹತ್ತಿರ ಕಾಲು ಶತಮಾನದ ಹಿಂದಿನ ಮಾತು. ಜಿಎಸ್ಎಸ್ ಅವರ "ಪರಿಶೀಲನ"ವೆಂಬ ವಿಮರ್ಶಾಗ್ರಂಥ ಪದವಿ ತರಗತಿಗಳಿಗೆ ಪಠ್ಯವಾಗಿದ್ದಿತು. ಶಾರದಾ ವಿಲಾಸ ಕಾಲೇಜಿನಲ್ಲಿ ನನ್ನ ವಿದ್ಯಾಭ್ಯಾಸ ಪ್ರೊ|| ಎಚ್. ಎಂ. ಶಂಕರನಾರಾಯಣರಾವ್ ಹಳಗನ್ನಡ ಕಾವ್ಯ, ಶ್ರೀ ಶಿವರಾಮ ಐತಾಳ್ ಆಧುನಿಕ ಕವಿತೆಗಳು ಹಾಗೂ ಶ್ರೀ ಸೂರ್ಯನಾರಾಯಣಸ್ವಾಮಿಯವರು ವಿಮರ್ಶೆಯನ್ನು ತೆಗೆದುಕೊಂಡಿದ್ದರು ಬೋಧನೆಗೆ. ಸುಂದರವಾದ ನುಡಿಗಟ್ಟುಗಳು ಬಂತೆಂದರೆ ಸಾಕು ಸೂರ್ಯನಾರಾಯಣಸ್ವಾಮಿಯವರು ಮೈಮರೆತು, ಕಣ್ಮುಚ್ಚಿ ಅವುಗಳನ್ನು ಪಟಪಟ ಅಂತ ಪಠಿಸಿಬಿಡುತ್ತಿದ್ದರು. ಜಿಎಸ್ಎಸ್ ಅವರ "ಪರಿಶೀಲನ" ಹೆಜ್ಜೆ ಹೆಜ್ಜೆಗೆ ಅವರಿಗೆ ತಂಗುದಾಣವನ್ನೊದಗಿಸಿತ್ತು. ಎಷ್ಟೊ ಬಾರಿ ಒಂದು ಗಂಟೆ ಪೀರಿಯಡ್‌ನಲ್ಲಿ ಒಂದು ಪುಟ ಮಾಡಿದ್ದಿದೆ. ನಿಜವಾಗಿಯೂ ಜಿಎಸ್ಎಸ್ ಕನ್ನಡದ ಕಂಪನ್ನು ಬಿತ್ತರಿಸುವ ನುಡಿಜಾಣ. ಪ್ರಾಚೀನ ಕಾವ್ಯದ ಬಂಡುಂಡು ಪರಿಪಕ್ವವಾಗಿರುವಂತೆ ಅವರ ಮನಸ್ಸು ಆಧುನಿಕ ಚಿಂತನೆಯನ್ನು ಅಷ್ಟೇ ಆಸ್ಥೆಯಿಂದ ಸ್ವೀಕರಿಸಿದೆ. ಹಾಗಾಗಿ ನಮ್ಮ ಸಂದರ್ಭದಲ್ಲಿ ಬಂದು ಹೋದ ಅನೇಕ ಸಾಹಿತ್ಯಿಕ ಚಳವಳಿಗಳಿಗೆ ಅವರು ಸಂಕೋಚಗೊಳ್ಳದೆ ಸ್ಪಂದಿಸಿದ್ದಾರೆ. ಸಮನ್ವಯ ಕವಿಯೆಂಬ ಬಿರುದಿಗೆ ಭಾಜನರಾಗಿದ್ದಾರೆ.

"ವಿದ್ಯೆ ನನಗೆ ದಕ್ಕದೇ ಹೋದರೆ ನಾನು ಯಾರ ಮನೆಯ ಚಾಕರಿಮಾಡಿ ಬದುಕುವ ಪ್ರಸಂಗ ಒದಗುತ್ತಿತ್ತೋ?" ಎಂದು ಕವಿ ಕುವೆಂಪು ಅವರು ಹೇಳಿರುವ ಮಾತು ಗ್ರಾಮೀಣ ಪ್ರದೇಶದಿಂದ ಬರುವ ಎಲ್ಲ ಮೊದಲ ತಲೆಮಾರು ವಿದ್ಯಾವಂತರ ವಿಷಯದಲ್ಲೂ ನಿಜ. ತಮ್ಮ ಜೀವನದಲ್ಲೂ ಈ ಮಾತು ನಿಜ ಎಂಬಂಶವನ್ನು ಜಿಎಸ್ಎಸ್ ಒತ್ತಿ ಹೇಳಿದ್ದಾರೆ. "ಹೋರಾಟದ ಬದುಕಿ"ನಿಂದ ಜ್ಞಾನ ಸಂಪಾದಿಸಿಕೊಂಡು ಬೆಳಗುತ್ತಿರುವ ಅನೇಕ ಚೇತನಗಳು ಇಂದು ನಮಗೆ ದಾರಿ ದೀವಿಗೆಗಳಾಗಿವೆ.

ಅಂತಸ್ಸತ್ವ ಇದ್ದದ್ದರಿಂದಲೇ ಮೆಟ್ರಿಕ್ಯುಲೇಶನ್ ಓದುವ ಹುಡುಗನಿಗೆ ಕಾರಂತರ ಉಪನ್ಯಾಸ ಮಂತ್ರದಂತೆ ಸೆಳೆಯುತ್ತದೆ; ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಥಾಮಸ್‌ಗ್ರೇಯ ಪದ್ಯವೊಂದನ್ನು ಅನುವಾದ ಮಾಡುವ ಪ್ರೇರೇಪಣೆಯಾಗುತ್ತದೆ. ಗುರು ರಾಜರತ್ನಂರ ಮೂಲಕವಾಗಿ ಮಾಸ್ತಿಯವರಿಗೆ ತಲುಪಿ ಅವರು ಅದನ್ನು ತಮ್ಮ "ಜೀವನ" ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತಾರೆ. ಅರಳುವ ಮನಸ್ಸಿಗೆ ಮುಂದೆ ಮೈಸೂರಿನ ಮಹಾರಾಜಾ ಕಾಲೇಜು ಗಾಳಿ ಗಂಧವನ್ನು ಒದಗಿಸುತ್ತದೆ. "ನಕ್ಷತ್ರ ಖಚಿತ ನಭವಾಗಿ ಗೋಚರಿಸಿದ" ಕುವೆಂಪು ಗುರು. ಆ ಅಯಸ್ಕಾಂತದ ಸಮೀಪ ಬಂದ ಯಾವ ಕಬ್ಬಿಣ ತಾನೆ ತನ್ನ ಮೂಲಗುಣವನ್ನು ಕಳೆದುಕೊಳ್ಳದಿರಲು ಸಾಧ್ಯ? ಕುವೆಂಪು, ತೀನಂಶ್ರೀ, ತ. ಸು. ಶಾ ಹಾಗೂ ಡಿಎಲ್ಎಸ್ ಅವರ ಬೌದ್ಧಿಕ ಸಂಪತ್ತನ್ನು

ತಮ್ಮದಾಗಿಸಿಕೊಂಡು ಬೆಳೆದ ಜಿಎಸ್ಎಸ್ ಪರಂಪರೆಯನ್ನು ಅರಗಿಸಿಕೊಂಡು ಅರಳ ಬೇಕಾದ ಅಗತ್ಯವನ್ನು ಮನಗಂಡರು. ಏಕೆಂದರೆ ಪರಂಪರೆಯಿಂದ ದೂರ ಉಳಿದು ಲೇಖಕನಾಗಿ ಬೆಳೆಯಲಾಗದು ಎಂಬ ಸತ್ಯ ಅವರಿಗೆ ಪ್ರಕಾಶವಾಯಿತು.

ಕಾವ್ಯ ಜಗತ್ತಿನಲ್ಲಿ ಭೂಮಸದೃಶರಾಗಿ ಗೋಚರರಾದ ಕುವೆಂಪು ಮೊದಲಾದ ನವೋದಯ ಕವಿಗಳಿಂದ ಕಲಿತು ಅವರಿಗಿಂತ ಭಿನ್ನವಾದ ಧ್ವನಿಯನ್ನು ಕಂಡುಕೊಳ್ಳಲು ಜಿಎಸ್ಎಸ್ ಪ್ರಯತ್ನಿಸಿದರು. ನಮ್ಮ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಕವಿ ಮತ್ತು ಕಾವ್ಯ ಪ್ರಸ್ತುತವಾಗಬೇಕಾದರೆ ಪ್ರೀತಿಯ ಅನ್ವೇಷಣೆ ಹಾಗೂ ಮಾನ ವೀಯತೆ ಬಹಳ ಮುಖ್ಯವೆಂದು ಹೊಳೆ ಯಿತು. ಒಂದರ್ಥದಲ್ಲಿ ನವೋದಯ, ನವ್ಯ ವನ್ನು ದಾಟಿ ದಲಿತ-ಬಂಡಾಯದ ಆಶಯ ಗಳನ್ನು ಬಿಂಬಿಸುವ ಮಾರ್ಗದಲ್ಲಿ ಈ ಕವಿಯ ಮನಸ್ಸು ಧ್ಯಾನಿಸಿರುವುದನ್ನು ಈ ಬೆಳವಣಿಗೆಯಿಂದ ಗುರ್ತಿಸಬಹುದಾಗಿದೆ. ಕಾಲ ಬದಲಾದಂತೆ ತಮ್ಮ ನರ್ತನ ವಿಧಾನ ವನ್ನು ಬದಲಾಯಿಸಿಕೊಂಡು ಪ್ರಸ್ತುತ ವಾಗಲು ಪ್ರಯತ್ನಿಸುವ ವಿಧಾನ ಇದೆಂದು ಹಗುರವಾಗಿ ಮಾತನಾಡುವವರೂ ಉಂಟು. ಆದರೆ ವಿಕಸನಕ್ಕೆ ಮನಸ್ಸು ತೆರೆದುಕೊಂಡು ಹೊಸದರ ಅನ್ವೇಷಣೆಯಲ್ಲಿ ಸದಾ ಜಾಗೃತ ನಾದ ಕವಿಯ ಅಂತರಂಗ ಹೊರಗಿನವರಿಗೆ ಅರ್ಥವಾಗುವುದಿಲ್ಲ; ಆ ಅರ್ಥದಲ್ಲಿ ಜಿಎಸ್ಎಸ್ ಜಯಿಸಿರುವ ಕವಿ. ಕನ್ನಡ ದಂಥ ಶ್ರೀಮಂತ ಸಂಸ್ಕೃತಿಗೆ ವಾರಸುದಾರ ರಾಗುವುದು ಒಂದು ರೀತಿಯಲ್ಲಿ ಪುಣ್ಯ ಇನ್ನೊಂದು ರೀತಿಯಲ್ಲಿ ದೊಡ್ಡ ಸವಾಲು. ಅಪ್ಪರಿಂಪಲೇ ಇತ್ತೀಚಿನ ಸಂದರ್ಶನವಲ್ಲಿ ಅವರು ಹೇಳುತ್ತಾರೆ. "....ಸದ್ಯಕ್ಕಂತೂ ಅಧ್ಯಾತ್ಮ, ವೈಚಾರಿಕತೆ, ಅನುಭಾವದ ಸಿದ್ಧ ಮಾರ್ಗಗಳು ನಮ್ಮ ಕಣ್ಣ ಮುಂದೇ ಇವೆ. ಆದರೆ ಇಂಥ ಮಾರ್ಗಗಳು ಎಷ್ಟು ಹೆಚ್ಚಿ ದರೆ ಅಷ್ಟು ಒಳ್ಳೆಯದು. ಆದುದರಿಂದಲೇ ಪ್ರತಿಯೊಬ್ಬ ಕವಿ ಕೂಡ ತನ್ನದೇ ದಾರಿ ಹುಡುಕುವ ಪ್ರಯತ್ನ ಮಾಡುತ್ತಲೇ ಇರ ಬೇಕು."

ಮೈಸೂರು ಹಾಗೂ ಬೆಂಗಳೂರು ವಿಶ್ವ ವಿದ್ಯಾನಿಲಯಗಳಲ್ಲಿ ಬೋಧಕರಾಗಿ ಸಹಸ್ರಾರು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿ ರುವ ಜಿಎಸ್ಎಸ್ ತಮ್ಮ ಸಾಹಿತ್ಯ ಕೃತಿ ಗಳಿಗಾಗಿ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಅವರ ಸಮಗ್ರ ಗದ್ಯ ಸಂಪುಟಗಳು ಬೆಳಕು ಕಾಣುತ್ತಿರುವ ಈ ಹೊತ್ತಿನಲ್ಲಿ "ಸೌಂದರ್ಯ ಸಮೀಕ್ಷೆ" ಹಾಗೂ "ಕಾವ್ಯಾರ್ಥ ಚಿಂತನ" ದಂಥ ಕೃತಿಗಳ ಮಹತ್ವ ಎದ್ದು ಕಾಣು ತ್ತಿದೆ. ಅವರ ಹತ್ತಾರು ಕವನ ಸಂಕಲನ ಗಳಲ್ಲಿ ಹಂಚಿಹೋಗಿದ್ದ ಉತ್ತಮ ಕವನ ಗಳು ಅವರ "ಆಯ್ದ ಕವನಗಳಲ್ಲಿ" ಲಭ್ಯ ವಾಗಿವೆ. ವಯಸ್ಸಿನ ಸ್ಪರ್ಶದಿಂದ ಕೊಂಚ ಬಳಲಿದಂತೆ ಕಂಡರೂ ಇಳಿವಯಸ್ಸಿನ

ಮಾತ್ರ ದಕ್ಕುವ ಜ್ಞಾನಪ್ರಭೆಯಿಂದ ಜಿಎಸ್‌ಎಸ್ ಹೊಳೆಯುತ್ತಾರೆ ಈ ಲೋಕದಲ್ಲಿ ಹುಟ್ಟುವವರಿಗೆ ಲೆಕ್ಕವಿಲ್ಲ, ಹೋಗುವವರಿಗೆ ಲೆಕ್ಕವಿಲ್ಲ; ಹಾಗಿರಲಾಗಿ, ತಮ್ಮ ಜೀವಿತಾವಧಿಯಲ್ಲಿ ಒಟ್ಟು ಸಮಾಜದ ಬಗ್ಗೆ ಚಿಂತಿಸುತ್ತಾ, ತಮ್ಮ ತಾಯ್ನಾಡಿಗೆ, ತಾಯ್ನುಡಿಗೆ ತಮ್ಮ ಕಾಣಿಕೆಯನ್ನು ಅರ್ಪಿಸಿ ಕೃತಾರ್ಥರಾಗುವಂಥ ಮಹನೀಯರೇ ನಿಜವಾಗಿ ಪುಣ್ಯವಂತರು. ನಿಸ್ಸಂದೇಹವಾಗಿ ಜಿಎಸ್‌ಎಸ್ ಅಂಥವರ ಸಾಲಿನಲ್ಲಿ ಬರತಕ್ಕವರು. ಅವರ ನುಡಿಸೇವೆ ನಿಲುಗಡೆರಹಿತವಾಗಿ ನಡೆಯಲೆಂದು ಹಾರೈಸೋಣ.



ಪ್ರೀತಿ ಇಲ್ಲದ ಮೇಲೆ
ಸಂಶಯದ ಗಡಿಗಳುದ್ದಕ್ಕು
ಸಿಡಿ ಗುಂಡುಗಳ ಕದನ ನಿಂತೀತು ಹೇಗೆ ?
ಜಾತಿ ಮತ ಭಾಷೆ ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ ?

(ಪ್ರೀತಿ ಇಲ್ಲದ ಮೇಲೆ)
ಜಿಎಸ್‌ಎಸ್

ಎದೆತುಂಬಿ ಹಾಡಿದ ಕವಿ

ಪ್ರೊ|| ಪರಮೇಶ
೭೫೮, ಇ./ಎಫ್. ಬ್ಲಾಕ್ ಕುವೆಂಪುನಗರ
ಮೈಸೂರು-೨೩

ನವೋದಯ ಕಾವ್ಯದ ಎರಡನೆಯ ತಲೆಮಾರಿನ ಕವಿಗಳಲ್ಲಿ ಅತ್ಯಂತ ಮಹತ್ವದ ಕವಿ ಎಂದು ಖ್ಯಾತಿ ಪಡೆದ ಕವಿ ಡಾ|| ಜಿ. ಎಸ್. ಶಿವರುದ್ರಪ್ಪ ಅವರು. ನವೋದಯ ಕಾವ್ಯ ಮಾರ್ಗಕ್ಕೆ ಮಾರುಹೋಗಿ ಕಾವ್ಯ ಜಗತ್ತನ್ನು ಪ್ರವೇಶಿಸಿದ ಜಿ. ಎಸ್. ಎಸ್. ಅವರು ನವ್ಯ ದಲಿತ ಮತ್ತು ಬಂಡಾಯ ಮಾರ್ಗಗಳಲ್ಲಿ ಕಾವ್ಯ ರಚಿಸಿದರೂ, ಯಾವ ಪಂಥಕ್ಕೂ ಅಂಟಿಕೊಳ್ಳದೆ ಎಲ್ಲದರ ಪ್ರಭಾವ ಪರಿಣಾಮಗಳನ್ನು ಅರಗಿಸಿಕೊಂಡು ತಮ್ಮ ಸ್ವೋಪಜ್ಞತೆಯನ್ನು ಮೆರೆದ ಕವಿ. ಪ್ರತಿಭೆ, ಪಾಂಡಿತ್ಯ ಮತ್ತು ಸಹೃದಯತೆಯ ಅಪೂರ್ವ ವ್ಯಕ್ತಿತ್ವ. ಕುವೆಂಪು ಅವರಿಂದ ಕನ್ನಡದ ದೀಕ್ಷೆಯನ್ನು ಪಡೆದು, ಅವರ ಮಾರ್ಗದರ್ಶನದಲ್ಲಿ ಕನ್ನಡದ ಕೈಂಕರ್ಯಕ್ಕೆ ಕಂಕಣತೊಟ್ಟು, ಸುಮಾರು ನಾಲ್ಕು ದಶಕಗಳಿಂದಲೂ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಬಗ್ಗೆ ಅವರು "ಯಾರಿಗೂ ತಲೆಬಾಗದೆ ನಿಲ್ಲುವಂಥ ಕೆಚ್ಚು, ಧೈರ್ಯಗಳನ್ನು ನಾನು ಕಂಡದ್ದು ಪುಟ್ಟಪ್ಪನವರಲ್ಲಿ. ನಿಜವಾಗಲೂ ಕನ್ನಡ ಸಾಹಿತ್ಯದ ಸತ್ವವನ್ನು ಮೈಗೂಡಿಸಿಕೊಂಡರೆ ವ್ಯಕ್ತಿತ್ವಕ್ಕೆ ಯಾವ ತೇಜಸ್ಸು ಬರುತ್ತದೆಂಬುದನ್ನು ನಾನು ಅವರಲ್ಲಿ ಕಂಡೆ. ಪುಟ್ಟಪ್ಪನವರು ಹೊಸ ಹೊಸ ಬೀಗದ ಕೈ ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯವನ್ನು ನೋಡುವ ಬೇರೆ ಒಂದು ದೃಷ್ಟಿಯನ್ನು ನನಗೂ ನನ್ನಂಥ ಅನೇಕರಿಗೂ ಅವರು ಕೊಟ್ಟರು. ನನ್ನ ಜೀವನದಲ್ಲಿ ಉಜ್ವಲವಾದ ಕಾಲ ಪುಟ್ಟಪ್ಪನವರ ಶಿಷ್ಯನಾಗಿದ್ದುದು" ಎಂದು ಹೆಮ್ಮೆಯಿಂದ ಜಿ.ಎಸ್.ಎಸ್. ಹೇಳಿಕೊಳ್ಳುತ್ತಾರೆ.

ತಂದೆ ಶಾಂತವೀರಪ್ಪ, ತಾಯಿ ವೀರಮ್ಮ, ಇವರು ಮೂಲತಃ ಧಾರವಾಡ ಜಿಲ್ಲೆಯ ಗುಗ್ಗರಿ ಗ್ರಾಮದವರು. ತಂದೆ ಶಾಲಾ ಉಪಾಧ್ಯಾಯರು. ಶಿಕಾರಿಪುರದಲ್ಲಿ ೭–೧೨–೧೯೨೬ ರಂದು ಶಿವರುದ್ರಪ್ಪನವರು ಜನಿಸಿದರು. ಬಾಲ್ಯದ ವಿದ್ಯಾಭ್ಯಾಸ ಹೊನ್ನಾಳಿ, ಕೋಟೆಹಾಳ, ರಾಮಗಿರಿ ಮತ್ತು ಬೆಲಗೂರುಗಳಲ್ಲಿ ನಡೆದರೆ, ಪ್ರೌಢಶಾಲೆಯ ವಿದ್ಯಾಭ್ಯಾಸ ದಾವಣಗೆರೆ ಮತ್ತು ತುಮಕೂರುಗಳಲ್ಲಿ ನಡೆಯುತ್ತದೆ. ಶಾಲಾ ಮಾಸ್ತರರ ಗಳಿಕೆಯಿಂದ ಜೀವನ ನಿರ್ವಹಣೆ ಕಷ್ಟವೆಂದು ಕಂಡು ಬಂದಾಗ ತಂದೆಯವರು ಅನಿವಾರ್ಯವಾಗಿ ಮಗನ ಹೆಗಲ ಮೇಲೆ ಸಂಸಾರದ ನೊಗ ಹೊರಿಸುತ್ತಾರೆ. ಹಾಗಾಗಿ ಗುಬ್ಬಿ, ಬೆಂಗಳೂರುಗಳಲ್ಲಿ ತಮ್ಮ ಪ್ರವೃತ್ತಿಗೆ ಒಗ್ಗದ ಕಾರಕೂನಿಕೆ ಮಾಡಿ ಹಣಗಳಿಸಿ ಕನ್ನಡ ಆನರ್ಸ್ ಸೇರಬೇಕಾದ

ಅನಿವಾರ್ಯ ಪರಿಸ್ಥಿತಿ. ಶ್ರೀ ಸಿದ್ಧಗಂಗಾ ಮಠದ ಆಶ್ರಯದಲ್ಲಿದ್ದು ಇಂಟರ್ ವಿದ್ಯಾಭ್ಯಾಸ ನಡೆಸುತ್ತಿದ್ದಾಗ ಆಶ್ರಮದ ಪವಿತ್ರ ವಾತಾವರಣ ಹಾಗೂ ಶ್ರೀಗಳ ಪ್ರಭಾವ ಅವರ ಮೇಲೆ ಸಾಕಷ್ಟು ಪರಿಣಾಮ ಬೀರಿದುದರಲ್ಲಿ ಆಶ್ಚರ್ಯವೇನಿಲ್ಲ. ಬಾಲ್ಯದಿಂದಲೂ ಅಂತರ್ಮುಖಿಯಾದ ಶಿವರುದ್ರಪ್ಪನವರು, ಶಾಲೆಗಳ ಪುಸ್ತಕ ಭಂಡಾರದ ಸದುಪಯೋಗ ಮಾಡಿಕೊಳ್ಳುತ್ತಾರೆ. ಗೋವಿನ ಹಾಡು ಕಾರಂತರ ಬಾಲ ಪ್ರಪಂಚ, ಡಿವಿಜಿಯವರ ಮಂಕುತಿಮ್ಮನ ಕಗ್ಗ ಬಾಲ್ಯದಲ್ಲಿ ತನ್ನ ಮೇಲೆ ಪ್ರಭಾವ ಬೀರಿದ ಕೃತಿಗಳು. ಪ್ರೌಢಶಾಲಾ ಹಂತದಲ್ಲಿ ಕುವೆಂಪು ಅವರ ಕವಿತೆ ಹಾಗೂ ನಾಟಕಗಳು ಮಾಡಿದ ಮೋಡಿ ಅವರ್ಣನೀಯವಾದದ್ದು ಎಂದು ಸ್ಮರಿಸಿಕೊಳ್ಳುತ್ತಾರೆ.

ತುಮಕೂರಿನಲ್ಲಿ ಇಂಟರ್ ಮುಗಿಸಿ ೧೯೪೬ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಆನರ್ಸ್ ಸೇರುತ್ತಾರೆ. ಗುರುಗಳಾದ ಎ. ಆರ್. ಕೃ, ಕುವೆಂಪು, ಡಿ. ಎಲ್. ಎನ್., ತೀನಂಶ್ರೀ ಮೊದಲಾದವರ ಮಾರ್ಗದರ್ಶನದಲ್ಲಿ ಕನ್ನಡ ಸಾಹಿತ್ಯದ ಅಭ್ಯಾಸದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಶಿಷ್ಯವತ್ಸಲರಾದ ತ. ಸು. ಶಾಮರಾಯರ ಕೃಪಾದೃಷ್ಟಿಗೆ ಪಾತ್ರರಾದುದು, ಅವರ ಜೀವನದ ತಿರುವಿಗೆ ಕಾರಣವಾಯಿತು. ತಸುಶಾ ಅವರನ್ನು ಕುರಿತು "ಅವರು ನನ್ನ ಗುರು, ಹಿರಿಯಣ್ಣ ಹಾಗೂ ತಮ್ಮ ಕಾವ್ಯದ ಪ್ರಥಮ ಸಹೃದಯ ಎಲ್ಲ ಆಗಿದ್ದರು. ನನ್ನ ಅಸ್ತವ್ಯಸ್ತವಾದ ಬದುಕಿನಲ್ಲಿ ಅವರಿಂದ ನನಗೆ ಆಗಿರುವ ಉಪಕಾರ ಈ ಜನ್ಮದಲ್ಲಿ ಎಣಿಸಿ ಮುಗಿಸುವುದು ಸಾಧ್ಯವಿಲ್ಲ" ಎನ್ನುತ್ತಾರೆ. ೧೯೪೯ರಲ್ಲಿ ಕನ್ನಡ ಬಿ. ಎ. ಆನರ್ಸ್‌ನಲ್ಲಿ ಪ್ರಪ್ರಥಮ ಸ್ಥಾನ ಪಡೆದು ಉತ್ತೀರ್ಣರಾದ ಕೂಡಲೇ ದಾವಣಗೆರೆಯ ಡಿ. ಆರ್. ಎಂ. ಕಾಲೇಜಿಗೆ ಅಧ್ಯಾಪಕರಾಗಿ ನೇಮಕಗೊಂಡು ಅಚ್ಚುಮೆಚ್ಚಿನ ಅಧ್ಯಾಪಕರಾಗುತ್ತಾರೆ. ಅಲ್ಲಿಂದ ಎಂ. ಎ ವ್ಯಾಸಂಗಕ್ಕಾಗಿ ಮತ್ತೆ ಮೈಸೂರಿಗೆ ಬರುತ್ತಾರೆ. ಅಧ್ಯಾಪಕ ವಿದ್ಯಾರ್ಥಿಯಾಗಿ ಎಂ. ಎ. ವ್ಯಾಸಂಗ ಮುಂದುವರಿಸಿ ವಿಶ್ವವಿದ್ಯಾನಿಲಯಕ್ಕೆ ಪ್ರಪ್ರಥಮ ಸ್ಥಾನ ಪಡೆದು ೩ ಚಿನ್ನದ ಪದಕಗಳನ್ನು ಗಳಿಸುತ್ತಾರೆ. ಎಂ. ಎ ಪದವಿ ಪಡೆದ ನಂತರ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಕೆಲವು ಕಾಲ ಅಧ್ಯಾಪಕರಾಗಿ ೧೯೫೫ರಲ್ಲಿ ಸಂಶೋಧನಾ ಶಿಷ್ಯವೇತನ ಪಡೆದು, ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದುಕೊಂಡು ಕುವೆಂಪು ಅವರ ಮಾರ್ಗದರ್ಶನದಲ್ಲಿ 'ಸೌಂದರ್ಯ ಸಮೀಕ್ಷೆ' ಎಂಬ ವಿಷಯದಲ್ಲಿ ಅಧ್ಯಯನ ನಡೆಸಿ ಡಾಕ್ಟರೇಟ್ ಪಡೆಯುತ್ತಾರೆ. ಅನಂತರ ಮಾನಸ ಗಂಗೋತ್ರಿಯಲ್ಲಿ ಕೆಲವು ಕಾಲ ಸ್ನಾತಕೋತ್ತರ ತರಗತಿಗಳ ಬೋಧನೆಯಲ್ಲಿ ನಿರತರಾಗುತ್ತಾರೆ. ಬಳಿಕ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರ ಹುದ್ದೆ ಅವರನ್ನು ಕೈ ಬೀಸಿ ಕರೆಯಿತು. ಎರಡು ವರ್ಷಗಳು ಅಲ್ಲಿ ವಿಭಾಗ ಕಟ್ಟಿ, ಬೆಳೆಸಿ ಮತ್ತೆ ಮೈಸೂರಿಗೆ ಹಿಂದಿರುಗಿದರು. ಬೆಂಗಳೂರು ವಿಶ್ವವಿದ್ಯಾನಿಲಯ ಆರಂಭವಾದಾಗ ಮಾತೃ ಸಂಸ್ಥೆಯಾದ ಮೈಸೂರು ವಿಶ್ವವಿದ್ಯಾನಿಲಯ ತೊರೆದು ರೀಡರ್ ಆಗಿ

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸೇರಿ, ಜ್ಞಾನಗಂಗೋತ್ರಿಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕನ್ನಡದ ಸಾರಥ್ಯವನ್ನು ವಹಿಸಿಕೊಂಡರು.

ಜಿ. ಎಸ್. ಎಸ್. ಅವರು ಅಧ್ಯಾಪಕರಾಗಲೆಂದೇ ಹುಟ್ಟಿದವರು ಎನಿಸುತ್ತದೆ. ಅಚ್ಚ ಬಿಳಿ ಕಚ್ಚೆ ಪಂಚೆ, ತುಂಬು ಕಾಲರಿನ ಕೋಟು, ಎತ್ತರದ ನೈ ಕಟ್ಟು ಚಿನ್ನದ ಕಟ್ಟಿನ ಕನ್ನಡಕದೊಳಗೆ ಮಿಂಚುವ ಕಣ್ಣುಗಳು. ಮೊದಲ ನೋಟಕ್ಕೆ ಎಂಥವರನ್ನೂ ಆಕರ್ಷಿಸಬಲ್ಲ ವಿಶಿಷ್ಟ ವ್ಯಕ್ತಿತ್ವ ಅವರದು.

ಕುವೆಂಪು, ತೀನಂಶ್ರೀ, ಡಿ. ಎಲ್. ಎನ್. ಮತ್ತು ತಸುಶಾ ಅವರಂಥ ಅಧ್ಯಾಪಕರ ಪ್ರಭಾವಲಯದಲ್ಲಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು, ಆ ಗುರುಪರಂಪರೆಯನ್ನು ಮುಂದುವರಿಸಿದ ಮತ್ತು ಅಧ್ಯಾಪಕ ವೃತ್ತಿಗೆ ಘನತೆ ತಂದು ಕೊಟ್ಟವರು ಜಿ. ಎಸ್. ಎಸ್. ಬೋಧನಾ ವಿಷಯದ ಬಗ್ಗೆ ದೀರ್ಘಕಾಲದ ಚಿಂತನೆಯ ಪೂರ್ವಸಿದ್ಧತೆ, ಆಕರ್ಷಕವಾದ ಶೈಲಿಯಲ್ಲಿ ವಿಷಯ ಮಂಡಿಸುವ ಬಗೆ, ವಿಮರ್ಶಾತ್ಮಕ ಹಾಗೂ ತರ್ಕಬದ್ಧವಾದ ಸರಣಿಯಿಂದ ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ ಸ್ಪಷ್ಟಪಡಿಸುವ ರೀತಿ, ಎಲ್ಲವನ್ನೂ ತೌಲನಿಕವಾಗಿ ತೂಗಿ ನೋಡುವ ಸಮನ್ವಯ ದೃಷ್ಟಿಯಿಂದ ಹೊಮ್ಮುವ ಒಳನೋಟಗಳಿಂದ ಅವರ ಬೋಧನಾಕ್ರಮ ವಿಶಿಷ್ಟವಾದುದು. ಇವರಿಂದ ಉಪಕೃತರಾದ ಅನೇಕ ತರುಣ ಅಧ್ಯಾಪಕರು ಇಂದು ಕನ್ನಡ ಸಾಹಿತ್ಯದ ವಿಮರ್ಶೆಯ ಕ್ಷೇತ್ರದಲ್ಲಿ ಹೊಸ ಮಾರ್ಗದ ನಿರ್ಮಾಣ ಮಾಡಿ, ಕನ್ನಡ ವಿಮರ್ಶೆ ಬೆಳೆಯಲು ಕಾರಣಕರ್ತರಾಗಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಅವಧಿಯನ್ನು ಅವರ ಜೀವನದ ಮಹತ್ವದ ಘಟ್ಟವೆಂದು ಗುರುತಿಸಬಹುದು. ಹಲವು ಭಾಷೆಗಳ ಆಕ್ರಮಣಕ್ಕೊಳಗಾಗಿದ್ದ ಕನ್ನಡ ರಾಜಧಾನಿ ಬೆಂಗಳೂರಲ್ಲಿ ಕನ್ನಡ ನಿರ್ಲಕ್ಷ್ಯಕ್ಕೊಳಗಾಗಿದ್ದ ಸಂದರ್ಭದಲ್ಲಿ ಕನ್ನಡ ಅಧ್ಯಯನ ಕೇಂದ್ರದ ಮುಖ್ಯರಾಗಿ ಕನ್ನಡಪರವಾದ ಕಾರ್ಯಚಟುವಟಿಕೆಗಳಿಗೆ ವ್ಯವಸ್ಥಿತ ರೂಪನೀಡಿ ವಿಚಾರಪೂರ್ಣ ಸಾಹಿತ್ಯ ಸಂಕಿರಣಗಳ ಸಂಚಾಲಕರಾಗಿ, ಮಹತ್ವಪೂರ್ಣ ಪ್ರಕಟಣೆಗಳ ಸಂಪಾದಕರಾಗಿ ಕನ್ನಡದ ಅಸ್ತಿತ್ವಕ್ಕೆ ಭದ್ರ ಬುನಾದಿ ಹಾಕಿದರು. ಅವರು ನಡೆಸಿದ ವಿಚಾರ ಸಂಕಿರಣಗಳು ಅವರ ನಿರ್ಮಲ, ಸದಭಿರುಚಿಯ ದ್ಯೋತಕವಾಗಿವೆ. ರಮ್ಯ–ನವ್ಯ ಕಾವ್ಯಮಾರ್ಗಗಳ ಗುಣದೋಷಗಳ ವಿಶ್ಲೇಷಣೆ, ಆಧುನಿಕ ರಂಗಭೂಮಿ ಸಮಸ್ಯೆಗಳ ಪರಿವೀಕ್ಷಣೆ, ಪಂಪನ ಕಾವ್ಯಗಳ ಮೌಲ್ಯವಿವೇಚನೆ ಮೊದಲಾದವು ಕನ್ನಡ ವಿಮರ್ಶೆ ಹೊಸ ದಿಕ್ಕಿನಲ್ಲಿ ಬೆಳೆಯಲು ಕಾರಣೀಭೂತವಾದುವು. ಈ ಬಗ್ಗೆ ಅವರು "ಭಿನ್ನ ಮನೋಧರ್ಮದ, ಭಿನ್ನ ಅಭಿರುಚಿಯ ಭಿನ್ನ ದೃಷ್ಟಿಕೋನದ ಲೇಖಕರು ಒಂದೆಡೆ ಸೇರಿ ಮುಕ್ತ ಮನಸ್ಸಿನಿಂದ ವಿಚಾರ ಮಾಡಲು ಅನುಕೂಲವಾಗುವಂಥ ವೇದಿಕೆಯನ್ನು ನಿರ್ಮಾಣ ಮಾಡುವುದೇ ಈ ವಿಚಾರಸಂಕಿರಣದ ಉದ್ದೇಶ.....ಲೇಖಕರನ್ನು ಒಂದೆಡೆ ಕೂಡಿಸುವುದರ ಜೊತೆಗೆ ಒಳ್ಳೆಯ ವಿಮರ್ಶೆಯ ಬೆಳವಣಿಗೆಗೂ ಇಂಥ ವಿಚಾರ ಸಂಕಿರಣಗಳಿಂದ ಅನುಕೂಲವಾಗುತ್ತದೆ" ಎನ್ನುತ್ತಾರೆ. ಈ ವಿಚಾರ ಸಂಕಿರಣಗಳು

ಕನ್ನಡನಾಡಿನ ವಿದ್ವಜ್ಜನರ ಗಮನ ಸೆಳೆದುದಲ್ಲದೆ, ಕನ್ನಡ ವಿಮರ್ಶಾ ಕ್ಷೇತ್ರಕ್ಕೆ ಹೊಸ ಆಯಾಮವನ್ನೊದಗಿಸಿತು.

ಕೇವಲ ವ್ಯಾವಹಾರಿಕ ಗೊಂದಲಗಳ ಬೀಡಾಗಿದ್ದ ಬೆಂಗಳೂರಿನ ಬರಡು ವಾತಾವರಣದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ವಿದ್ಯಾವಾವರಣವನ್ನು ಸೃಷ್ಟಿಸಿ, ಅಷ್ಟರಲ್ಲಿಯೇ ತೃಪ್ತಿಪಟ್ಟುಕೊಳ್ಳದ ಅವರ ಸೃಜನಶೀಲ ವ್ಯಕ್ತಿತ್ವ ಸಾಹಿತ್ಯ ಸೃಷ್ಟಿಯಲ್ಲಿ ನಡೆಸಿದ ಸಾಧನೆ ಗಮನಾರ್ಹವಾದುದು.

ಸ್ವತಃ ಅಧ್ಯಾಪಕರ ಮಗನಾಗಿ, ಅಧ್ಯಾಪಕ ವೃತ್ತಿಯ ಬಗೆಗೆ ವಿಶೇಷ ಗೌರವವನ್ನುಳ್ಳ ಜಿ.ಎಸ್.ಎಸ್. ಉನ್ನತ ಮಟ್ಟದ ಬೋಧಕರಾಗಿ ಸಹಸ್ರಾರು ವಿದ್ಯಾರ್ಥಿಗಳಿಗೆ ಶ್ರದ್ಧೆಯಿಂದ ಪಾಠ ಹೇಳಿ, ಅವರನ್ನು ಸಾಹಿತ್ಯದ ಪರಿಚಾರಿಕೆಯಲ್ಲಿ ಉದ್ಯುಕ್ತರಾಗುವಂತೆ ಪ್ರೇರೇಪಿಸಿದ್ದಾರೆ. ಅಲ್ಲದೆ ಕಾವ್ಯ ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ ಕೃಷಿ ನಡೆಸಿ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿ ಕುವೆಂಪು, ತೀನಂಶ್ರೀ ಅಂಥವರ ಮೆಚ್ಚಿಕೆಗೆ ಪಾತ್ರರಾದರು.

'ಸಾಮಗಾನ'ದಿಂದ ಆರಂಭವಾದ ಇವರ ಕಾವ್ಯ ಕೃಷಿ ಇನ್ನೂ ನಿರಂತರವಾಗಿ ಸಾಗಿದೆ. ಚೆಲುವು ಒಲವು, ದೀಪದ ಹೆಜ್ಜೆ, ತೆರೆದ ದಾರಿ, ದೇವಶಿಲ್ಪ, ಅನಾವರಣ, ಗೋಡೆ, ನನ್ನ ನಿನ್ನ ನಡುವೆ, ಪ್ರೀತಿ ಇಲ್ಲದ ಮೇಲೆ, ಕಾಡಿನ ಕತ್ತಲಲ್ಲಿ ಮೊದಲಾದ ೧೨ ಕವನ ಸಂಕಲನಗಳು ಹೊರಬಂದಿವೆ.

ಶಿವರುದ್ರಪ್ಪ ಚೆಲುವಿನ ಆರಾಧಕರು. ಅವರ ಕಾವ್ಯದ ಪ್ರಮುಖ ಲಕ್ಷ್ಯ ಬೆರಗು. ಈ ಲೋಕದ ಹಲವು ಬಗೆಯ ಚೆಲುವು ಕವಿಯಲ್ಲಿ ಪ್ರೇರಿಸುವ ಬೆರಗೇ ಅವರ ಪರಿಭಾವನೆಯ ವಸ್ತುವಾಗುತ್ತದೆ. ಈ ಬೆರಗು ಅವರ ಕಾವ್ಯದುದ್ದಕ್ಕೂ ಬೆಳೆದು ವೈಭವಗೊಂಡಿರುವ ರೀತಿಯನ್ನು ಹಾಗೂ ಪ್ರಕೃತಿ ಸೌಂದರ್ಯ ಚಿತ್ರ ಸೌಂದರ್ಯದಲ್ಲಿ ನೆಲೆಗೊಂಡು ಅದರ ಆಚೆಗೆ ಆಗಾಗ ದೃಷ್ಟಿ ಹಾಯಿಸುವುದನ್ನು" ಅವರ ಮೊದಲ ಕವನಗಳಲ್ಲಿಗುರುತಿಸಬಹುದು. ಪ್ರಕೃತಿಯ ಲೀಲಾ ಸೌಂದರ್ಯವನ್ನು ಶಿಶುಸಹಜವಾದ ಮುಗ್ಧ ಸ್ವಭಾವದಿಂದ ಕಂಡು ಆ ಚೆಲುವಿಗೆ ಮಾರುಹೋದ ಕವಿಹೃದಯದ ಪ್ರತಿಕ್ರಿಯೆಯು ಸಹಜ ಸುಂದರ ಕಲ್ಪನೆಗಳು ನವುರಾದ ಭಾವಗಳಲ್ಲಿ ಅಭಿವ್ಯಕ್ತಿಪಡೆದಿರುವುದನ್ನು ಅವರ ಮೊದಲ ಸಂಕಲನಗಳಾದ ಸಾಮಗಾನ ಚೆಲುವು–ಒಲವು ಮತ್ತು ಕಾರ್ತಿಕಗಳಲ್ಲಿ ಕಾಣಬಹುದು. ದೇವಶಿಲ್ಪ, ದೀಪದ ಹೆಜ್ಜೆ, ತೆರೆದದಾರಿ ಮೊದಲಾದ ಇತ್ತೀಚಿನ ಕೃತಿಗಳಲ್ಲಿ ನವೋದಯದ ಹಾದಿಯಲ್ಲಿ ನಡೆಯುತ್ತಿದ್ದ ಕವಿ ನವ್ಯದ ಕಡೆಗೆ ಹೊರಳುವ ಪರಿಯನ್ನು ಗುರುತಿಸಬಹುದು. ದೀಪದ ಹೆಜ್ಜೆ ಸಂಕಲನ ಜಿ.ಎಸ್.ಎಸ್. ಅವರ ಕಾವ್ಯ ಜೀವನದ ಒಂದು ಪ್ರಮುಖ ಘಟ್ಟ. ಈ ಸಂಕಲನದಲ್ಲಿ ಮಾನವ ಅಂತರಂಗ ಮತ್ತು ಮಾನವ ಕಾಲ ಹೀಗೆ ಬದುಕಿನ ಸಮಸ್ಯೆಯ ಎರಡು ಮುಖಗಳನ್ನು ಕಾಣಬಹುದು ಎಂಬುದು ವಿಮರ್ಶಕರ ಅಭಿಪ್ರಾಯವಾಗಿದೆ. ಕಾಲ ಮತ್ತು ಮನುಷ್ಯ ಇವೆರಡು ತಮ್ಮ ಕಾವ್ಯದ ಕೇಂದ್ರಗಳು ಮಾನವೀಯತೆ ಮತ್ತು ಪ್ರೀತಿಯ ಅನ್ವೇಷಣೆಯೇ ನನ್ನ ಕಾವ್ಯದ ಮುಖ್ಯ ಕಾಳಜಿ ಎಂದು ಕವಿ ಭಾವಿಸಿದ್ದಾರೆ. ಚಿರನೂತನವಾದ ತಮ್ಮ ಕಾವ್ಯಪ್ರತಿಭೆಯ ಮೂಲಕ ಜೀವನವನ್ನು ಇಡಿಯಾಗಿ

ಕಾಣುವ ಸತತ ಪ್ರಯತ್ನದಲ್ಲಿ ಕವಿ ಜೀವ ಉದ್ಯುಕ್ತವಾಗಿದೆ.

ಶಿವರುದ್ರಪ್ಪನವರು ಪ್ರಧಾನತಃ ಕವಿಯಾದರೂ ಗದ್ಯಪ್ರಕಾರದಲ್ಲೂ ಹಲವು ಶ್ರೇಷ್ಠ ಕೃತಿಗಳನ್ನು ರಚಿಸಿ ಸವ್ಯಸಾಚಿಯೆನಿಸಿದ್ದಾರೆ. 'ಕರ್ಮಯೋಗಿ' ಅವರ ಮೊದಲಗದ್ಯಕೃತಿ ಮಹಾಕವಿಯೊಬ್ಬ ಕಡೆದ ಕಾವ್ಯಶಿಲ್ಪವನ್ನು ಆಧರಿಸಿದ ವಿಶಿಷ್ಟ ಕೃತಿ. ಕಾವ್ಯಾತ್ಮಕ ಗದ್ಯ ಶೈಲಿಯಲ್ಲಿ ಸಿದ್ಧರಾಮನ ಭವ್ಯವ್ಯಕ್ತಿತ್ವದ ಯಥಾರ್ಥ ಚಿತ್ರವನ್ನು ನೀಡುವಲ್ಲಿ ಕೃತಿ ಯಶಸ್ವಿಯಾಗಿದೆ. ಜಿ.ಎಸ್.ಎಸ್. ಅವರು "ಇದು ಕಾದಂಬರಿ ರೂಪಕ್ಕಿಂತ ಕೊಂಚ ಭಿನ್ನವಾಗಿರುವುರಿಂದ ಇದನ್ನು ಒಂದು ಭಾವಚಿತ್ರ" ವೆಂದು ಕರೆಯುವುದು ಉಚಿತ ಎಂದು ಅಭಿಪ್ರಾಯಪಡುತ್ತಾರೆ. ಐತಿಹಾಸಿಕ ವ್ಯಕ್ತಿ ಸಿದ್ಧರಾಮನಲ್ಲಿ ಶ್ರಮದಾನ ಮತ್ತು ಸ್ವಯಂ ಸೇವೆಗಳಂಥ ತತ್ವಗಳನ್ನು ದರ್ಶಿಸಿರುವ ಇವರ ನವೀನದೃಷ್ಟಿ ಈ ಕೃತಿಯ ವಿಶೇಷತೆಗೆ ಕಾರಣವೆಂಬುದು ವಿಮರ್ಶಕರ ಅಭಿಪ್ರಾಯವಾಗಿದೆ.

ಶಿವರುದ್ರಪ್ಪನವರಿಗೆ ಪ್ರವಾಸ ಬಹು ಪ್ರಿಯವಾದ ಹವ್ಯಾಸ. ಪ್ರವಾಸಕಾಲದಲ್ಲಿ ತಮಗಾದ ಮಧುರ ಅನುಭವಗಳನ್ನು ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ, ಗಂಗೆಯ ಶಿಖರಗಳಲ್ಲಿ, ಅಮೆರಿಕದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ ಮೊದಲಾದ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ಪ್ರವಾಸ ಕಾಲದಲ್ಲಿ ತಾವು ಸಂದರ್ಶಿಸಿದ ತಾಣದ ಸೌಂದರ್ಯ, ವ್ಯಕ್ತಿಗಳ ಅಂತರಂಗ, ಸನ್ನಿವೇಶಗಳ ನಿಜ ಸ್ವರೂಪವನ್ನು ಆಕರ್ಷಕ ಗದ್ಯಶೈಲಿಯಲ್ಲಿ ನೇರವಾಗಿ ನಿರೂಪಿಸುವಲ್ಲಿ ಓದುಗರಿಗೆ ಹೊಸ ಅನುಭವವನ್ನು ನೀಡುತ್ತಾರೆ. ಈ ಕೃತಿಗಳು ಕನ್ನಡ ಪ್ರವಾಸ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆಗಳೆಂಬುದರಲ್ಲಿ ಸಂದೇಹವಿಲ್ಲ.

ಕನ್ನಡದಲ್ಲಿ ತೀನಂಶ್ರೀಯವರನ್ನುಳಿದರೆ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡವರು ವಿರಳವೆಂದೇ ಹೇಳಬೇಕು. ಇಂಗ್ಲೀಷ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಪ್ರಗಲ್ಭ ಪಂಡಿತರಾದ, ಭಾರತೀಯ ಕಾವ್ಯಮೀಮಾಂಸೆಯಂಥ ಆಚಾರ್ಯಕೃತಿಯನ್ನು ರಚಿಸಿದ ತೀನಂಶ್ರೀ ಅವರಿಂದ ಕಾವ್ಯಮೀಮಾಂಸೆಯ ಪಾಠವನ್ನು ಕೇಳಿದ ಜಿ.ಎಸ್.ಎಸ್. ಅವರು 'ಸೌಂದರ್ಯ ಸಮೀಕ್ಷೆ'ಯಂಥ ಅಮೂರ್ತವಾದ ವಿಷಯದ ಮೇಲೆ, ಕುವೆಂಪು ಅವರಂಥ ಮೇರುಪ್ರತಿಭೆಯ ಮಾರ್ಗದರ್ಶನದಲ್ಲಿ ಸಂಶೋಧನೆಕೈಗೊಂಡು, ಪಾಶ್ಚಾತ್ಯ ಹಾಗೂ ಭಾರತೀಯ ಸಾಹಿತ್ಯದ ಆಳವಾದ ಅಭ್ಯಾಸ ನಡೆಸಿ, ಕನ್ನಡ ವಿಮರ್ಶಾ ಕ್ಷೇತ್ರದಲ್ಲೂ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅವರ 'ಸೌಂದರ್ಯಸಮೀಕ್ಷೆ' ಕಾವ್ಯಮೀಮಾಂಸೆಗೆ ದೊಡ್ಡ ಕೊಡುಗೆ. ಇಂಥ ಜಟಿಲವಾದ ವಿಷಯವನ್ನು ಕುರಿತು ಸಪ್ರಮಾಣವಾಗಿ ಚರ್ಚಿಸಿದ ಗ್ರಂಥಗಳು ನಮ್ಮಲ್ಲಿ ಬಹಳವಿಲ್ಲ ಎಂಬುದು ಶ್ರೇಷ್ಠ ವಿದ್ವಾಂಸರಾದ ಆರ್.ಸಿ. ಹಿರೇಮಠರ ಅಭಿಪ್ರಾಯ. ಶಿವರುದ್ರಪ್ಪನವರ ಆಳವಾದ, ವ್ಯಾಪಕವಾದ, ಖಚಿತವಾದ ಅಧ್ಯಯನಕ್ಕೆ ಪ್ರಮಾಣಗ್ರಂಥ. ಅವರ ವಿಮರ್ಶೆಯ ಪೂರ್ವ–ಪಶ್ಚಿಮ, ಪರಿಶೀಲನ, ಗತಿಬಿಂಬ, ಅನುರಣನ, ಬೆರಗು, ಮಹಾಕಾವ್ಯಸ್ವರೂಪ, ನವೋದಯ ಮೊದಲಾದ ಕೃತಿಗಳು ಕನ್ನಡ ವಿಮರ್ಶಾ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿವೆ. ಅವರ

'ಕಾವ್ಯಾರ್ಥ ಚಿಂತನ'ವೆಂಬ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವವನ್ನು ತಂದುಕೊಟ್ಟಿತು. ಹೀಗೆ ಕಾವ್ಯ ಮೀಮಾಂಸೆ, ವಿಮರ್ಶಾ ಕ್ಷೇತ್ರಗಳಲ್ಲಿ ಜಿಎಸ್‌ಎಸ್ ಅವರ ಅಭೂತಪೂರ್ವ ಸಾಧನೆ. ಅಲ್ಲದೆ ಕನ್ನಡದಲ್ಲಿ ಪ್ರಾಯೋಗಿಕ ಹಾಗೂ ತೌಲನಿಕ ವಿಮರ್ಶೆ ಬೆಳವಣಿಗೆಗೂ ಅವರು ಬಹುಮಟ್ಟಿಗೆ ಕಾರಣರಾಗಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರವನ್ನು ಕಟ್ಟಿ ಬೆಳೆಸಿದ ರೀತಿಯಲ್ಲೇ, ನಿವೃತ್ತಿಯ ನಂತರ ವಹಿಸಿಕೊಂಡ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಭಾರತೀಯ ಸಾಹಿತ್ಯ ಸಮೀಕ್ಷೆಯಂಥ ಬೃಹತ್ ಸಂಪುಟಗಳು, ವಿಮರ್ಶಾ ಪಾರಿಭಾಷಿಕ ಮಾಲೆಯ ಪ್ರಕಟಣೆಗಳೂ, ಸಾಲುದೀಪಗಳಂಥ ಮಹತ್ವ ಕೃತಿಗಳ ಪ್ರಕಟಣೆಯ ಜೊತೆಗೆ ಸಾಹಿತ್ಯ ಚಟುವಟಿಕೆಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅಕಾಡೆಮಿಗಳಂಥ ಸಂಸ್ಥೆಯ ಜವಾಬ್ದಾರಿ ಏನು ಎಂಬುದನ್ನು ತೋರಿಸಿಕೊಟ್ಟರು.

ಸುಮಾರು ನಾಲ್ಕು ದಶಕಗಳ ಕಾಲ ಕನ್ನಡನುಡಿ ಸೇವೆಯಲ್ಲಿ ಹೀಗೆ ತಮ್ಮನ್ನು ತೊಡಗಿಸಿಕೊಂಡ ಶಿವರುದ್ರಪ್ಪನವರನ್ನು ಅರಸಿಕೊಂಡು ಅನೇಕ ಪ್ರಶಸ್ತಿಗಳು ಬಂದಿವೆ. ೬೧ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಕನ್ನಡಿಗರು ಅವರನ್ನು ಗೌರವಿಸಿದ್ದಾರೆ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಅವರ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿವೆ. ಬನವಾಸಿ ನಾಡಿನ ಮೂಲದಿಂದ ಮೂಡಿ ಬಂದ ಈ ಕವಿಗೆ ಇದೀಗ ಪಂಪಪ್ರಶಸ್ತಿಯ ಕಿರೀಟವಿಟ್ಟು, ನಾಡುನುಡಿಯ ಸಾಂಸ್ಕೃತಿಕ ಹಿರಿಮೆಗೆ ಕಾರಣವಾದ ಪ್ರತಿಭಾ ಚೇತನಕ್ಕೆ ಗೌರವ ಸಂದಿರುವುದು ಸಂತಸದ ಸಂಗತಿ.

"ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದು ನಾ ಹಾಡಿದರೂ ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡುಹಕ್ಕಿಗೆ ಬೇಕೆ ಬಿರುದು ಸನ್ಮಾನ ?

ಜಿಎಸ್‌ಎಸ್

ಅಮೆರಿಕದಲ್ಲಿ ಯಶಸ್ವಿಯಾಗುವುದು ಹೇಗೆ?

ಡಿ. ವಿ. ಶಾಮಣ್ಣ

ನಂ. ೧೮೯೧, 'ಆರಭಿ' ೧ನೇ ಮೇನ್
೪ನೇ ಕ್ರಾಸ್, ಶ್ರೀರಾಂಪುರ, ೨ನೇ ಹಂತ
ಮೈಸೂರು-೫೭೦೦೨೪

ಬಾಂಗ್ಲಾದೇಶದ ರಹೀಮ್ ವಿಮಾನ ತಂತ್ರಜ್ಞಾನವನ್ನು ಅಭ್ಯಸಿಸಲು ನ್ಯೂಯಾರ್ಕ್‌ಗೆ ಬಂದವನು ಕಾಲೇಜು ಬಿಟ್ಟು ಟ್ಯಾಕ್ಸಿ ಚಾಲಕನಾಗಬೇಕಾಯಿತು. ರಹೀಮ್ ಹೇಳುತ್ತಾನೆ: "ನನಗೆ ಹೆಚ್ಚು ಹಣ ಬೇಕಾಯಿತು. ಬಾಂಗ್ಲಾದೇಶದಲ್ಲಿರುವ ನನ್ನ ಕುಟುಂಬದವರು ನನ್ನನ್ನೇ ಅವಲಂಬಿಸಿದ್ದಾರೆ". ಜುಟ್ಟನ್ನು ಬಿಟ್ಟ, ಬೆವರು ಅಂಗಿ ಧರಿಸಿದ, ಕನ್ನಡಕಧಾರಿ ರಹೀಮ್ ವಿದ್ಯಾರ್ಥಿಯಂತೆ ಕಾಣುತ್ತಾನೆ. ಆದರೆ ಮುಂದೊಮ್ಮೆ ತಾನು ದೊಡ್ಡ ಉದ್ಯಮಿಯಾಗುವ ಕನಸನ್ನು ಆತ ಕಾಣುತ್ತಿದ್ದಾನೆ. ಆದುದರಿಂದಲೇ ಅವನು ಮತ್ತು ಅವನ ಪಾಲುದಾರ ಸ್ನೇಹಿತರು ಸೇರಿ ಇತ್ತೀಚೆಗೆ ಟ್ಯಾಕ್ಸಿ ರಹದಾರಿ (ಮೆಡಾಲಿಯನ್) ಪಡೆಯುಲು ಎರಡು ಲಕ್ಷ ಡಾಲರ್‌ಗಳನ್ನು ಸಾಲ ಮಾಡಿದ್ದಾರೆ. ಈ ಸಾಲವನ್ನು ತೀರಿಸಲು ಇವರಿಗೆ ೧೫ ವರ್ಷಗಳೇ ಬೇಕಾದೀತು—ಆದರೇನು ಒಮ್ಮೆ ಸಾಲ ತೀರಿತೆಂದರೆ ಅವರ ಆದಾಯವು ಹಲವಾರು ಪಟ್ಟು ಹೆಚ್ಚುತ್ತದೆ.

ನ್ಯೂಯಾರ್ಕ್‌ನಲ್ಲಿ ತನ್ನ ಸ್ವಂತ ಹೋಟೆಲ್ ತೆರೆಯುವ ಮುನ್ನ ಕರ್ನಾಲ್ ಸಿಂಗ್ ಐದು ವರ್ಷಗಳ ಕಾಲ ಟ್ಯಾಕ್ಸಿ ಚಾಲಕನಾಗಿದ್ದ. ಈ ಹೋಟೆಲ್‌ನಲ್ಲಿ ಬಾಂಗ್ಲಾದೇಶದ ಒಬ್ಬ ಅಡುಗೆಯವನಲ್ಲದೆ ಕರ್ನಾಲ್ ಸಿಂಗ್‌ನ ಒಬ್ಬ ಸೋದರ, ಒಬ್ಬ ಸೋದರಳಿಯ ಹಾಗೂ ಇಬ್ಬರು ದಾಯಾದಿಗಳು ಕೆಲಸ ಮಾಡುತ್ತಾರೆ. ಇನ್ನೂ ೨೫ರ ಹರೆಯದ ಕರ್ನಾಲ್‌ಸಿಂಗ್ ಇತ್ತೀಚೆಗೆ ಇನ್ನೊಂದು ಹೋಟೆಲ್ ತೆರೆದಿದ್ದಾನೆ.

೧೯೭೯ರಲ್ಲಿ ಭಾರತದಿಂದ ಸಂಯುಕ್ತ ಸಂಸ್ಥಾನಕ್ಕೆ ಬಂದ ರಾಹುಲ್ ಮರ್ಚೆಂಟ್ ಕಂಪ್ಯೂಟರ್ ವಿಜ್ಞಾನದಲ್ಲಿ ಪದವಿ ಮತ್ತು ಎಂ.ಬಿ.ಎ.ಗಳನ್ನು ಗಳಿಸಿ, ಸುಪ್ರಸಿದ್ಧ ವಾಲ್ ಸ್ಟ್ರೀಟ್‌ನ ಬ್ಯಾಂಕ್ ಒಂದರಲ್ಲಿ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿದ್ದಾರೆ. ಬರಿಗೈಯಲ್ಲಿ ವೃತ್ತಿಯನ್ನು ಆರಂಭಿ

ಮೂಲ: ೧೯೯೮ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೊನಾಥನ್ ಪ್ರೋರ್‌ಮನ್ ಅವರ 'ಹೌ ಟು ಸಕ್ಸೀಡ್ ಇನ್ ಅಮೆರಿಕ' ಲೇಖನ.

ಸಿದ ಮರ್ಚೆಂಟ್ ಹೇಳುತ್ತಾರೆ, "ಆರಂಭದ ಐದು ವರ್ಷಗಳಲ್ಲಿ ನನಗೆ ಸ್ವಲ್ಪವೂ ಹಣ ಸಿಕ್ಕಲಿಲ್ಲ. ಆದರೂ ಧೈರ್ಯದಿಂದ ಮುಂದುವರೆದೆ." . . .

ಸಂಯುಕ್ತ ಸಂಸ್ಥಾನದ ಎಲ್ಲೆಡೆಯಂತೆಯೇ ನ್ಯೂಯಾರ್ಕ್‌ನಲ್ಲಿ ಕೂಡ ದಕ್ಷಿಣ ಏಷ್ಯಾದಿಂದ ವಲಸೆ ಬಂದವರು ಏಳಿಗೆ ಹೊಂದುತ್ತಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಸುಮಾರು ೧,೨೦,೦೦೦ ಭಾರತೀಯರು, ೫೫,೦೦೦ ಪಾಕಿಸ್ತಾನೀಯರು, ೨೮,೦೦೦ ಬಾಂಗ್ಲಾ ದೇಶೀಯರು ಮತ್ತು ಹಲವಾರು ಸಿಂಹಳೀಯರು ವಲಸೆ ಬಂದು ನ್ಯೂಯಾರ್ಕ್‌ನಲ್ಲಿ ನೆಲೆಸಿದ್ದಾರೆ. ಶ್ರಮಜೀವನ ನಡೆಸುವ ಟ್ಯಾಕ್ಸಿ ಚಾಲಕರು ಮತ್ತು ಅಂಗಡಿಯವರ ಜೊತೆ ಜೊತೆಗೆ ಎಂಜಿನಿಯರುಗಳು, ಉದ್ಯಮಿಗಳು, ಶಿಕ್ಷಣ ತಜ್ಞರು, ವೈದ್ಯರು —ಹೀಗೆ ಎಲ್ಲ ವಿಧದ ಜನರೂ ಇವರಲ್ಲಿ ಇದ್ದಾರೆ. ಇವರ ಮಕ್ಕಳು ಶಾಲಾ ವಿದ್ಯಾಭ್ಯಾಸದಲ್ಲಿ ಬಹಳ ಮುಂದಿದ್ದು ಶೀಘ್ರವಾಗಿ ಅಮೆರಿಕನ್ ಮುಖ್ಯವಾಹಿನಿಯನ್ನು ಪ್ರವೇಶಿಸುತ್ತಿದ್ದಾರೆ.

ಇವರ ಯಶಸ್ಸಿನ ಗುಟ್ಟೇನು? ಸಂಯುಕ್ತ ಸಂಸ್ಥಾನಕ್ಕೆ ಬರುವಾಗ ದಕ್ಷಿಣ ಏಷಿಯನ್ನರು ಬ್ರಿಟಿಷರ ಕಾಲದಿಂದಲೂ ರೂಢಿಸಿಕೊಂಡ ತಮ್ಮ ಅತ್ಯಮೂಲ್ಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಂಪರೆಯನ್ನು ಜೊತೆಯಲ್ಲಿ ತರುವುದು ಈ ಯಶಸ್ಸಿಗೆ ಬಹಳಷ್ಟು ಕಾರಣವಾಗಿದೆ. ಅಲ್ಪಸ್ವಲ್ಪ ಇಂಗ್ಲಿಷನ್ನಾದರೂ ಮಾತನಾಡಲು ಬರದವರು ಇವರಲ್ಲಿ ವಿರಳ. ಇವರಲ್ಲಿ ಹೆಚ್ಚಿನವರು ಶಿಸ್ತು, ಸೌಜನ್ಯ, ನ್ಯಾಯ ಮತ್ತು ಕಾನೂನಿನಲ್ಲಿ ನಂಬಿಕೆ ಹಾಗೂ ಪ್ರಜಾಪ್ರಭುತ್ವದ ಆಳ್ವಿಕೆಯ ಅನುಭವ—ಇವೆಲ್ಲವನ್ನು ಪಡೆದಿರುತ್ತಾರೆ.

ಹಲವು ತಾಂತ್ರಿಕ ಕ್ಷೇತ್ರಗಳಲ್ಲಿದ್ದ ಕಾರ್ಮಿಕ ಕೊರತೆಯನ್ನು ನೀಗಲು, ೧೯೬೫ರಲ್ಲಿ ಸಂಯುಕ್ತ ಸಂಸ್ಥಾನವು ತನ್ನ ವಲಸೆ ನಿಯಮಗಳನ್ನು ಸಡಿಲಗೊಳಿಸಿ ಏಷ್ಯ ಉಪಖಂಡದ ವೈದ್ಯರು ಮತ್ತು ವೈದ್ಯಕೀಯ ತಜ್ಞರಿಗೆ ತನ್ನ ಬಾಗಿಲು ತೆರೆಯಿತು. ಸ್ವಾತಂತ್ರ್ಯದೊಂದಿಗೆ ಆ ಉಪಖಂಡದಲ್ಲಿ ಆರಂಭವಾಗಿ ಇನ್ನೂ ನಿಂತಿಲ್ಲದ 'ಪ್ರತಿಭಾ ಪಲಾಯನ'ವನ್ನು ಚುರುಕುಗೊಳಿಸಿತು. ಹೀಗೆ ಅಮೆರಿಕಕ್ಕೆ ಬಂದ ತಜ್ಞರು ೧೯೭೦ರ ವೇಳೆಗೆ ಅಮೆರಿಕನ್ ನಾಗರೀಕರಾಗಿ ತಮ್ಮ ಕುಟುಂಬದ ಇತರ ಸದಸ್ಯರನ್ನು ಅಲ್ಲಿಗೆ ಕರೆಸಿಕೊಳ್ಳಲು ಅನುಕೂಲವಾಯಿತು. ಇದರಿಂದಾಗಿ ಏಷ್ಯ ಉಪಖಂಡದಲ್ಲಿ ವಲಸೆಯ ಎರಡನೆಯ ಅಲೆಯು ಆರಂಭವಾಯಿತು. ಪರಿಣಾಮ: ಈಗ ಸಂಯುಕ್ತ ಸಂಸ್ಥಾನದಲ್ಲಿ ದಕ್ಷಿಣ ಏಷ್ಯಾದಿಂದ ವಲಸೆ ಬಂದವರ ಸಂಖ್ಯೆ ಹತ್ತು ಲಕ್ಷವನ್ನೂ ಮೀರಿದೆ.

ಈ ಎರಡೂ ಗುಂಪಿನವರೂ ಅಮೆರಿಕದಲ್ಲಿ ಯಶಸ್ಸಿನ ಏಣಿಯನ್ನು ಏರುವುದರಲ್ಲಿ ಸಫಲರಾಗಿದ್ದಾರೆ. ೧೯೯೦ರ ಗಣತಿಯ ಪ್ರಕಾರ ಮೂಲ ಅಮೆರಿಕನ್ನರ ಸರಾಸರಿ ಕೌಟುಂಬಿಕ ಆದಾಯ ೩೩,೦೦೦ ಡಾಲರ್‌ಗಳಿದ್ದರೆ, ಭಾರತೀಯ ಅಮೆರಿಕನ್ನರ ಸರಾಸರಿ ಕೌಟುಂಬಿಕ ಆದಾಯ ೫೫,೦೦೦ ಡಾಲರ್‌ಗಳಷ್ಟಿತ್ತು.

ಉಪಖಂಡದಿಂದ ಬೇರೆ ಕಡೆಗೆ ವಲಸೆ ಹೋಗುವ ಬುದ್ಧಿವಂತ ಹಾಗೂ ದಕ್ಷರ ಸಂಖ್ಯೆಯಲ್ಲಿ ಸಿಂಹಪಾಲು

ಸಂಯುಕ್ತ ಸಂಸ್ಥಾನಕ್ಕೇ ದಕ್ಕಿದೆ ಎನ್ನುವುದು ವಿವಾದಾತೀತ. ಅಮೆರಿಕಕ್ಕೆ ವಲಸೆ ಬರಲು ಇವರು ಅಸಾಮಾನ್ಯ ಶ್ರದ್ಧೆ ಹಾಗೂ ಪರಿಶ್ರಮ ತೋರಿದ್ದಾರೆ. ತಮ್ಮ ದೇಶದಲ್ಲಿ ಊಹಿಸಲೂ ಆಗದಂಥ ಜೀವನವನ್ನು ಅಮೆರಿಕದಲ್ಲಿ ನಡೆಸಲು ಇವರು ಈ ಪ್ರಯತ್ನವನ್ನು ನಡೆಸಿದ್ದಾರೆ. ಕಳೆದ ಏಳು ವರ್ಷಗಳಿಂದಲೂ ಟ್ಯಾಕ್ಸಿ ಚಾಲಕನಾಗಿರುವ ಜೋಗೀಂದರ್ ಸಿಂಗ್ ಅಮೆರಿಕದಲ್ಲಿ ಸಿಕ್ಕುವ ಹೆಚ್ಚು ಅವಕಾಶಗಳ ಬಗ್ಗೆ ಹೇಳುತ್ತಾ: "ನಿಮಗೆ ಕೆಲಸ ಮಾಡಲು ಮನಸ್ಸಿದ್ದರೆ ತಕ್ಕ ಪ್ರತಿಫಲ ಇಲ್ಲಿ ದೊರೆಯುತ್ತದೆ." ಎನ್ನುತ್ತಾನೆ. "ಅರ್ಹತೆಗೆ ಸಿಕ್ಕುವ ಮಾನ್ಯತೆಯೇ ನನ್ನಂಥವರನ್ನು ಇಲ್ಲಿಗೆ ಆಕರ್ಷಿಸುತ್ತದೆ" ಎನ್ನುತ್ತಾರೆ ರಾಹುಲ್ ಮರ್ಚೆಂಟ್.

ಉಪಖಂಡವನ್ನು ಬಿಟ್ಟು ಅಮೆರಿಕಕ್ಕೆ ವಲಸೆ ಬಂದವರ ಪೈಕಿ ವೈದ್ಯರು ಮೊದಲಿಗರು. ಇಂದು ಅಮೆರಿಕದಲ್ಲಿರುವ ೩೦,೦೦೦ ಕ್ಕೂ ಅಧಿಕ ಭಾರತೀಯ ವೈದ್ಯರು ಉಚ್ಚಸ್ಥಾನದಲ್ಲಿದ್ದಾರೆ—ಅದರಲ್ಲೂ ಅನೆಸ್ಥೀಸಿಯಾ ತಜ್ಞರು ಇವರಲ್ಲಿ ಮುಂದು. ಕಳೆದ ೨೦ ವರ್ಷಗಳಿಂದಲೂ ನ್ಯೂಯಾರ್ಕ್‌ನ ಉಪನಗರವೊಂದರಲ್ಲಿ ಮಕ್ಕಳ ತಜ್ಞರಾಗಿ ಕೆಲಸ ಮಾಡುತ್ತಿರುವ ಡಾ|| ಮುಕುಂದ್ ಮೋದಿ ಹೇಳುತ್ತಾರೆ: "ಆರಂಭದ ಐದು ವರ್ಷಗಳೂ ನಾನು ಭಾರತಕ್ಕೆ ಹಿಂತಿರುಗುವ ಯೋಚನೆಯನ್ನು ಮಾಡುತ್ತಿದ್ದೆ. ಪರಿಸ್ಥಿತಿ ಬದಲಾಯಿಸಿತು. ನಮಗೆ ಮಕ್ಕಳಾದವು. ಸರಿಯಾದ 'ಅವಕಾಶಗಳೂ ಮತ್ತು ಉತ್ತಮ ಗುಣಮಟ್ಟದ ಜೀವನ ಶೈಲಿ ನಮಗೆ ಬಹಳ ಮುಖ್ಯವಾದವು." ಈಗ ನ್ಯೂಯಾರ್ಕ್‌ನ ಜೀವನಕ್ಕೆ ಹೊಂದಿಕೊಂಡಿರುವ ಮೋದಿ ಎನ್ನುತ್ತಾರೆ: "ಭಾರತೀಯರು ವಿಶೇಷವಾಗಿ ಮಧ್ಯಮ ವರ್ಗದವರು. ಇವರು ಇರುವುದಕ್ಕೊಂದು ಮನೆ, ಒಳ್ಳೆಯ ಶಾಲೆ ಮತ್ತು ಸುರಕ್ಷಿತೆ ನೆರೆಹೊರೆ—ಇಷ್ಟರಲ್ಲೇ ತೃಪ್ತರು. ಇದನ್ನು 'ಅಮೆರಿಕನ್ ಕನಸು' ಎಂದು ಖಂಡಿತಾ ಅನ್ನಲಾಗದು."

ಉಪಖಂಡದಿಂದ ವಲಸೆಬಂದ ಎಂಜನಿಯರುಗಳದ್ದು ಎರಡನೆಯ ಸ್ಥಾನ. ಇಂದು ಸಾವಿರಾರು ಜನ ಭಾರತೀಯ ಎಂಜಿನಿಯರುಗಳು ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದಾರೆ.

೧೯೭೧ ರಲ್ಲಿ ಸಂಯುಕ್ತ ಸಂಸ್ಥಾನಕ್ಕೆ ಬಂದ ಖುರ್ಷಿದ್ ಎಫ್ ಬಿರ್ದಿ ಈಗ ತಮ್ಮದೇ ಆದ 'ನಾರ್ಥ್‌ಸ್ಟಾರ್ ಟೆಕ್ನಾಲಜೀಸ್' ಎಂಬ ಸಾಫ್ಟ್‌ವೇರ್ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ತಮ್ಮ ಸಂಸ್ಥೆಯಲ್ಲಿ ೨೫ ಜನಕ್ಕೆ ಉದ್ಯೋಗ ಒದಗಿಸಿರುವ ಬಿರ್ದಿ ಹೀಗೆನ್ನುತ್ತಾರೆ: "ಭಾರತದಲ್ಲಿ ಉನ್ನತ ಮಟ್ಟದ ಕಂಪ್ಯೂಟರ್ ಶಿಕ್ಷಣ ದೊರೆಯುತ್ತದೆ. ಆದರೆ ಅಲ್ಲಿ ತಂತ್ರಜ್ಞಾನ ಉದ್ಯೋಗಕ್ಕೆ ಅವಕಾಶಗಳು ಬಹಳ ಕಡಿಮೆಯಿತ್ತು. ಇಲ್ಲಿ ಔದ್ಯೋಗಿಕ ಮಾರುಕಟ್ಟೆ ದೊಡ್ಡದಾಗಿ ತೆರೆದಿತ್ತು."

ಶೈಕ್ಷಣಿಕ ಅರ್ಹತೆಯನ್ನು ಹೊಂದಿರದ ದಕ್ಷಿಣ ಏಷಿಯನ್ನರು ಅಮೆರಿಕದಲ್ಲಿ ವಲಸೆ ಬಂದವರು ಅನುಸರಿಸುವ ಸಾಂಪ್ರದಾಯಿಕ ದಂಧೆಗಳಲ್ಲಿ ತೊಡಗುತ್ತಾರೆ. ನ್ಯೂಯಾರ್ಕ್‌ನ ಟ್ಯಾಕ್ಸಿ ಚಾಲಕರಲ್ಲಿ ಸುಮಾರು ೨೫,೦೦೦ ಚಾಲಕರು ದಕ್ಷಿಣ ಏಷ್ಯಾದ ಮೂಲದವರಾಗಿದ್ದಾರೆ.

ನ್ಯೂಯಾರ್ಕ್‌ನ ವೃತ್ತ ಪತ್ರಿಕೆಯ ವ್ಯವಹಾರವು ದಕ್ಷಿಣ ಏಷಿಯನ್ನರ ಏಕಸ್ವಾಮ್ಯವಾಗಿದೆ. ನ್ಯೂಯಾರ್ಕ್‌ನ ೩೩೦ ವೃತ್ತ ಪತ್ರಿಕೆ ಕಟ್ಟೆಗಳಲ್ಲಿ ಹೆಚ್ಚಿನವು ದಕ್ಷಿಣ ಏಷಿಯನ್ನರದೇ. ಎಂಟು ವರ್ಷಗಳ ಹಿಂದೆ ಈ ಲೇಖಕನು (ಜೋನಾಥನ್ ಪೋರ್‌ಮನ್) ಮಧ್ಯರಾತ್ರಿಯಲ್ಲಿ ನ್ಯೂಯಾರ್ಕ್‌ನ ರೈಲು ನಿಲ್ದಾಣವೊಂದರಲ್ಲಿ ತಡವಾಗಿ ಬರುತ್ತಿದ್ದ ರೈಲಿಗೆ ಕಾಯಬೇಕಾಯಿತು. ರೈಲು ನಿಲ್ದಾಣದ ಕೊಳಕು ತುಂಬಿದ ಮುಖ್ಯಹಜಾರದಲ್ಲಿದ್ದ 'ಹಡ್‌ಸನ್‌ನ್ಯೂಸ್' ಎಂಬ ವೃತ್ತಪತ್ರಿಕೆಯ ಅಂಗಡಿಯು ಶುಭ್ರತೆ ಮತ್ತು ಬೆಳಕಿನ 'ಓಯಾಸಿಸ್' ಆಗಿತ್ತು. ಸಮವಸ್ತ್ರ ಧರಿಸಿದ ಹಲವಾರು ಪಾಕಿಸ್ತಾನಿ ಯುವಕರು ಗೌರವಸ್ಥರ ತಾಣದಂತಿದ್ದ ಈ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದರು.

ಅಲ್ಲಿಂದೀಚೆಗೆ 'ಹಡ್‌ಸನ್ ನ್ಯೂಸ್' ನ್ಯೂಯಾರ್ಕ್‌ನ ವಿವಿಧ ರೈಲ್ವೆ ಹಾಗೂ ವಿಮಾನ ನಿಲ್ದಾಣಗಳಲ್ಲಿ ನೂರಕ್ಕೂ ಹೆಚ್ಚು ವೃತ್ತಪತ್ರಿಕೆ ಅಂಗಡಿಗಳನ್ನು ತೆರೆದಿದೆ. 'ಹಡ್‌ಸನ್ ನ್ಯೂಸ್'ನ ಹೆಚ್ಚು ಕಡಿಮೆ ಎಲ್ಲ ಉದ್ಯೋಗಿಗಳೂ ದಕ್ಷಿಣ ಏಷಿಯನ್ನರೇ. 'ಹಡ್‌ಸನ್ ನ್ಯೂಸ್'ನ ಅಧ್ಯಕ್ಷರ ಪುತ್ರ ಹಾಗೂ ಅದರ ಮಾರುಕಟ್ಟೆ ವ್ಯವಹಾರಗಳ ಉಪಾಧ್ಯಕ್ಷರಾಗಿರುವ ಜೋಡಿಡೊವಿಜಿಯೋ ತಮ್ಮ ಸಂಸ್ಥೆಯ ದಕ್ಷಿಣ ಏಷಿಯನ್ ಉದ್ಯೋಗಿಗಳ ಬಗ್ಗೆ ಹೇಳುತ್ತಾರೆ: "ಅವರುಗಳು ಹೆಚ್ಚು ಹೊತ್ತು, ಸಮರ್ಪಕವಾಗಿ ಕೆಲಸ ಮಾಡುತ್ತಾರೆ. ನಮ್ಮ ಸಂಸ್ಥೆಯಲ್ಲಿ ಎಲ್ಲ ಹಂತಗಳಲ್ಲಿಯೂ ಅವರಿಗೆ ಉದ್ಯೋಗವನ್ನು ಒದಗಿಸುತ್ತೇವೆ".

ಹೆಚ್ಚು ಉದ್ಯಮಶೀಲ ದಕ್ಷಿಣ ಏಷಿಯನ್ನರು ತಮ್ಮನ್ನು ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ, ಹಲವಾರು ಐಸ್‌ಕ್ರೀಂ ಪಾರ್ಲರ್‌ಗಳನ್ನು ಕೂಡ ನಡೆಸುತ್ತಾರೆ. ಚಿಲ್ಲರೆ ವ್ಯಾಪಾರವು (ಡಾಲರ್‌ಗೊಂದು ಪದಾರ್ಥದ ಅಂಗಡಿಗಳು) ಪಾಕೀಸ್ತಾನೀಯರ ವೈಶಿಷ್ಟ್ಯವಾಗಿದೆ. ಪಂಜಾಬಿನಿಂದ ವಲಸೆ ಬಂದವರು–ಅದರಲ್ಲೂ ಸಿಖ್ಖರು–ನ್ಯೂಯಾರ್ಕ್‌ನ ಹಲವಾರು ಪೆಟ್ರೋಲ್ ಬಂಕ್‌ಗಳ ಮಾಲೀಕರಾಗಿದ್ದಾರೆ.

ಹಲವು ದಕ್ಷಿಣ ಏಷ್ಯಾ ಸಂಗಡಗಳ ನಾಯಕರು ತಮ್ಮ ಸಂಗಡದವರನ್ನು ಹಿಂದೆ ಅಮೆರಿಕಕ್ಕೆ ವಲಸೆ ಬಂದ ಯೆಹೂದಿಗಳಿಗೆ (ಜ್ಯೂ) ಹೋಲಿಸಿಕೊಳ್ಳುತ್ತಾರೆ. ಯಹೂದಿಗಳಂತೆಯೇ ಭಾರತದಿಂದ ವಲಸೆ ಬಂದಾಗ ಹಲವರು–ಅದರಲ್ಲೂ ಗುಜರಾಥಿಗಳು ಮತ್ತು ಸಿಂಧಿಗಳು–ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಮಧ್ಯವರ್ತಿಗಳ ಪಾತ್ರವನ್ನು ನಿರ್ವಹಿಸಿದ್ದಾರೆ. ಈ ಕ್ಷೇತ್ರದಲ್ಲಿನ ಅವರ ಯಶಸ್ಸು ದೇಶದವರ ಕಣ್ಣುಗಳನ್ನು ಕೆಂಪು ಮಾಡಿದೆ. ಉಗಾಂಡ ಮತ್ತು ಕೆನ್ಯಾ ದೇಶಗಳು ಇವರಿಗೆ ಕಿರುಕುಳ ಕೊಟ್ಟು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿವೆಯಲ್ಲದೆ, ೧೯೭೦ ರಲ್ಲಿ ದಕ್ಷಿಣ ಏಷ್ಯಾದವರನ್ನು ತಮ್ಮ ದೇಶದಿಂದಲೇ ಹೊರಹಾಕಿವೆ. ಆದರೆ ಸಂಯುಕ್ತ ಸಂಸ್ಥಾನದಲ್ಲಿ ದಕ್ಷಿಣ ಏಷಿಯನ್ನರು ಪಕ್ಷಪಾತವನ್ನಾಗಲೀ ಜನಾಂಗ ದ್ವೇಷವನ್ನಾಗಲೀ ಎದುರಿಸುವುದಿಲ್ಲ.

ಹಿಂದೆ ವಲಸೆಬಂದ ಯೆಹೂದಿಗಳಂತೆ, ದಕ್ಷಿಣ ಏಷಿಯನ್ನರೂ ಉಪಾಧ್ಯಾಯರುಗಳ ಬಗ್ಗೆ ಹೊಂದಿರುವ ವಿಶಿಷ್ಟ ಪೂಜ್ಯಮನೋ

ಭಾವನೆಯು ವಿದ್ಯಾಭ್ಯಾಸದಲ್ಲಿ ಅವರ ಅದ್ಭುತ ಪ್ರದರ್ಶನವಾಗಿ ಮಾರ್ಪಾಡಾಗುತ್ತದೆ. ಇವರು ಸಂಯುಕ್ತ ಸಂಸ್ಥಾನದಲ್ಲಿನ ಉನ್ನತ ವಿದ್ಯಾಸಂಸ್ಥೆಗಳಿಗೆ ಅತಿ ದೊಡ್ಡ ಪ್ರಮಾಣದಲ್ಲಿ ಪ್ರವೇಶ ಪಡೆಯುತ್ತಾರೆ. ಮೂಲವಿಜ್ಞಾನ ಮತ್ತು ಗಣಿತದಲ್ಲಿ ಇವರ ಪ್ರದರ್ಶನ ಉತ್ಕೃಷ್ಟವಾಗಿದೆ. ಪ್ರೌಢಶಾಲಾ ಮಟ್ಟದ ವಿಜ್ಞಾನಿಗಳಿಗೆ ನೀಡುವ ಪ್ರತಿಷ್ಠಿತ 'ವೆಸ್ಟಿಂಗ್ ಹೌಸ್' ಬಹುಮಾನಗಳ ಪೈಕಿ ಹತ್ತರಲ್ಲಿ ನಾಲ್ಕನ್ನು ಭಾರತೀಯ ಮೂಲದ ಅಮೆರಿಕನ್ನರ ಮಕ್ಕಳು ಗೆದ್ದುಕೊಂಡಿದ್ದಾರೆ.

ಯೆಹೂದಿಗಳು ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬಂದಿರುವ ಉದ್ಯೋಗಗಳನ್ನು ದಕ್ಷಿಣ ಏಷಿಯನ್ನರೂ ನಡೆಸುತ್ತಾರೆ. ವಜ್ರಗಳ ಉದ್ದಿಮೆಯ ಎಲ್ಲ ಹಂತಗಳಲ್ಲೂ-ಆಮದು ಮಾಡಿಕೊಳ್ಳುವುದು, ಕತ್ತರಿಸುವುದು ಮೆರಗು ಕೊಡುವುದರಲ್ಲಿ ಜೈನರು ಮುಂದಿದ್ದಾರೆ. ಪಂಜಾಬಿಗಳು ಹಿಂದೆ ಯಹೂದಿಗಳು ಮಾಡುತ್ತಿದ್ದಂತೆಯೇ ನ್ಯೂಯಾರ್ಕ್‌ನಲ್ಲಿ ಬಟ್ಟೆ ಅಂಗಡಿಗಳನ್ನು ನಡೆಸುತ್ತಾರೆ.

ದಕ್ಷಿಣ ಏಷ್ಯಾದಿಂದ ವಲಸೆ ಬಂದವರಲ್ಲಿ ಸ್ವದೇಶಕ್ಕೆ ಹಿಂದಿರುಗುವವರ ಸಂಖ್ಯೆ ಬಹಳ ಕಡಿಮೆ. ಸ್ವದೇಶಕ್ಕೆ ಒಂದೇ ಒಂದು ಭೇಟಿ ಕೂಡ ಬಹಳ ಅಹಿತಕರ ಅನುಭವವಾಗಬಹುದು. ನ್ಯೂಯಾರ್ಕ್‌ನ ಏಷ್ಯಾ ಸೊಸೈಟಿಯ ಸಾಂಸ್ಕೃತಿಕ ಕಾರ್ಯಕರ್ತೆಯೊಬ್ಬರಾದ ಸುನಿತಾ ಮುಖಿಯವರು, ತನ್ನ ತಂದೆಯ ಉತ್ತರಕ್ರಿಯೆಗೆ ಸ್ವದೇಶಕ್ಕೆ ಭೇಟಿ ನೀಡಿದ ಭಾರತೀಯ ಉದ್ಯಮಿಯೊಬ್ಬನ ಕತೆಯನ್ನು ಹೇಳುತ್ತಾರೆ. ಭಾರತದಲ್ಲಿ ಆತನ ಸಂಬಂಧಿಗಳು ತೋರಿದ ಅನುಕಂಪ ಆತನನ್ನು ಭಾವಪರವಶನನ್ನಾಗಿ ಮಾಡಿತಂತೆ. ಹಾಗಿದ್ದರೆ ನೀವು ಮತ್ತೇಕೆ ಭಾರತದಲ್ಲೇ ಉಳಿಯಲಿಲ್ಲ. ಎಂದು ಮುಖಿಯವರು ಕೇಳಿದಾಗ ಆತ ಹೇಳಿದನಂತೆ: "ನೀವೇನು ತಮಾಷೆ ಮಾಡುತ್ತಿದ್ದೀರಾ? ಭಾರತದಲ್ಲಿ ಉಸಿರಾಡಲೂ ಸ್ಥಳವಿಲ್ಲ. ಅತ್ಯಧಿಕ ಜನಸಂಖ್ಯೆ, ಅತ್ಯಂತ ಭ್ರಷ್ಟಾಚಾರ. ಸತ್ತ ನಮ್ಮ ತಂದೆಯನ್ನು ಪರಲೋಕಕ್ಕೆ ಕಳುಹಿಸಿ ಕೊಡಲು ಕೂಡ ಪುರೋಹಿತನಿಗೆ ಲಂಚ ಕೊಡಬೇಕಾಯಿತು."

ಆದರೆ ಹಲವು ಭಾರತೀಯ ಅಮೆರಿಕನ್ನರು ಸ್ವದೇಶವನ್ನು ರಂಜಕವಾಗಿ ಚಿತ್ರಿಸುತ್ತಾರೆ. ಪ್ರವಾಸಿಗಳು ಕಾಣುವಂತೆ, ಅವರು ಬಿಟ್ಟು ಬಂದ ಜೀವನದ ಸಾಂಸ್ಕೃತಿ ಭರವಸೆ ಮತ್ತು ವರ್ಣಮಯ ಅಲಂಕಾರಗಳನ್ನು ಮಾತ್ರ ನೋಡುತ್ತಾರೆ. ಇದರ ಪರಿಣಾಮ: ಒಂದು ಬಗೆಯ ಸರ್ವಭಾರತೀಯ ಅನನ್ಯತೆ. ಈ ಅನನ್ಯತೆಯು, ದಕ್ಷಿಣ ಏಷಿಯನರಲ್ಲಿ ಪಂಗಡ ಬೇಧಗಳನ್ನು ಮರೆಸಿ, ಈ ಪ್ರಾಂತ್ಯದ ಅತಿಕೆಟ್ಟ ಘರ್ಷಣೆಗಳನ್ನು ದಮನಗೊಳಿಸುವುದರಲ್ಲಿ ಸಫಲವಾಗಿದೆ. ಒಮ್ಮೆ ಈ ಲೇಖಕನಿಗೆ ಪಾಕೀಸ್ತಾನೀ ಟ್ಯಾಕ್ಸಿ ಚಾಲಕನೊಬ್ಬ ಭಾರತೀಯರ ಜೊತೆಗಿನ ತಮ್ಮ ಸಂಬಂಧದ ಬಗ್ಗೆ ಹೀಗೆ ಹೇಳಿದ: ಪ್ರಪಂಚದ ಎಲ್ಲೆಡೆಯಲ್ಲಿಯೂ ನಾವು ಚೆನ್ನಾಗಿಯೇ ಹೊಂದುಕೊಂಡು ಹೋಗುತ್ತೇವೆ. ನಾವು ಸಮಸ್ಯೆಗಳನ್ನು ಎದುರಿಸುವುದು ನಮ್ಮ ದೇಶಗಳ ಗಡಿಗಳಲ್ಲಿ ಮಾತ್ರ.

ತಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸಿಕೊಡಲು ದಕ್ಷಿಣ ಏಷಿಯನ್ನರು ಧರ್ಮವನ್ನು ಅಧಿಕವಾಗಿ ಅವಲಂಬಿ

ಸಿರುತ್ತಾರೆ. ಹಲವಾರು ಕುಟುಂಬಗಳು ಕೂಡಿ ಸ್ಥಳೀಯ ದೇವಸ್ಥಾನಗಳಲ್ಲೂ, ಮಸೀದಿಗಳಲ್ಲೂ ಸಾಮೂಹಿಕವಾಗಿ ಪೂಜಿಸುತ್ತಾರೆ. ತಮ್ಮ ಮಕ್ಕಳಿಗೂ ಸಾಂಸ್ಕೃತಿಕ ಶಿಕ್ಷಣವನ್ನು ಕೊಡಿಸುತ್ತಾರೆ.

ಈ ಮಾದರಿಯ ಶಿಕ್ಷಣಕ್ಕೆ ಹಿಂದೂಗಳಿಂದ ವಿಸ್ತ್ರಿತ ಯಶಸ್ಸು ದೊರಕಿದೆ. ಕಳೆದ ಎರಡು ದಶಕಗಳಿಂದಲೂ ಭಾರತೀಯರನ್ನು ನೋಡಿರುವ ನಾರಾಯಣ್ ಡಿ. ಕೇಶವನ್‌ರವರ ಪ್ರಕಾರ ಹಲವಾರು ಯುವ ಭಾರತೀಯರು ಸಂಪ್ರದಾಯಕ್ಕೆ ಎರಡನೆಯ ಸ್ಥಾನವನ್ನು ಕೊಡುತ್ತಾರೆ. "ಶಿಕ್ಷಣವನ್ನು ಮುಗಿಸಿದ ನಂತರ ಜೀವನೋಪಾಯವನ್ನು ಹುಡುಕುವಾಗಲೂ, ಹೊಸ ಸಂಬಂಧವನ್ನು ಬೆಳೆಸುವಾಗಲೂ, ಕುಟುಂಬದ ಸ್ವರೂಪವೇ ಬದಲಾಗುತ್ತಿರುವ ಅಮೆರಿಕನ್ ಸಮಾಜದಲ್ಲಿ, ತಮ್ಮ ಸಾಂಪ್ರದಾಯಿಕ ಹಿನ್ನೆಲೆ ಅಪರಿಮಿತ ಸಾಮರ್ಥ್ಯ ನೀಡುವುದನ್ನು ಹಲವಾರು ಭಾರತೀಯ ಅಮೆರಿಕನ್ನರು ಗ್ರಹಿಸುತ್ತಾರೆ."

ನ್ಯೂಜೆರ್ಸಿಯಲ್ಲಿರುವ, ಪದವೀಧರನಾದ, ೨೩ ವರ್ಷದ ಅನು ಆನಂದ್ ತನ್ನ ತಂದೆ ತಾಯಿಗಳಂತೆ ಧರ್ಮನಿಷ್ಠ ಬ್ರಾಹ್ಮಣನಲ್ಲದಿದ್ದರೂ, ಸಾಂಪ್ರದಾಯಿಕ ಶಿಕ್ಷಣವನ್ನು ಒಪ್ಪುತ್ತಾನೆ. "ಒಟ್ಟಾರೆ ಹೇಳಬೇಕೆಂದರೆ ನಮ್ಮ ತಂದೆತಾಯಂದಿರು ನಮ್ಮನ್ನು ಚೆನ್ನಾಗಿ ಬೆಳೆಸಿದ್ದಾರೆ. ಮಾದಕ ವಸ್ತುಗಳನ್ನು ಸೇವಿಸುವವರ, ಹದಿಹರೆಯದ ಗರ್ಭಿಣಿಯರ ಮತ್ತು ಹೆಂಡಕುಡುಕರ ಸಂಖ್ಯೆ ನಮ್ಮಲ್ಲಿ ಬಹಳ ಕಡಿಮೆ" ಎನ್ನುತ್ತಾನೆ.

ಸಂಯುಕ್ತ ಸಂಸ್ಥಾನದಲ್ಲಿ ಭಾರತೀಯ ಮುಸ್ಲಿಂ ಪಂಗಡದ ಪ್ರಮುಖ ನಾಯಕಿ ಹಾಗೂ ಮನೋರೋಗ ತಜ್ಞೆ ನಜ್ಮ ಸುಲ್ತಾನರ ಪ್ರಕಾರ ಇಸ್ಲಾಂ ಧರ್ಮವು ಅಲ್ಲಿನ ಮುಸಲ್ಮಾನರಿಗೆ ಅಮೆರಿಕನ್ ಸಂಸ್ಕೃತಿಯಲ್ಲಿ ಹೊಂದಿಕೊಂಡು ಸಂಚರಿಸಲು ಸಹಾಯ ಮಾಡುತ್ತದೆ. "ದುಷ್ಪ್ರೇರಣೆಗಳನ್ನು ಎದುರಿಸಲು ಇಸ್ಲಾಂ ಧರ್ಮವು ನಮಗೆ ಸ್ಪಷ್ಟವಾದ ಶಕ್ತಿಯಾಗಿ ಒದಗುತ್ತದೆ. ನಾವೂ ಕೂಡ ಮಸೀದಿಗೆ ಹೋಗುತ್ತೇವೆ, ಪ್ರಾರ್ಥಿಸುತ್ತೇವೆ, ಸುಖ ದುಃಖಗಳನ್ನು ಹಂಚಿಕೊಳ್ಳುತ್ತೇನೆ. ಇಷ್ಟೇ ಸಾಕು ದುಷ್ಪ್ರೇರಣೆಗಳ ವಿರುದ್ಧದ ಸಮರವನ್ನು ಅರ್ಧ ಗೆದ್ದಂತೆ."

ದಕ್ಷಿಣ ಏಷಿಯನ್ನರು ತಮ್ಮ ಮಕ್ಕಳು ತಮ್ಮ ಪಂಗಡದವರನ್ನೇ ಮದುವೆಯಾಗುವುದನ್ನು ಇಷ್ಟಪಡುತ್ತಾರೆ. ವ್ಯವಸ್ಥಿತ ಮದುವೆಗಳಲ್ಲಿರುವಂತೆಯೇ, ಇಲ್ಲೂ ಕೂಡ ತಂದೆ ತಾಯಿಯರು ಹುಡುಗನ ಬಗ್ಗೆ ಮೊದಲೇ ವಿಚಾರಿಸಿ ನಂತರ ತಮ್ಮ ಮಗಳನ್ನು ಅವನಿಗೆ ಪರಿಚಯಿಸುತ್ತಾರೆ. ಸಂಬಂಧವನ್ನು ಮುಂದುವರೆಸಬೇಕೆ, ಇಲ್ಲವೆ ಎನ್ನುವುದನ್ನು ಹುಡುಗ ಹುಡುಗಿಯರು ಆಮೇಲೆ ನಿರ್ಧರಿಸುತ್ತಾರೆ.

ಗಂಡು ಹೆಣ್ಣುಗಳ ನಡುವಿನ ಲೈಂಗಿಕ ಸಂಬಂಧವು ಉಪಖಂಡದವರ ಹಳೆಯ ಮತ್ತು ಹೊಸ ಜೀವನಗಳ ನಡುವೆ ಉದ್ವೇಗಕ್ಕೆ ಕಾರಣವಾಗುತ್ತದೆ. ಏಷಿಯನ್ ಉಪಖಂಡದಲ್ಲಿ ಅಸ್ತಿತ್ವದಲ್ಲಿರುವ ವಿಸ್ತರಿಸಿದ ಒಟ್ಟು ಕುಟುಂಬದ ವ್ಯವಸ್ಥೆಯು ಕುಟುಂಬದ ಸದಸ್ಯರಿಗೆ ಒಡನಾಟದ ಹಾಗೂ ನೆರವಿನ ಮೂಲವಾಗಿರುತ್ತದೆ. ಆದರೆ ಅಮೆರಿಕನ್ ಜೀವನವು ಉಪಖಂಡದಿಂದ ಬಂದ ಹಲವರಲ್ಲಿ ತೀಕ್ಷ್ಣವಾದ ಒಂಟಿತನದ

ಮನೋಭಾವನೆಯನ್ನು ಬೆಳಸಿ ವೈವಾಹಿಕ ಜೀವನದಲ್ಲಿ ತೊಡಕನ್ನುಂಟುಮಾಡುತ್ತದೆ.

ಇಷ್ಟಿದ್ದರೂ ಹಲವಾರು ದಕ್ಷಿಣ ಏಷಿಯನ್ ಮಹಿಳೆಯರಿಗೆ ಅಮೆರಿಕನ್ ವ್ಯವಸ್ಥೆಯು ಅತ್ಯಂತ ವಿಮೋಚನಾಕಾರಿಯಾಗಿ ಕಾಣುತ್ತದೆ. 'ಕಾದಂಬರಿ ಕಾರ್ತಿ ಸುಶಮ್ ಬೇಡಿ ಹೇಳುತ್ತಾರೆ: "ಭಾರತದಲ್ಲಿ ಮಹಿಳೆಯರು ಸತತವಾಗಿ ಹಲವಾರು ಸಾಮಾಜಿಕ ಮತ್ತು ಕೌಟುಂಬಿಕ ನಿರ್ಬಂಧನೆಗೊಳಗಾಗಿರುತ್ತಾರೆ." ಇಲ್ಲಿಗೆ ವಲಸೆಬಂದ ಗೃಹಿಣಿಯರಲ್ಲಿ ಹೆಚ್ಚು ಮಂದಿ—ಭಾರತಕ್ಕೆ ಹೋಲಿಸಿದಾಗ—ಉದ್ಯೋಗಿಗಳಾಗಿರುತ್ತಾರೆ. ಬೇಡಿಯವರು ಮುಂದುವರೆದು: "ನಾವು ಇಲ್ಲಿ ಹೆಚ್ಚು ಸಮರ್ಥರೆಂಬ ಭಾವನೆ ಇದೆ. ಆದರೆ ಪುರುಷರಿಗೆ ತಾವು ಪೋಷಣಾ ವಂಚಿತರೆಂಬ ಅನಿಸಿಕೆ ಇರುತ್ತದೆ. ಭಾರತದಲ್ಲಿ ಹೆಂಡತಿ ಹತ್ತಿರದಲ್ಲಿಲ್ಲದಿದ್ದರೂ, ಪುರುಷರನ್ನು ನೋಡಿಕೊಳ್ಳಲು ತಾಯಿಯೋ, ಸೋದರಿಯೋ ಯಾರಾದರೊಬ್ಬರು ಇದ್ದೇ ಇರುತ್ತಾರೆ."

ದಕ್ಷಿಣ ಏಷ್ಯಾದಿಂದ ವಲಸೆಬಂದವರಲ್ಲಿ ಹೆಚ್ಚಿನವರು ಆದರ್ಶ ಅಮೆರಿಕನ್ನರಾಗಿ, ಅಮೆರಿಕದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೆ ಅದ್ಭುತ ಕೊಡುಗೆಯನ್ನು ನೀಡು ನೀಡುತ್ತಲೇ ತಮ್ಮ ಪಂಗಡಗಳ ಚೈತನ್ಯವನ್ನು ಉಳಿಸಿಕೊಂಡು ಬಂದಿದ್ದಾರೆ.

ಪ್ರತಿ ವರ್ಷವೂ ಆಗಸ್ಟ್ ತಿಂಗಳ ಮಧ್ಯದಲ್ಲಿ ಭಾರತ ಮತ್ತು ಪಾಕಿಸ್ತಾನಿ ಪಂಗಡಗಳು ತಮ್ಮ ದೇಶದ ಸ್ವಾತಂತ್ರ್ಯವನ್ನು ಮೆರವಣಿಗೆಗಳೊಂದಿಗೆ ಆಚರಿಸುತ್ತವೆ. ಮಳಿಗೆಗಳು ಸಮೋಸ ಮತ್ತು ಕಬಾಬ್‌ಗಳನ್ನು ಮಾರುತ್ತವೆ. ಹೆಂಗಸರು ಬಣ್ಣ ಬಣ್ಣದ ಹೊಳೆಯುವ ಬಟ್ಟೆಗಳನ್ನೂ, ಗಂಡಸರು ವಿಶೇಷ ಪೋಷಾಕುಗಳನ್ನೂ ಧರಿಸುತ್ತಾರೆ.

ಈ ಮೆರವಣಿಗೆಗಳು, ನ್ಯೂಯಾರ್ಕ್‌ನ ಪ್ರಮಾಣದಿಂದ ಸಾಧಾರಣವೆಸಿದರೂ, ಆ ನಗರದಲ್ಲಿ ನಡೆಯುವ ಬೇರೇ ಯಾವುದೇ ಪಂಗಡ ಉತ್ಸವಗಳಲ್ಲಿ ಕಂಡುಬರದ ಒಂದು ಬಗೆಯ ಯಥಾರ್ಥತೆಯನ್ನು ಹೊಂದಿರುತ್ತವೆ.

ಪೋಲಿಷ್, ಗ್ರೀಕ್ ಮತ್ತು ಐರಿಷ್ ಅಮೆರಿಕನ್ನರುಗಳಂತೆ, ನ್ಯೂಯಾರ್ಕ್‌ನ ದಕ್ಷಿಣ ಏಷಿಯನ್ನರೂ ತಮ್ಮದೇ ವಸ್ತ್ರವಿನ್ಯಾಸಗಳು, ಹಾಡು-ನೃತ್ಯ, ತಿಂಡಿ ತಿನಸುಗಳನ್ನು ಪ್ರದರ್ಶಿಸುತ್ತಾ ಹೆಚ್ಚು ಹೆಚ್ಚು ಆತ್ಮವಿಶ್ವಾಸ ಮತ್ತು ಸ್ವಾಭಿಮಾನವನ್ನು ಅರಿಯುವ ದಿನಗಳು ಬರುವುದರಲ್ಲಿ ಸಂದೇಹವೇ ಇಲ್ಲ, ವಲಸೆ ಬಂದ ಅಮೆರಿಕನ್ನರನ್ನೂ, ದೇಶೀ ಅಮೆರಿಕನ್ನರನ್ನೂ ಪ್ರತ್ಯೇಕಿಸುವ ಅಗೋಚರ ರೇಖೆಯನ್ನು ಏಷಿಯನ್ ವಲಸೆಗಾರರು, ದಾಟುತ್ತಾರೆ. ಇಂಥ ಹೊಂದಾಣಿಕೆಯು ಆಶ್ಚರ್ಯವಾಗುವಷ್ಟು ಬೇಗ ನಡೆದು ಹೋಗುತ್ತದೆ. ಹೀಗೆ ಹೊಂದಾಣಿಕೆಯಾಗುವಾಗ ಸಂಪ್ರದಾಯಗಳು ಮುರಿದು ದುಃಖವನ್ನು ತರುವುದೂ ಉಂಟು. ಆದರೇನಂತೆ, ಈ ಸಂಸ್ಕೃತಿಗಳ ಮಿಲನಕ್ಕೆ ತನ್ನದೇ ಆದ 'ಅಮೆರಿಕನ್ ವೈಭವವಿದೆ'—ವರ್ಷ ವರ್ಷವೂ ಪ್ರದರ್ಶನಾರ್ಹವಾಗಿದೆ.

ಅತ್ತ ದರಿ-ಇತ್ತ ಪುಲಿ

ಡಾ|| ಸ. ಜ. ನಾಗಲೋಟಿಮಠ

೨೫ 'ಶಾಂತಾ' ಬಸವ ಕಾಲೋನಿ
ಬೆಳಗಾವಿ-೫೯೦ ೦೧೦

ತನ್ನ ಪೋಷಾಕಿನ ಬಗ್ಗೆ ಇನಿತೂ ನಿಗಾ ಕೊಡದಿದ್ದ ಐನ್‌ಸ್ಟೈನ್ ಉದ್ಗರಿಸಿದರು; "ಏಕಾಗಿ? ಅಲ್ಲಿ ಪ್ರತಿಯೊಬ್ಬನಿಗೂ ನನ್ನನ್ನು ಗೊತ್ತಿದೆ" (ಕಚೇರಿಗೆ ಹೋಗುವಾಗ ಸರಿಯಾದ ಉಡುಪು ಧರಿಸಿರಬೇಕೆಂದು ಹೆಂಡತಿ ಹೇಳಿದಾಗ) "ಏಕಾಗಿ? ಅಲ್ಲಿ ಯಾರಿಗೂ ನನ್ನನ್ನು ಗೊತ್ತಿಲ್ಲ (ತನ್ನ ಪ್ರಥಮ ಸಮ್ಮೇಳನಕ್ಕೆ ಹೋಗುವಾಗ ಅವರು ಸರಿಯಾದ ಉಡುಪು ಧರಿಸಿರಬೇಕೆಂದು ಹೇಳಿದಾಗ).

ಈ ಘಟನೆ ಜರುಗಿದ್ದು ೧೯೭೯-೮೦ ರ ಸುಮಾರಿಗೆ. ನಾನು ಆಗ ಹೊಸ ಹರುಪಿನ ಪ್ರಾಧ್ಯಾಪಕ ಹಾಗು ವಿಭಾಗದ ಮುಖ್ಯಸ್ಥ. ನನ್ನ ವಿಭಾಗವು ದೇಶದ ಯಾವುದೇ ಕಾಲೇಜಿನ ವಿಭಾಗಕ್ಕಿಂತ ಕಡಿಮೆ ಇರಬಾರದು ಎನ್ನುವ ಹಂಬಲ ಇತ್ತು. ನಮ್ಮ ವಿಷಯದ ಸಮ್ಮೇಲನಗಳು ಎಲ್ಲಿಯೇ ಜರುಗಲಿ ನಾನು ಅದರಲ್ಲಿ ಭಾಗವಹಿಸುತ್ತಿದ್ದೆ. ಒಂದೆರಡು ಸಂಶೋಧನಾ ಪ್ರಬಂಧಗಳನ್ನೂ ಮಂಡಿಸುತ್ತಿದ್ದೆ. ಸಮ್ಮೇಳನಕ್ಕೆ ಹೋಗುವಾಗ ಒಬ್ಬನೇ ಎಂದೂ ಹೋಗುತ್ತಿರಲಿಲ್ಲ. ನನ್ನ ಸಹಾಯಕ ಶಿಕ್ಷಕರನ್ನು ಹುರಿದುಂಬಿಸಿ ಕರೆದುಕೊಂಡು ಹೋಗುತ್ತಿದ್ದೆ. ಅವರಿಂದಲೂ ಪ್ರಬಂಧ ಮಂಡನೆ ಮಾಡಿಸುತ್ತಿದ್ದೆ. ಒಂದು ಸಲ ನನ್ನೊಡನೆ ನನ್ನ ವಿಭಾಗದಲ್ಲಿಯ ಒಬ್ಬ ಲೆಕ್ಚರರ್ ಚಂದಿಗಡ ಸಮ್ಮೇಳನಕ್ಕೆ ಬಂದರು. ಬೆಳಗಾವಿಯಿಂದ ಅಂಬಾಲಾಕ್ಕೆ ಹೋಗಿ ಅಲ್ಲಿಂದ ಚಂದಿಗಡಕ್ಕೆ ಹೋದೆವು. ಅದು ಜನವರಿ ತಿಂಗಳು. ಛಳಿ ಬಹಳವಿತ್ತು. ಯಾವ ದೇವರ ಆಶೀರ್ವಾದವೋ ಏನೋ ಉಳಿದವರಿಗೆ ಎಷ್ಟೇ ಛಳಿ ಇರಲಿ ನನಗೆ ಅದು ಏನೂ ಅನಿಸುತ್ತಿರಲಿಲ್ಲ. ಒಂದು ಬುಶ್‌ಶರ್ಟ್, ಒಂದು ಪ್ಯಾಂಟ ಧರಿಸಿಕೊಂಡು ತಿರುಗುತ್ತಿದ್ದೆ. ಪರದೇಶಗಳಿಗೆ ಹೋದರೂ ಇದೇ ವೇಷ ನನ್ನದು. ಜನರು ನೇರವಾಗಿ ಬಂದು 'ನಿಮಗೆ ಥಂಡಿ ಹತ್ತುವದಿಲ್ಲವೋ?' ಎಂದು ಕೇಳುತ್ತಿದ್ದರು. ನನ್ನ ಉತ್ತರ ಸಿದ್ಧವಾಗಿರುತ್ತಿತ್ತು. 'ಓಹೋ ಥಂಡಿಯೋ? ಅದರ ತೀವ್ರತೆಯನ್ನು ನಾನು ಸಂತೋಷಿಸುತ್ತೇನೆ" ಎಂದು ಹೇಳಿ ನಗುತ್ತಿದ್ದೆ.

ಆ ಸಮ್ಮೇಳನದಲ್ಲೂ ನಿತ್ಯದಂತೆ ನನ್ನ ವೇಷದಲ್ಲಿದ್ದೆ. ನನ್ನೊಡನೆ ಬಂದ ನನ್ನ ಕಿರಿಯ ಸ್ನೇಹಿತನೂ ಬೊಜ್ಜು ಬೆಳಸಿದ

ವ್ಯಕ್ತಿ. ಅವನೂ ಸಹ ನನ್ನಂತೆಯೇ ಬುಶ್‌ಶರ್ಟ ಮೇಲೆ ತಿರುಗಿದ ಯಾವಾಗಲೂ ನನಗೆ ವಿಧೇಯನಾಗಿ ಜೊತೆಜೊತೆಗೆ ಚಲಿಸುತ್ತಿದ್ದ. ಸಮ್ಮೇಳನದಲ್ಲಿ ನಮ್ಮ ಸಂಶೋಧನೆಗಳು ಎಲ್ಲರ ಗಮನ ಸೆಳೆದವು. 'ಶಬ್ಬಾಸ್' ಎಂದು ಹಿರಿಯರು ಹೇಳಿದರು. ಸಮ್ಮೇಳನ ಮುಗಿಯಿತು. ಮರುಪ್ರಯಾಣ ಪ್ರಾರಂಭವಾಯಿತು. ಮರಳಿ ಅಂಬಾಲಾ ಸ್ಟೇಶನ್‌ಗೆ ಬಂದೆವು. ರಾತ್ರಿ ಇಡೀ ಅಲ್ಲಿಯೇ ಕಳೆಯಬೇಕಾಗಿತ್ತು. ವಿಪರೀತ ಥಂಡಿ ಕಾರಣ ಒಂದು ರೂಮು ಬಾಡಿಗೆ ಹಿಡಿದು ಸ್ಟೇಶನ್‌ನಲ್ಲಿಯೇ ಮಲಗಲು ನಿಶ್ಚಯಿಸಿದೆವು. ನಮ್ಮ ಪುಣ್ಯಕ್ಕೆ ವಿಶ್ರಾಂತಿ ಗೃಹವೂ ಸಿಕ್ಕಿತು. ಲಗೇಜುಗಳನ್ನು ಹೊತ್ತು ವಿಶ್ರಾಂತಿ ಕೊಠಡಿಗೆ ಬಂದೆವು. ಬೆಚ್ಚನೆಯ ಕೊಠಡಿ, ಮೆತ್ತನೆಯ ಗಾದಿ, ಉಣ್ಣೆಯ ಕಂಬಳಿ ನೋಡಿ ಖುಷಿಪಟ್ಟೆ. ನನಗೆ ಬಲು ಅವಸರದ ನಿದ್ದೆ. ತಕ್ಷಣವೇ ಹಾಸಿಗೆಯಲ್ಲಿ ಹೊರಳಿದೆ. ನನ್ನ ಕಿರಿಯ ಸ್ನೇಹಿತನಿಗೆ ಹೇಳಿದೆ 'ಬೇಗನೆ ಮಲಗಿರಿ ನಸುಕಿನಲ್ಲಿ ಎದ್ದು ಪ್ರಯಾಣ ಮುಂದೆವರಿಸಬೇಕು'. ಅವನು 'ಹೂನ್ರಿ ಸರ್ ನನಗೆ ನಿದ್ದೆ ತಡವಾಗಿ ಬರುವದು ನೀವು ಮಲಗಿರಿ' ಎಂದು ಹೇಳಿದ್ದೆ ತಡ ನಾನು ನಿದ್ದೆಯಲ್ಲಿ ಮುಳುಗಿದೆ.

ಒಂದು ತಾಸು ಕಳೆದಿರಬಹುದು. ಸ್ಟೇಶನ್‌ದಲ್ಲಿ ಒಂದು ಟ್ರೇನು ಬಂದು ದೊಡ್ಡ ಸಪ್ಪಳ ಮಾಡಿತು. ಮಲಗಿದ್ದ ನನಗೆ ಎಚ್ಚರವಾಯಿತು. ಕಣ್ಣು ತೆರೆದೆ. ನನ್ನ ಕಿರಿಯ ಸ್ನೇಹಿತ ಸಂಪೂರ್ಣ ಬದಲಾಗಿದ್ದಾನೆ! ಹೊಸಪ್ಯಾಂಟು, ಹೊಸ ಕೋಟು, ಹೊಸ ಶರ್ಟ ತೊಟ್ಟಿರುವನು. ಇದರ ಮೇಲೆ ಕೊರಳಿಗೆ ಒಂದು ನೆಕ್ ಟೈ ಸಹ ಕಟ್ಟಿರುವನು. ಹೊಸ ಬೂಟು ಸಹ ಇವೆ. ಇವನ್ನೆಲ್ಲ ಧರಿಸಿ ಕೊಠಡಿಯಲ್ಲಿ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಚಲಿಸುತ್ತಿರುವನು ಮರಳಿ ಹೋಗಿ ದೊಡ್ಡ ನಿಲುವುಗನ್ನಡಿಯ ಮುಂದೆ ನಿಲ್ಲುತ್ತಾನೆ. ಮತ್ತೆ ಚಲಿಸುತ್ತಾನೆ ನನಗೋ ಇದೆಲ್ಲ ವಿಚಿತ್ರ. ಏನು ನಡೆದಿದೆ ಎಂಬುದೇ ತಿಳಿಯದು. ಸಂಶಯ ಬಂದಿತು. ಇವನು ರಾತ್ರಿ ಎಲ್ಲಿಯೋ ಹೊರಟಂತಿದೆ! ಆದರೆ ಅವನು ರಾತ್ರಿ ಏನು ಮಾಡುವನು? ಅಂಬಾಲಾದ ಥಂಡಿ ಅವನನ್ನು ಹೀಗೆ ಮಾಡಲು ಹಚ್ಚಿದೆಯೊ? ತಲೆಯಲ್ಲಿ ಗಲಿಬಿಲಿಯೋ ಗಲಿಬಿಲಿ. ಏನು ಮಾಡುವನೋ ನೋಡೋಣ ಎಂದು ಎಚ್ಚರಾಗದವನಂತೆ ಅಲ್ಲಿಯೇ ಮಲಗಿದೆ. ಬಾಗಿಲ ಬಳಿ ಹೋದ. ಆಯಿತು ಇವನು ಹೊರಗೆ ಜಿಗಿದು ಸಾಹಸ ಮಾಡಿ ಬರುವನು ಎನಿಸಿತು. ಇದು ಹೊಸ ಊರು, ಹೊಸ ಜನ, ನಮ್ಮ ಭಾಷೆಗೂ ಅಲ್ಲಿಯ ಭಾಷೆಗೂ ಭಿನ್ನತೆ ಇದೆ. ಇವನು ಹೋಗಿ ಏನಾದರೂ ಗೊಂದಲದಲ್ಲಿ ಸಿಲುಕಿದರೆ ಹೇಗೆ? ಎಂಬ ಅಂಜಿಕೆ ಬಂದು, ಎದ್ದು ಬಿಡೋಣ ಅನಿಸಿತು. ಅವನು ಬಾಗಿಲು ತೆರೆದ. ನನ್ನ ಅನಿಸಿಕೆ ಸರಿ ಎನಿಸಿತು. ಬಾಗಿಲಲ್ಲಿ ನಿಂತ. ಅವನಿಗೂ ಧೈರ್ಯವಾಗಿರಲಿಕ್ಕಿಲ್ಲ ಎಂದೆ. ಮತ್ತೆ ರೂಮಿನೊಳಗೆ ಬಂದ. ದೇವರಿಗೆ ನಮಸ್ಕರಿಸಿದೆ. ಮಹಾರಾಯಾ ಇವನಿಗೆ ಒಳ್ಳೆಯ ಬುದ್ಧಿ ಕೊಟ್ಟೆ ಎಂದೆ. ಅಷ್ಟರಲ್ಲಿ ಮತ್ತೆ ಹೊರಗೆ ಹೋದ, 'ಅಯ್ಯೋ' ಅನಿಸಿತು ನಾನೇ ಹೆದರಿದೆ ನಾನು ಹಿರಿಯ. ಅವನು ಬಹಳ ಕಿರಿಯ. ಅವನು ದಾರಿ ತಪ್ಪುತ್ತಿರುವಾಗ ನಾನು ಸರಿ ದಾರಿ ತೋರಿಸಬಾರದೆ?' ಎನಿಸಿತು. ಹಾಸಿಗೆಯಲ್ಲಿ ಹೊರಳಿದೆ. ಆದರೂ ಎಚ್ಚೆತ್ತಿರುವನೆಂಬು

ಅವನಿಗೆ ತಿಳಿಯಬಾರದು ಎಂದು ಆಶೆ ಬೇರೆ· ಪತ್ತೇದಾರಿ ಕೆಲಸಗಳೇ ಓಗಿರಬೇಕು ಎನಿಸಿತು. ಮತ್ತೆ ಅವನ ಬೂಟಿನ ಶಬ್ದ ಕೇಳಿಸಿತು. ಗಾಢವಾದ ನಿದ್ರೆಯಲ್ಲಿರುವವನಂತೆ ನಟಿಸುತ್ತ ಮಲಗಿದೆ ಕಣ್ಣು ಮುಚ್ಚಿದರೂ ಅವನು ನಡೆದಾಡುವದು ಕಾಣುತ್ತಿತ್ತು. ಕುರುಡರಿಗೆ ಹೀಗೆ ಆಗುತ್ತಿರಬೇಕು ಅನಿಸಿತು. ಎನ್ನೊಳಗಿನ ತಳಮಳ ಜಾಸ್ತಿ ಆಗುತ್ತಿತ್ತು. ಆದರೆ ನಾನು ಪತ್ತೆದಾರನಾಗಬೇಕು ಎಂಬ ಹಂಬಲ. ಸುಮಾರು ಅರ್ಧ ತಾಸು ವೇಳೆ ಕಳೆಯಿತು. ಕಿರಿಯ ಸ್ನೇಹಿತ ಕೊನೆಗೊಮ್ಮೆ ಬಾಗಿಲು ಮುಚ್ಚಿದ. ಅದನ್ನು ಪಕ್ಕಾ ಮಾಡಲು ತುಡುಗಿನಿಂದ ಬಾಗಿಲು ನೋಡಿದೆ. ಅವನು ಬೋಲ್ಟ ಹಾಕಿದ. ಬೂಟು ಬಿಚ್ಚಿದ, ಕಾಲುಚೀಲ ತೆಗೆದ. ನೇರವಾಗಿ ತನ್ನ ಮಂಚಕ್ಕೆ ಬಂದು ಹಾಸಿಗೆಯ ಮೇಲೆ ಮಲಗಿದ. ಉಣ್ಣೆಯ ಕಂಬಳಿಯನ್ನು ಎಳೆದುಕೊಂಡು ಮುಸುಕು ಹಾಕಿದ. ಈಗ ನನಗೆ ಇನ್ನೊಂದು ಅಂಜಿಕೆ. ದುರ್ದೈವದಿಂದ ಇವನ ತಲೆ ಏನಾದರು ಕೆಟ್ಟಿದೆಯೋ ಹೇಗೆ? ಹೊಸ ಹೊಸ ಬಟ್ಟೆಗಳನ್ನು ಹಾಕಿಕೊಂಡು ಇವನು ಮಲಗುವದರಲ್ಲಿ ಏನು ಅರ್ಥವಿದೆ? ಮತ್ತೆ ಒಂದೆರಡು ಮಿನಿಟುಗಳಲ್ಲಿ ಅವನು ಏಳುವನೆಂದು ನನ್ನ ಅಂದಾಜು. ಅವನು ಹಾಸಿಗೆಯಿಂದ ಏಳಲೇ ಇಲ್ಲ. ಏನು ಇವನು ಯಾರನ್ನಾದರೂ ಒಳಗೆ ಕರೆದು ತಂದಿರುವನೋ ಎಂಬ ಸಂಶಯ ಮೂಡಿತು. ಪತ್ತೆ ಹಚ್ಚಬೇಕಲ್ಲ. ಕಡಿಮೆ ಸದ್ದಾಗುವಂತೆ ಆ ಬದಿಗೆ ಹೊರಳಿದೆ. ಹಾಸಿಗೆಯಲ್ಲಿ ಒಬ್ಬನೇ ಇರುವದು, ಮತ್ತಾರಿಲ್ಲ. ಯಾಕೆ ಹೀಗಾಯಿತು? ತಡೆಯಲಾಗಲಿಲ್ಲ ಎದ್ದು ಕುಳಿತೆ. ಅವನು ನಿದ್ದೆ ಇದ್ದವರಂತೆ ಜೋರಿನಿಂದ ಪೂರ್ಣ ಮುಸುಕುಹಾಕಿ ಮಲಗಿದ. ನಾನು ಹಾಸಿಗೆ ಬಿಟ್ಟು ಎದ್ದುನಿಂತೆ. ರೂಮಿನಲ್ಲಿ ಸುತ್ತು ಹಾಕಿದೆ. ಸುಗಂಧ ಎಣ್ಣೆಯ ವಾಸನೆ ಅವನ ಮಂಚದ ಸುತ್ತಲಿತ್ತು. ಅವನು ಪ್ರವಾಸದಲ್ಲಿ ಉಪಯೋಗಿಸಬೇಕಾದ ಅರಿವೆ ಅಲ್ಲೇ ಜೋತು ಬಿದ್ದಿವೆ. ಇನ್ನು ಸುಮ್ಮನಿರಬಾರದೆಂದು ಕರೆದ 'ಏಳ್ರಿ' ಎಂದೆ ಮುಸುಕು ತರೆದ ನನ್ನನ್ನು ನೋಡಿದ. ಈಗ ನಾನು ಚಲಿಸುತ್ತಿದ್ದೆ. ಅವನು ನಾನು ನೋಡಿದಂತೆ ಕಣ್ಣು ಮುಚ್ಚಿ ನೋಡುತ್ತಿದ್ದಂತೆ ಅನಿಸಿತು. 'ಯಾಕ್ರಿ ಸರ್' ಎಂದ. ನಾನು ನೇರವಾಗಿ ಕೇಳಿಯೇಬಿಟ್ಟೆ 'ಅಲ್ರಿ ಏನು ಹೊರಗೆಹೋಗಬೇಕಾಗಿತ್ತಾ?. ಅವನು 'ಇಲ್ರಿ' ಎಂದ. ಅವನು ನನ್ನ ಲೆಕ್ಚರರ್ ಕಾರಣ ಅಧಿಕಾರವಾಣಿಯಿಂದ ಕೇಳಿದೆ. 'ಅಲ್ರಿ ಇಂಥಾ ವೇಳೆಯಲ್ಲಿ ಹೊಸಸೂಟು, ಟೈ ಧರಿಸಿರುವಿರಲ್ಲಾ ಏನಿದು?' ಎಂದೆ. ಅವನು ಅದು ಬೇರೆ ಇದೆಸರ್, ನೀವು ಮಲಗಿರಿ ನಾಳೆ ಹೇಳುವೆನೆಂದ. ಇರಲಿ ಎಂದು ಬಾಗಿಲು ಭದ್ರಮಾಡಿ ಮಲಗಿದೆ. ಆದರೆ ನಿದ್ರೆ ಹತ್ತಲೊಲ್ಲದು. ಏನು? ಯಾಕೆ ಹೀಗೆ ಮಾಡಿದರು? ಎಂದು ಗುನುಗುತ್ತಿದ್ದೆ. ನಸುಕಿನ ನಾಲ್ಕು ಗಂಟೆ ಬಾರಿಸಿತು ಎದ್ದು ಕುಳಿತೆ. ಅವರನ್ನು ಎಚ್ಚರಿಸಿದೆ ಎದ್ದು ಮುಖ ತೊಳೆದು ಸಿದ್ಧವಾಗತೊಡಗಿದೆವು. ಅವನು ಎದ್ದು ಧರಿಸಿದ ಸೂಟು ಬಿಚ್ಚಿ ಒಂದೊಂದಾಗಿ ಮಡಿಚಿ ಸೂಟಕೇಸದಲ್ಲಿ ಸೇರಿಸಿಸಿದ. ಪ್ರವಾಸದ ಅರಿವೆಗಳನ್ನು ಧರಿಸಿದ ಅಷ್ಟೊತ್ತಿನವರೆಗೆ ತಡೆ ಹಿಡಿದು ಸಾಕಾಗಿತ್ತು. ಒಮ್ಮೆಲೆ ಕೇಳಿದೆ ಯಾಕ್ರಿ ರಾತ್ರಿ ಸೂಟ ತೊಟ್ಟುಕೊಂಡು ಯಾಕೆ ಮಲಗಿದಿರಿ?' ಎಂದೆ. ಅಷ್ಟರಲ್ಲಿ ಇಬ್ಬರೂ

ನಮ್ಮ ಗಂಟುಕಟ್ಟಿ ಮುಗಿಸಿದೆವು. ಅವನು ನನಗೆ ಹೇಳಿದ 'ಸರ್ ನಾನು ಸಮ್ಮೇಳನಕ್ಕೆ ಬರುವದು ನನ್ನ ಜನ್ಮದಲ್ಲಿ ಇದೇ ಮೊದಲು, ನಮ್ಮ ಮನೆಯಲ್ಲಿ ಎಲ್ಲರೂ ಹೆಮ್ಮೆಪಟ್ಟರು. ನಾನು ಸಂಶೋಧನಾ ಪ್ರಬಂಧ ಮಂಡಿಸುವೆನೆಂದು ಎಲ್ಲರಿಗೂ ಹೇಳಿದರು. ಸಮ್ಮೇಳನದಲ್ಲಿ ನಾನು ತೋಡಲೆಂದು ನನ್ನ ಹೆಂಡತಿ ನನ್ನ ಸೂಟನ್ನು ಇಸ್ತ್ರಿಮಾಡಿಸಿ ಹೊಸ ಟೈ ತಂದು ಸೂಟಕೇಸಿನಲ್ಲಿ ಹಾಕಿದಳು. ಸ್ಟೇಶನ್‌ದ ವರೆಗೆ ಬಂದು ಸರಿಯಾಗಿ ಡ್ರೆಸ್ ಮಾಡಬೇಕೆಂದು ನೆನಪಿಸಿ ಹೋದಳು. ಆದರೆ ಸಮ್ಮೇಳನದಲ್ಲಿ ನಾನು ಸೂಟು ಧರಿಸುವದು ಆಗಲಿಲ್ಲ'. ನನಗೆ ಕೆಡುಕೆನಿಸಿತು 'ಅಲ್ರಿ, ನಿಮ್ಮ ಸೂಟ ಇದ್ರ ನೀವು ಧರಿಸಬೇಕಾಗಿತ್ತಲ್ಲ?' ಎಂದೆ ಅವನು ಹೇಳಿದ 'ಅಲ್ರಿ ಸರ್, ನೀವು ನನ್ನ ಪ್ರೊಫೆಸರ್, ಸಮ್ಮೇಳನದಲ್ಲಿ ಎಲ್ಲರೂ ನಿಮ್ಮನ್ನು ಆದರಿಸುವವರೇ ಇದ್ದರು. ನಾನು ನಿಮ್ಮ ಕೈಕೆಳಗಿನ ಕೇವಲ ಲೆಕ್ಚರರ್. ನಾನು ಸೂಟು ಹಾಕಿಕೊಂಡು ಅಡ್ಡಾಡುವದು ನೀವು ಸಾದಾ ಬುಶಶರ್ಟ ಧರಿಸಿ ಇರುವದು. ಎಂಥ ಮಾತು, ನೀವು ಹಾಕಿದ್ರ ನಾನು ಹಾಕುತ್ತಿದ್ದೆ, ನೀವು ಹಾಕಲಿಲ್ಲ'.

ನಾನು–'ಅಲ್ರಿ, ನಾನು ಸೂಟು ಹೊಲಿಸೇ ಇಲ್ಲ ನೀವು ನನ್ನ ಯಾಕೆ ಬೆನ್ನುಹತ್ತಿದಿರಿ?'

ಅವನು–'ಇಲ್ರಿ ನನಗ ಮನಸ್ಸಾಗಲಿಲ್ಲ' ಎಂದ.

ನಾನು–'ಮತ್ತ ಈಗ ರಾತ್ರಿ ಯಾಕ ಹಾಕಿದ್ರಿ?' ಎಂದೆ, ಅವನು ಹೇಳಿದ. 'ಸರ್, ಸೂಟ ಹೆಂಗಿದ್ದಂಗ ಊರಿಗೆ ತಗೊಂಡ ಹೋದ್ರ ಮನೆಯಲ್ಲಿ ನನ್ನ ಮಡದಿ ಬೈದು ಬಿಡುವಳು. ಅದು ಸ್ವಲ್ಪ ತೊಟ್ಟು ಇಟ್ಟಾಂಗ ಆದರೆ ನಾನು ಸೂಟು ಧರಿಸಿದ್ದೆ ಎಂದು ಖುಷಿಪಡುತ್ತಾಳೆ. ಅದೇ ವಿಚಾರದಿಂದ ಇಸ್ತ್ರಿ ಮಾಡಿಸಿದ್ದ ಸೂಟ ತೊಟಕೊಂಡು ಮಲಗಿದ್ದೆ. ಈಗ ಅದನ್ನು ಹಾಗೆ ಹೀಗೆ ಮಡಿಸಿ ಒಳಗೆ ಇಟ್ಟು ಪ್ಯಾಕ ಮಾಡಿದೆ. ಆಕೆ ಕೇಳಿದರೆ 'ಸೂಟು ಧರಿಸಿದ್ದೆ ಬಹಳ ಚೆನ್ನಾಗಿ ಕಾಣುತ್ತಿತ್ತು ಎಲ್ಲರೂ ನೋಡುತ್ತಿದ್ದರು" ಎಂದು ಹೇಳುವೆ'.

ನನ್ನ ಕಿರಿಯ ಲೆಕ್ಚರನನ್ನು ನೋಡುತ್ತ ಕುಳಿತುಬಿಟ್ಟೆ. 'ಅತ್ತದರಿ–ಇತ್ತಪುಲಿ' ಎಂಬ ಮಾತು ನೆನಪಾಯಿತು. ಅಂದಿನಿಂದ ನಾನು ಸಮ್ಮೇಳನಕ್ಕೆ ಹೋದಾಗ ನನ್ನ ಕಿರಿಯರನೆಲ್ಲ ಜೋರಿನಿಂದ ಸೂಟು ಹಾಕಿಸಿಕೊಂಡು ಅಡ್ಡಾಡಿ ಬರುವ ರೂಢಿ ಮಾಡಿಕೊಂಡಿರುವೆ.

ಶಕ್ತಿಯೇ ಜೀವನದ ಶ್ರೇಷ್ಠ ಮಾರ್ಗದರ್ಶಕ. ಧರ್ಮದಲ್ಲಿ, ಉಳಿದ ವಿಷಯಗಳಲ್ಲಿ ಹೇಗೋ ಹಾಗೆ, ನಿಮ್ಮನ್ನು ದುರ್ಬಲಗೊಳಿಸುವ ಪ್ರತಿಯೊಂದನ್ನೂ ತ್ಯಜಿಸಿ ಬಿಡಿ. ಅದಕ್ಕೂ ನಿಮಗೂ ಏನೇನು ಸಂಬಂಧ ಇರುವುದು ಬೇಡ.

ಶಕ್ತಿಯೇ ಬದುಕು, ದುರ್ಬಲತೆಯೇ ಸಾವು. ಶಕ್ತಿ ಆನಂದದಾಯಕ; ಬದುಕು ಅನಂತ ಹಾಗೂ ಅಮರ.

—ಸ್ವಾಮಿ ವಿವೇಕಾನಂದ

ಸಮಗ್ರ ಗುಣರಕ್ಷಣೆ ಮತ್ತು ವೃತ್ತಿ ಅಭಿವರ್ಧನೆ

ಎಂ. ಕೆ. ಅಚ್ಯುತರಾವ್
ನಂ. ೪೭೧೪, ೨ನೇ ಕ್ರಾಸ್
ಶಿವಾಜಿ ರಸ್ತೆ, ಎನ್. ಆರ್. ಮೊಹಲ್ಲಾ
ಮೈಸೂರು–೭

ತಂತ್ರವಿದನೊಬ್ಬ ತನ್ನ ವೃತ್ತಿಯಲ್ಲಿ ಸದಾ ಅಭಿವರ್ಧಿಸುತ್ತಿರಲೇಬೇಕು ನಿಂತು ನೋಡುವುದೆಂದರೆ ಅಥವಾ ವಿಶ್ರಮಿಸುವುದೆಂದರೆ ಕೊಳೆತು ನಾರುವುದೆಂದೇ ಅರ್ಥ. ವೃತ್ತಿಗೆ ಎರಡು ಮುಖಗಳು : ಜ್ಞಾನ, ನಿರ್ವಹಣೆ. ಅಂದರೆ ತಂತ್ರವಿದ ತನ್ನ ವೃತ್ತಿಗೆ ಸಂಬಂಧಿಸಿದಂತೆ ಸದಾ ವರ್ತಮಾನ ಕಾಲೀನ ಪಟುವಾಗಿದ್ದು ನಿರ್ವಹಣ ಕೌಶಲದಲ್ಲಿ ಪರಿಣತನಾಗಿರಬೇಕು. ಪ್ರಸಕ್ತ ಲೇಖನದ ಕರ್ತೃ ಒಬ್ಬ ತಜ್ಞ ಎಂಜಿನಿಯರ್ ಮತ್ತು ದಕ್ಷ ನಿರ್ವಾಹಕ.

ವೃತ್ತಿ ಜೀವನದಲ್ಲಿ, ವೃತ್ತಿಯ ಬಗ್ಗೆ ತಾಂತ್ರಿಕ ಜ್ಞಾನ ಉತ್ತಮಗೊಳಿಸಿಕೊಳ್ಳುವುದು ಒಂದು ಮುಖ್ಯ ಅಂಶ. ನಮ್ಮ ತಾಂತ್ರಿಕ ಜ್ಞಾನವನ್ನು ಕಾಲಮಿತಿಯಲ್ಲಿ ಪರಿಸರ ಮಿತಿಯಲ್ಲಿ ಇತರ ತಜ್ಞರ ಮತ್ತು ವೃತ್ತಿಪರ ತಂತ್ರವಿದರ ಸಹವಾಸದಲ್ಲಿ, ಸಹ ಉತ್ತಮಗೊಳಿಸಿಕೊಂಡು ಬರುವುದು, ವೃತ್ತಿ ನಿರ್ವಹಣೆಯ ಗುಣಮಟ್ಟ ಸಾಧನೆಗೆ ಅತ್ಯಗತ್ಯ.

ಇದು ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಗುಂಪಿನ ವೃತ್ತಿಪರರಿಂದ ಮಾತ್ರ ಸಾಧ್ಯವಾಗದು. ಉದಾಹರಣೆಗೆ ನಾವು ನಮ್ಮ ವೃತ್ತಿಯಲ್ಲಿ ಮಾತ್ರ ತಾಂತ್ರಿಕ ಜ್ಞಾನ ಪಡೆದಿದ್ದರೆ ಸಾಲದು. ಇತರ ವ್ಯಕ್ತಿಗಳ ಸಂಗಡ, ಅವರ ತಜ್ಞತೆ, ದಕ್ಷತೆಗೆ ಅನುಗುಣವಾಗಿ, ಆಯಾ ವೃತ್ತಿಗಳ ಗುಣಮಟ್ಟ ಉತ್ತಮಗೊಳಿಸಿದರೆ ಮಾತ್ರ ಉನ್ನತಿ ಸಾಧ್ಯ. ಇತರ ವೃತ್ತಿಗಳೂ ಇದೇ ಪರಿಣತಿ, ಗುಣಮಟ್ಟಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುವಂತೆ ಪರಿಸರ ನಿರ್ಮಿಸಿ ಕಾರ್ಯೋನ್ಮುಖರಾದರೆ ಒಟ್ಟಾರೆ ಕಾರ್ಯದ ಗುಣಮಟ್ಟ ಹೆಚ್ಚುತ್ತದೆ. ಒಂದು ಕಾರ್ಯದ ನಿರ್ವಹಣೆಯಲ್ಲಿ ಹಲವಾರು ತಂತ್ರವಿದ್ಯೆಗಳು ಸೇರಿ ಕೆಲಸ ಮಾಡಿದರೆ ಒಟ್ಟಾರೆ ಗುಣಮಟ್ಟ ವೃದ್ಧಿ ಆಗುತ್ತದೆ. ಕಾರ್ಯನಿರ್ವಹಣೆಯಲ್ಲಿ ಬೇರೆ ಬೇರೆ ತಂತ್ರ ವಿದ್ಯೆಯ ತಜ್ಞರು ಸೇರಿ ಕೆಲಸ ಮಾಡುವಾಗ, ಪ್ರತಿಯೊಬ್ಬನೂ ಇತರರೆಲ್ಲರೂ ತನ್ನಷ್ಟೇ ಮುಖ್ಯ ಎಂಬುದನ್ನು ಮನಗಾಣಬೇಕು.

ವೃತ್ತಿ ಪರಿಸರದಲ್ಲಿ ಕರ್ತವ್ಯ ಪ್ರಜ್ಞೆ ಹೆಚ್ಚಿದಷ್ಟೂ ಗುಣಮಟ್ಟ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಇದನ್ನು ಮೂಡಿಸುವುದು

ಕಾರ್ಯನಿರ್ವಾಹಕನ ಜವಾಬ್ದಾರಿ. ಕರ್ತವ್ಯಪ್ರಜ್ಞೆ ಮೂಡಿಸುವುದಕ್ಕೆ ನಿರಂತರ ತರಬೇತಿ,ತಂತ್ರವಿದ್ಯೆಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬೇಕಾದ ಸಂತತ ಶಿಕ್ಷಣ ಇವನ್ನ ನಡೆಸಬೇಕಾದದ್ದು ಕೂಡ ಆತನದೇ ಹೊಣೆ. ಪೂರ್ಣ ಫಲ ದೊರಕಬೇಕಾದರೆ ಪ್ರತಿಯೊಬ್ಬನೂ ತನ್ನ ಕರ್ತವ್ಯ, ಜವಾಬ್ದಾರಿಗಳನ್ನು ಅರಿತು ಶ್ರಮಿಸಬೇಕು.

ಜಪಾನಿನಲ್ಲಿ ಪ್ರತಿಯೊಬ್ಬ ಕೆಲಸಗಾರನೂ "ನನ್ನ ಕೆಲಸವನ್ನು ಇನ್ನೂ ಚೆನ್ನಾಗಿ ಮಾಡುವುದು ಹೇಗೆ?" ಎಂಬ ತತ್ವವನ್ನೇ ತನ್ನ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾನೆ. ಇದು ಗುಣಮಟ್ಟ ಸಾಧಿಸುವುದರ ಬಗ್ಗೆ ಅವರಿಗಿರುವ ಕರ್ತವ್ಯ ಪ್ರಜ್ಞೆಯನ್ನು ತೋರಿಸುತ್ತದೆ.

ಅವರಲ್ಲಿರುವ ಗುಣಮಟ್ಟದ ಪ್ರಜ್ಞೆ ನಮ್ಮಲ್ಲೂ ಮೂಡಬೇಕಾದರೆ,ವ್ಯಕ್ತಿ ವ್ಯಕ್ತಿಗಳ ಸಂಬಂಧ, ವ್ಯಕ್ತಿ ಸಂಸ್ಥೆಗಳ ಸಂಬಂಧ, ವ್ಯಕ್ತಿ ಸಮಾಜಗಳ ನಡುವಣ ಜವಾಬ್ದಾರಿ ಇವು ಬಲು ಮಟ್ಟಗೆ ಉತ್ತಮಗೊಳ್ಳಬೇಕು.

ಅಮೆರಿಕದ ಅಧ್ಯಕ್ಷ ಜಾನ್. ಎಫ್. ಕೆನಡಿ ಅವರು, ಸರ್ಕಾರ ನನಗೆ ಏನು ನೀಡುತ್ತದೆ? ಎಂಬ ಯೋಚನೆಗಿಂತ ನಾನು ಸರ್ಕಾರಕ್ಕೆ ಸಮಾಜಕ್ಕೆ ಏನು ಕೊಡುಗೆ ನೀಡುತ್ತೇನೆ ಎಂದು ಆಲೋಚಿಸಿ," ಎಂದಿದ್ದರು.

ಇದು ನಮ್ಮ ಭಾರತೀಯ ಸಮಾಜಕ್ಕೆ ಇಂದಿನ ಪರಿಸ್ಥಿತಿಯಲ್ಲಿ ಅತ್ಯಗತ್ಯ. ಸಮಾಜದ ಬಗ್ಗೆ ಪ್ರತಿಯೊಬ್ಬ ಪ್ರಜೆಯೂ, ರಾಷ್ಟ್ರಕ್ಕೆ ತನ್ನ ವೃತ್ತಿ ಪರತೆಯ ಮೂಲಕ ವೃತ್ತಿಯಲ್ಲಿ ಗುಣಮಟ್ಟವನ್ನು ಸದಾ ವೃದ್ಧಿಪಡಿಸಿಕೊಳ್ಳುವುದನ್ನೇ ತನ್ನ ಗುರಿಯಾಗಿರಿಸಿಕೊಳ್ಳಬೇಕು.

ವೃತ್ತಿ ತಂತ್ರ ವಿದ್ಯೆಯನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಈಗ ನಮಗಿರುವ ಸೌಲಭ್ಯಗಳು ಹಿಂದೆಂದೂ ಇದ್ದುದಕ್ಕಿಂತ ಹೆಚ್ಚಿಗಿವೆ. ಜಗತ್ತಿನ ಯಾವ ಮೂಲೆಯಲ್ಲಿ ಯಾವ ವಿಷಯದಲ್ಲಿ ಏನು ಮಾಹಿತಿ ಅಡಗಿದೆ ಎಂಬುದನ್ನು ಕ್ಷಣ ಮಾತ್ರದಲ್ಲಿ ಅರಿತುಕೊಳ್ಳುವ ಸದವಕಾಶ ಪ್ರತಿಯೊಬ್ಬ ತಂತ್ರವಿದನಿಗೂ ಇದೆ. ಈ ಅವಕಾಶವನ್ನ ಸಂಸ್ಥೆಯ ಒಳಿತಿಗೆ ಉಪಯೋಗಿಸಿಕೊಂಡರೆ ಎಲ್ಲ ರೀತಿಯಲ್ಲೂ ಗುಣಮಟ್ಟ ಉತ್ತಮಗೊಳಿಸಿಕೊಳ್ಳುವುದು ಸಾಧ್ಯ.

ಕಾರ್ಯ ನಿರ್ವಹಣೆಗೆ ಬೇಕಾದ ಆದಾನ (ಇನ್‌ಪುಟ್) ಪರಿವರ್ತನೆ, ಪ್ರದಾನ (ಔಟ್‌ಪುಟ್) ಈ ಮೂರು ಹಂತಗಳಲ್ಲೂ ಗುಣಮಟ್ಟದ ನಿರ್ವಹಣೆ ಅತ್ಯಂತ ಆವಶ್ಯಕ. ವೃತ್ತಿಪರ ತಂತ್ರವಿದರು ಪರಿವರ್ತನೆ ಕೂಡ ತಾವು ತಯಾರಿಸಬೇಕಾದ ಸಾಮಗ್ರಿಗಳ ತಯಾರಿಕಾ ಕಾರ್ಯವಿಧಿಗಳಷ್ಟೇ ತಮ್ಮ ಪರಿಗಣನೆಯಲ್ಲಿರಬೇಕು ಎಂದೂ, ಆ ಕಾರ್ಯ ವಿಧಿಗಳ ಗುಣಮಟ್ಟ ಸಾಧನೆಯಷ್ಟೇ ತಮಗೆ ಸೀಮಿತವಾದದ್ದು ಎಂದೂ ಭಾವಿಸುವುದು ಸಹಜ.

ಉದಾಹರಣೆಗೆ ಯಾವ ಸಾಮಗ್ರಿಯ ತಯಾರಿಕೆಯಲ್ಲೂ ಬೇಕಾದ ಕಚ್ಚಾ ಸಾಮಗ್ರಿಗಳು ಒಳ್ಳೆಯ ಗುಣಮಟ್ಟದ್ದಾಗಿದ್ದು, ಸಕಾಲದಲ್ಲಿ ಸರಿಯಾದ ಪ್ರಮಾಣದಲ್ಲಿ ದೊರಕಬೇಕಾದ್ದು ಮುಖ್ಯ. ಈ ಕಾರ್ಯಗಳ ನಿರ್ವಹಣೆಯೂ ಮುಖ್ಯ. ಹಾಗೆಯೇ ಕಚ್ಚಾಸಾಮಗ್ರಿಗಳು ತಯಾರಿಕೆಯ ಆಗರದಲ್ಲಿ ಪೂರ್ತಿಗೊಳಿಸಿದ ಉತ್ಪನ್ನ

ವಾಗಿ ಮುಕ್ತಾಯಗೊಂಡಾಗ, ಆ ಉತ್ಪನ್ನಗಳು ಯಾವ ರೀತಿ ಹೊರಹೋಗಬೇಕು, ಹೇಗೆ ಅವುಗಳ ಜೋಡಣೆ, ಪ್ಯಾಕಿಂಗ್, ವಿನ್ಯಾಸ, ಸಾಗಣೆ ಆಗಬೇಕು, ವಿಧಾನಗಳೇನು, ಎಂಬುದನ್ನು ಅರಿತು ಮಾಡಬೇಕು. ಸಂಸ್ಥೆಗೆ ಒಳ್ಳೆ ಹೆಸರು ಬರಲು ಎಲ್ಲ ಕಾರ್ಯಾಂಗಗಳೂ ತಮ್ಮ ಪರಿಮಿತಿಗೇ ಸೀಮಿತವಾಗದೆ, ಇತರ ಕಾರ್ಯಾಂಗಗಳೊಂದಿಗೆ ಸಮರಸದಿಂದ ಕೂಡಿ ದುಡಿಯಬೇಕು. ಗುಣಮಟ್ಟದ ಬಗ್ಗೆ ಎಲ್ಲರೂ ಗಮನವಿಟ್ಟರೆ, ವೃತ್ತಿಪರತೆಗೂ ಒಳ್ಳೆಯ ಗುಣಮಟ್ಟ ದೊರಕುತ್ತದೆ.

ವೃತ್ತಿಪರತೆಯ ಗುಣಮಟ್ಟ ಉತ್ತಮಪಡಿಸಿಕೊಳ್ಳುವುದರಲ್ಲಿ ನಮಗೆ, ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಸದಾ ಮಾರ್ಗದರ್ಶಕವಾಗಿವೆ. ಎಂಭತ್ತು ವರ್ಷಗಳ ಹಿಂದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆ ಹಲವಾರು ಕಾರಣಗಳಿಂದ ಮುಚ್ಚುವ ಸ್ಥಿತಿಗೆ ಬಂದಿತ್ತು. ಇಂಥ ಕಠಿಣ ಸತ್ತ್ವಪರೀಕ್ಷೆಯ ಸಮಯದಲ್ಲಿ ಸರ್. ಎಂ. ವಿ. ಅವರನ್ನು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧ್ಯಕ್ಷರಾಗಿರುವಂತೆ ಕೇಳಿಕೊಂಡಾಗ ಅವಕ್ಕೆ ಅವರು ಒಪ್ಪಿದರು. ಆರು ವರ್ಷಗಳಲ್ಲಿ ೧೯೨೮ರ ವೇಳೆಗೆ, ಸಂಸ್ಥೆ ಲಾಭದಾಯಕವಾಗಿ ನಿರ್ವಹಣೆ ನಡೆಸುವಂತೆ ಮಾರ್ಪಡಿಸಿದ ಹಿರಿಮೆ, ಸರ್. ಎಂ. ವಿ. ಅವರದಾಯಿತು.

ಭದ್ರಾವತಿಯ ಬೀಡು ಕಬ್ಬಿಣವನ್ನು ಅಮೆರಿಕದ ಸಮುದ್ರ ತೀರಕ್ಕೆ ರಫ್ತು ಮಾಡಿದ್ದೇ ಅಲ್ಲದೆ, ಅದನ್ನು ಅಮೆರಿಕದಲ್ಲಿ ತಯಾರಾದ ಬೀಡು ಕಬ್ಬಿಣಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರುವುದಕ್ಕೆ ಏರ್ಪಾಡು ಮಾಡಿದರು ಕೂಡ. ಕೊನೆಗೆ, ನಿಗದಿತ ಮಿತಿಗಿಂತ ಹೆಚ್ಚು ರಫ್ತು ಮಾಡಿದರೆ ಇಲ್ಲಿಂದ ರಫ್ತು ಮಾಡಿದ ಕಬ್ಬಿಣದ ಮೇಲೆ ಆಯಾತ ಸುಂಕವನ್ನು ಹಾಕುವುದಾಗಿ ಅಮೆರಿಕ ಸರ್ಕಾರ ಬೆದರಿಕೆ ಹಾಕಿತು.

ಕಾರ್ಯ ತತ್ಪರತೆಯ ಗುಣಮಟ್ಟ, ತಯಾರಾದ ಮಾಲುಗಳ ಗುಣಮಟ್ಟ, ಸಾವಿರಾರು ಮೈಲುಗಳಾಚೆ, ಸಮುದ್ರದ ಮೂಲಕ ಸರಬರಾಜು ಮಾಡಿದರೂ ಅವುಗಳ ಬೆಲೆಯು ಅಲ್ಲೇ, ತಯಾರಾದ ಮಾಲುಗಳ ಬೆಲೆಗಿಂತ ಕಡಿಮೆ ಬೆಲೆಗೆ ತಯಾರಾಗುವಂತೆ ತಯಾರಿಕೆಯ ತಂತ್ರವಿದ್ಯೆಗಳ ಪರಿಷ್ಕರಣೆ, ವ್ಯಕ್ತಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ನಿಸ್ಪೃಹತೆ ತೋರಿಸುವಂತೆ ನಿರ್ವಹಿಸುವ ಕಾರ್ಯದಕ್ಷತೆ, ಇವೆಲ್ಲದರಲ್ಲೂ ಸರ್. ಎಂ. ವಿ. ಅವರು ಮಾರ್ಗದರ್ಶಕರಾಗಿದ್ದುದು ನಮ್ಮ ನಾಡಿನ ಸೌಭಾಗ್ಯವೇ ಸರಿ. ವ್ಯಕ್ತಿ ಅಭಿವರ್ಧನೆಯಿಂದ ವೃತ್ತಿ ಅಭಿವರ್ಧನೆ, ವೃತ್ತಿ ಅಭಿವರ್ಧನೆಯಿಂದ ಗುಣಮಟ್ಟ ಅಭಿವರ್ಧನೆ, ಗುಣಮಟ್ಟ ಅಭಿವರ್ಧನೆಯಿಂದ ದೇಶಕ್ಕೆ ಹಿರಿಮೆ, ದೇಶಕ್ಕೆ ಹಿರಿಮೆಯಿಂದ ವ್ಯಕ್ತಿಗೆ ಸೌಖ್ಯ.

ಸತತ ಪ್ರಯತ್ನ ಮತ್ತು ದೃಢ ಸಂಕಲ್ಪವಿದ್ದರೆ ಮಾತ್ರ ಜಯಗಳಿಸಬಹುದು

ಪವಿತ್ರವಾದ ಮತ್ತು ಬಲಯುತವಾದ ಸಂಕಲ್ಪ ಸರ್ವಶಕ್ತವಾದುದು

—ಸ್ವಾಮಿ ವಿವೇಕಾನಂದ

ಡ್ರಾಪ್ಸಿಯಿಂದ ದಂಗಾದ ದೆಹಲಿ ಜನ

ಡಾ|| ಕರವೀರಪ್ರಭು ಕ್ಯಾಲಕೊಂಡ
ಆರೋಗ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ–೫೮೭ ೨೦೧
ಬಾಗಲಕೋಟೆ

ಇತ್ತೀಚೆಗೆ ದೆಹಲಿಯಲ್ಲಿ ಅತಿಸಾರ ಪ್ರಕರಣಗಳು ಕಾಣಿಸಿಕೊಂಡವು. ಚಿಕಿತ್ಸೆ ನೀಡಿದಾಗ ವ್ಯತಿರಿಕ್ತವಾಗಿ ವರ್ತಿಸಿದವು. ಅತಿಸಾರ ನಿಯಂತ್ರಣಗೊಂಡರೂ, ನ್ಯೂನಪೋಷಣೆಗೊಳಗಾದವರಂತೆ ಕೈಕಾಲು ಬಾತವು. ಮುಖ ದದ್ದರಿಸಿತು. ಹೊಟ್ಟೆಯಲ್ಲಿ ನೀರು ತುಂಬಿಕೊಂಡಿತು. ಚರ್ಮದಡಿಯಲ್ಲಿ ರಕ್ತಸ್ರಾವ ಕಾಣಿಸಿತು.ರಕ್ತ ಮಂಜುಗಟ್ಟಿದಂತಹ ಗಡ್ಡೆಗಳು ಗೋಚರಿಸಿದವು. ಉಬ್ಬಸ ಬರುವುದು, ಉಸಿರಾಟದ ತೀವ್ರತೆ ಉಂಟಾಗುವುದು, ಹೃದಯದ ಸೋಲು ಹಣಕಿ ಹಾಕುವುದು ವೈದ್ಯರನ್ನು ಚಿಂತೆಗೀಡು ಮಾಡಿತು. ಅವರು ಸಹೋದ್ಯೋಗಿಗಳೊಂದಿಗೆ ಚರ್ಚಿಸಿದರು. ಇಂಥ ಪ್ರಕರಣಗಳು ದಿನ ಕಳೆದಂತೆ ದೆಹಲಿಯ ತುಂಬೆಲ್ಲಾ ಹೆಚ್ಚಾದವು. ಇದರ ಬಗ್ಗೆ ವಿಚಾರ ಸಂಕಿರ್ಣಗಳು ಏರ್ಪಟ್ಟವು. ಮುಕ್ತ ಮನಸ್ಸಿನಿಂದ ವೈದ್ಯರು ಚರ್ಚಿಸಿದರು.

ಹಲವು ವೈದ್ಯರು ಈ ವಿಚಿತ್ರ ಲಕ್ಷಣಗಳ ರೋಗಿಗಳನ್ನು ಹೆಚ್ಚಿನ ತಪಾಸಣೆಗಾಗಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೂ ಕಳಿಸಿದ್ದರು. ಅಲ್ಲಿಯ ತಪಾಸಣಾ ವರದಿಗಳು ಅರ್ಜಿಮೋನಾ ಕಲಬೆರಕೆಯತ್ತ ವಾಲಿದವು. ಆ ರೋಗಗಳು ಬಳಸಿದ ಖಾದ್ಯ ತೈಲವನ್ನು ಸಂಗ್ರಹಿಸಿ ವಿಶ್ಲೇಷಿಸಿದಾಗ ಸಾಸುವೆ ಎಣ್ಣೆಯಲ್ಲಿ ಅರ್ಜಿಮೋನಾ ಕಲೆತಿರುವುದು ಖಚಿತವಾಯಿತು. ಈ ಕಲಬೆರಕೆಯೆ ಈ ರೋಗಕ್ಕೆ ಕಾರಣ ಎಂಬುದು ಸ್ಪಷ್ಟವಾಯಿತು. ಈ ರೋಗವೇ 'ಡ್ರಾಪ್ಸಿ'. ಇದು ದೆಹಲಿ ಜನರಲ್ಲಿ ದುಗುಡ, ದುಮ್ಮಾನಗಳನ್ನು ಹೆಚ್ಚಿಸಿತು. ದಂಗಾದ ಜನರ ಧ್ವನಿ ಸರಕಾರದ ಕಿವಿಯ ತಮ್ಮಟೆ ತಟ್ಟುವ ವೇಳೆಗೆ ಸಾವಿರಾರು ಜನರು ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿದ್ದರು. ೫೨ ಜನರು ಪ್ರಾಣ ಕಳೆದುಕೊಂಡಿದ್ದರು. ಈ ವಿಷಯಗಳು ಸುದ್ದಿ ಮಾಧ್ಯಮಗಳಲ್ಲಿ ಬಿತ್ತರಗೊಂಡಾಗ ಜನರಲ್ಲಿ ಭಯ ಭೀತಿ ಹೆಚ್ಚಾಯಿತು. ಕಲಬೆರಕೆಯಿಂದಾಗುವ ಅನಾಹುತಕ್ಕೆ ಇದೊಂದು ಜ್ವಲಂತ ನಿದರ್ಶನವಾಗಿದೆ.

ಇತಿಹಾಸ

ಎರಡೂವರೆ ಸಾವಿರ ವರ್ಷಗಳ ಹಿಂದೆ ಗೌತಮ ಬುದ್ಧನ ಕಾಲಕ್ಕೂ ಸಹ ಸಾಸಿವೆ ಹೆಸರುವಾಸಿಯಾಗಿತ್ತು. ಪ್ರಾಣ ಕಳೆದುಕೊಂಡಿದ್ದ ತನ್ನ ಮಗನನ್ನು ಮತ್ತೆ ಬದುಕಿಸಿಕೊಡುವಂತೆ ಗೋಗರಾಲು ಬಿದ್ದ ಮಹಿಳೆಗೆ,

"ಆಗಲಿ, ಸತ್ತ ಈ ಮಗು ಪುನಃ ಜೀವ ತಳೆಯುವಂತೆ ಮಾಡುವೆ. ಅದಕ್ಕೆ ಸಾವಿಲ್ಲದವರ ಮನೆಯಿಂದ ಸಾಸಿವೆ ತಂದು ಕೊಡು" ಎಂದು ಬುದ್ಧ ಹೇಳಿದಾಗ ಆ ದುಃಖತಪ್ತ ಮಹಿಳೆ ಹರ್ಷಚಿತ್ತಳಾಗಿ ಸಾವಿಲ್ಲದವರ ಮನೆಯಿಂದ ಸಾಸಿವೆ ಪಡೆಯಲು ಊರೆಲ್ಲ ಅಲೆದರೂ ಅಂಥ ಒಂದು ಮನೆಯೂ ಸಿಕ್ಕದೇ ಬರಿಗೈಯ್ಯಲ್ಲಿ ಮರಳುತ್ತಾಳೆ. ಹೀಗಾಗಿ ಆ ಮಗು ಬದುಕುವ ಭಾಗ್ಯ ಪಡೆಯೋದಿಲ್ಲ. ಕೊನೆಗೆ ಆ ಮಹಿಳೆ ಮರಣದ ಅನಿವಾರ್ಯತೆ ಮನಗಂಡು ಸುಮ್ಮನಾಗುತ್ತಾಳೆ. ಸಾಸಿವೆ ಎಂಬುದು ಸಾವೆಂಬುದರ ಕೂಡ ಕನಿಷ್ಠ ಪಕ್ಷ ಎರಡೂವರೆ ಸಾವಿರ ವರ್ಷಗಳಿಂದ ಸಂಬಂಧ ಹೊಂದಿದೆ ಎಂಬುದನ್ನು ಇದು ದಾಖಲಿಸುತ್ತದೆ.

ಡ್ರಾಪ್ಸಿ ನಮ್ಮ ದೇಶಕ್ಕೆ ಹೊಸದೇನೂ ಅಲ್ಲ. ೧೯೦೫–೧೯೩೧ರ ಅವಧಿಯಲ್ಲಿ ಪ್ರತಿವರ್ಷ ಡ್ರಾಪ್ಸಿ ಸಾಂಕ್ರಾಮಿಕ ರೂಪದಲ್ಲಿ ದರ್ಶನ ನೀಡಿದೆ. ೧೯೩೫ರ ಸಾಂಕ್ರಾಮಿಕದಲ್ಲಿ ಸುಮಾರು ೭೦೦೦ ರೋಗಿಗಳು ಕಾಲುಬಾವು ಹೊಂದಿದ್ದರು. ೭೦೦ ರೋಗಿಗಳಲ್ಲಿ ಮೋತಿಬಿಂದು (ಗ್ಲಾಕೋಮ) ಕಾಣಿಸಿಕೊಂಡಿತ್ತು. ಸುಮಾರು ೧೫೦೦ ಜನರನ್ನು ಬಲಿ ತೆಗೆದುಕೊಂಡಿತ್ತು. ೧೯೬೪–೬೬ ರಲ್ಲಿ ಬಿಹಾರದಲ್ಲಿ ಡ್ರಾಪ್ಸಿ ಡೊಂಬರಾಟವಾಡಿತ್ತು. ೧೯೬೯ರಲ್ಲಿ ಪೂನಾದಲ್ಲಿ ಮೊದಲ ಬಾರಿಗೆ ಹಣಕಿ ಹಾಕಿತ್ತು.

೧೯೩೭ರ ಡ್ರಾಪ್ಸಿ ಸಾಂಕ್ರಾಮಿಕಕ್ಕೆ ಅರ್ಜಿಮೋನಾ ಕಲಬೆರಕೆಯುಕ್ತ ಸಾಸುವೆ ಎಣ್ಣೆ ಕಾರಣ ಎಂದು ಸರ್ಕಾರ್ ಎಂಬ ವಿಜ್ಞಾನಿ ಆರೋಪಿಸಿದ್ದರು. ೧೯೩೭ರಲ್ಲಿ ಲಾಲ್‌ರಾಯ್ ಮತ್ತು ಚೋಪ್ರಾ ಸಂಗಡಿಗರು ಆಳವಾದ ಅಧ್ಯಯನ ನಡೆಸಿ ಡ್ರಾಪ್ಸಿಗೆ ಕಲಬೆರಕೆಯುಕ್ತ ಖಾದ್ಯತೈಲ ಸೇವನೆಯೇ ಕಾರಣ ಎಂಬುದನ್ನು ಪುರಾವೆ ಸಹಿತ ಸ್ಪಷ್ಟಪಡಿಸಿದರು. ೧೯೪೧ರಲ್ಲಿ ಮುಖರ್ಜಿ ವಿಷಕ್ಷಾರ ದ್ರವ್ಯ (ಆಲ್ಕಲಾಯ್ಡ್) (ಸಾಗ್ವಿನಾರಿನ್) ಅನ್ನು ಅರ್ಜಿಮೋನಾ ಎಣ್ಣೆಯಿಂದ ಬೇರ್ಪಡಿಸಿದರು. ಇದು ದೇಹದಲ್ಲಿಯ ಪೈರುವಿಕೆ ಆಮ್ಲದ ಆಮ್ಲಜನೀಕರಣಕ್ಕೆ (ಆಕ್ಸಿಡೇಷನ್) ಅಡ್ಡಿಯನ್ನೊಡುವುದರ ಪ್ರಯುಕ್ತ ರಕ್ತದಲ್ಲಿ ಪೈರುವಿಕೆ ಆಮ್ಲ ಹೇರಳವಾಗಿ ಸಂಗ್ರಹವಾಗುವುದು.

ಭಾರತದಲ್ಲಿ ಜನರ ಜೀವದೊಡನೆ ಡ್ರಾಪ್ಸಿ ಚೆಲ್ಲಾಟವಾಡುತ್ತಲೇ ಬಂದಿದೆ. ಸಾಕಷ್ಟು ಜನರ ಬಲಿ ತೆಗೆದುಕೊಂಡ ಹೆಗ್ಗಳಿಕೆ ಅದಕ್ಕಿದೆ. ಸರಕಾರ ಕಲಬೆರಕೆಗೆ ಕಡಿವಾಣ ಹಾಕುವಲ್ಲಿ ಉದಾಸೀನತೆ ತೋರಿಸಿದ್ದೆ; ಈ ರೋಗದ ಉಲ್ಬಣಕ್ಕೆ ಕಾರಣವಾಗಿದೆ. ಸರಕಾರದ ದೃಷ್ಟಿಯಲ್ಲಿ ಜನಸಾಮಾನ್ಯರ ಜೀವಕ್ಕೆ ಬೆಲೆಯಿಲ್ಲದಾಗಿದೆ.

ಡ್ರಾಪ್ಸಿ ಎಂದರೇನು ?

ಇದೊಂದು ಮರಣಾಂತಿಕ ಕಾಯಿಲೆ. ಗೊಳಗೊಳಕೆ (ಅರ್ಜಿಮೋನಾ ಮೆಕ್ಸಿಕೋನಾ) ಗಿಡದ ಬೀಜ ನೋಡಲು ಸಾಸಿವೆಯಂತೆ ಕಾಣುತ್ತದೆ. ಹೀಗಾಗಿ ಇದು ಸಾಸಿವೆಯೊಂದಿಗೆ ಬೆರೆತು ಕಲಬೆರಕೆಯಾಗುವುದು. ಇದು ಉದ್ದೇಶಪೂರ್ವಕವಾಗಿರಬಹುದು. ಲಾಭ ಗಳಿಕೆಯ ಬೆನ್ನುಹತ್ತಿ, ಇಲ್ಲವೆ ಅಚಾತುರ್ಯದಿಂದಲೂ ಆಗಬಹುದು. ಏಕೆಂದರೆ ಗೊಳಕೆ ಸಾಸಿವೆ ಬಿತ್ತಿದ ಹೊಲದಲ್ಲಿ ಕಳೆಯಾಗಿ ಹುಲುಸಾಗಿ ಬೆಳೆಯು

ವುದು. ಇದನ್ನು ಬೇರ್ಪಡಿಸದೇ ಒಕ್ಕಲು ಮಾಡಿದಾಗ ಕಲಬೆರಕೆಯಾಗಬಹುದು. ಗೊಳಗೊಳಕೆ ಬೀಜದಲ್ಲಿಯ ಸಾಗ್ವಿನಾರಿನ್ ಎಂಬ ವಿಷ ಪದಾರ್ಥವೇ ಡ್ರಾಪ್ಸಿ ರೋಗಕ್ಕೆ ಕಾರಣ. ಈ ವಸ್ತುವಿನೊಂದಿಗೆ ಕಲಬೆರಕೆ ಯಾದ ಎಣ್ಣೆಯನ್ನು ಸೇವಿಸಿದರೆ ದೇಹ ದಲ್ಲಿಯ ರಕ್ತನಾಳಗಳು ಹಿಗ್ಗುತ್ತವೆ. ಚರ್ಮದಡಿಯಲ್ಲಿ ಅಲ್ಲಲ್ಲಿ ರಕ್ತಸ್ರಾವ ಉಂಟಾಗುತ್ತದೆ. ಅಥವಾ ರಕ್ತ ಮಜ್ಜುಗಟ್ಟಿ ದಂತೆ ಆಗಬಹುದು. ಕೈಕಾಲು ಬಾವು ಬರಬಹುದು, ಮುಖ ಊದಿಕೊಳ್ಳಬಹುದು. ಹೊಟ್ಟೆಯಲ್ಲಿ ನೀರು ಸಂಗ್ರಹಗೊಂಡು ನೋಡಲು 'ಜಲೋಧರ' ರೋಗಿಯಂತೆ ಕಾಣಬಹುದು. ಸದ್ದಿಲ್ಲದಂತೆ ಆಶಕ್ತಿ ಲಗ್ಗೆ ಹಾಕುವುದು. ಆಲಸ್ಯತನ ಅಪ್ಪಿಕೊಳ್ಳು ವುದು. ನಿರಾಸಕ್ತಿ ನರ್ತನಗೈಯುವುದು. ವಾಕರಿಕೆ, ವಾಂತಿ ಉಂಟಾಗಬಹುದು. ಹಸಿವು ಹಿಂಗುವುದು, ಭೇದಿ ಬೆಂಬಿಡದ ಭೂತದಂತೆ ಕಾಡುವುದು, ಉಬ್ಬಸ ಉಂಟಾಗುವುದಲ್ಲದೆ, ದಿನಗಳೆದಂತೆ ಹೃದಯ ಸೋತು ಸಾವು ಸಂಭವಿಸಬಹುದು. ಮನುಷ್ಯನಾಗಿ ಇರಬೇಕಾದ ಶುದ್ಧ ಮನುಷ್ಯತ್ವವೇ ಕಲಬೆರಕೆಯಾಗಿ ಎಣಿಕೆ ಮೀರಿ ಹದ ತಪ್ಪಿದ ಮೇಲೆ ಕೊರಳಿಗೆ ಕಾಣಿಕೆಯೇ ಗತಿ ಅಲ್ಲವೆ.

ಗೋಮಾಳ, ಖಾಲಿಬಿದ್ದ ಪ್ಲಾಟು, ಹಿತ್ತಲು, ತಿಪ್ಪೆ ರಸ್ತೆಬದಿ, ಹೊಲಗಳ ಬದು, ಒಡ್ಡು, ಕೆರೆಕಟ್ಟುಗಳ ದಂಡೆಯಲ್ಲಿ ಬೆಳೆಯುವ ೩–೪ ಅಡಿ ಎತ್ತರದ, ಸಾಲ್ಕೈದು ಕವಲುಗಳ ಗಿಡವೇ ಗೊಳ ಗೊಳಕೆ. ಹಚ್ಚ ಹಸುರಿನ ಎಲೆಗಳ ಮಧ್ಯ ಬೂದು ಬಣ್ಣದ ಗೆರೆಗಳಿರುತ್ತವೆ. ಪಟ್ಟ ಹಳದಿ ಬಣ್ಣದ ಆಕರ್ಷಕ ಹೂಗಳನ್ನು ಬಿಡುತ್ತವೆ. ಗಿಡದಲ್ಲಿ ಉದ್ದನೆಯಕಾಯಿ (ಎಳ್ಳು ಕಾಯಿಯ ಹಾಗೆ)ಗಳನ್ನು ಕಾಣ ಬಹುದು. ಎಲೆಗಳನ್ನು ಚಿವುಟಿದಾಗ, ಟಿಸಳನ್ನು ಮುರಿದಾಗ ಹಸಿರುಮಿಶ್ರಿತ ಹಳದಿ ಬಣ್ಣದ ರಸ ಬರುತ್ತದೆ. ಕಾಂಡ, ಎಲೆ, ಕಾಯಿ, ಎಲ್ಲ ಮುಳ್ಳುಮಯವಾಗಿರುತ್ತದೆ. ಹೀಗಾಗಿ ಇಂಗ್ಲೀಷ್‌ದಲ್ಲಿ 'ಅರ್ಜಿಮೋನಾ ಮೆಕ್ಸಿಕಾನಾ' ಎಂದು ಕರೆಯುವರು.

ಕಲಬೆರಕೆ ಪತ್ತೆ ವಿಧಾನ

ಖಾದ್ಯತೈಲದಲ್ಲಿ ಬೆರೆಸಲಾಗಿರುವ ಅರ್ಜಿಮೋನಾ ಎಣ್ಣೆಯನ್ನು ಪತ್ತೆಹಚ್ಚಲು ಸರಳ ಪರೀಕ್ಷೆಯೊಂದರಿಂದ ಸಾಧ್ಯ. ಎಣ್ಣೆಗೆ ಸ್ವಲ್ಪ ನೈಟ್ರಿಕ್ ಆಮ್ಲವನ್ನು ಬೆರೆಸಿದಾಗ ಎಣ್ಣೆಯ ಬಣ್ಣ ಕಿತ್ತಳೆ ಅಥವಾ ಕಂದು ಬಣ್ಣಕ್ಕೆ ತಿರುಗಿದಲ್ಲಿ ಆ ಎಣ್ಣೆಯಲ್ಲಿ ಅರ್ಜಿಮೋನಾ ಬೆರೆತಿದೆ ಎಂದೇ ಅರ್ಥ. ಎಣ್ಣೆಯಲ್ಲಿ ಬೆರೆತ ಶೇ. ೦.೨೫ ಪ್ರಮಾಣದ ಕಲಬೆರಕೆಯನ್ನು ಪತ್ತೆಹಚ್ಚಲು ಈ ಪರೀಕ್ಷೆ ಯಿಂದ ಸಾಧ್ಯ. ಇತ್ತೀಚೆಗೆ ಕಲಬೆರಕೆ ಪತ್ತೆ ಹಚ್ಚುವ ರಾಸಾಯನಿಕ ಲೇಪಿತ ಪಟ್ಟಿಗಳು ಲಭ್ಯ ಇವೆ. ಇವುಗಳ ಸಹಾಯದಿಂದ ತ್ವರಿತ ಗತಿಯಲ್ಲಿ ಖಾದ್ಯತೈಲದಲ್ಲಿಯ ಶೇ. ೦.೦೦೦೧ ಪ್ರಮಾಣದ ಕಲಬೆರಕೆಯನ್ನು ಪತ್ತೆಹಚ್ಚ ಬಹುದು.

ನಿವಾರಣೆ

ಅಂಗೈಯಲ್ಲಿಯ ಹುಣ್ಣಿಗೆ ಕನ್ನಡಿ ಏಕೆ? ಖಾದ್ಯತೈಲದ ಕಲಬೆರಕೆಯಾಗದಂತೆ ಕಟ್ಟೆಚ್ಚರ ವಹಿಸಿದರೆ ಈ ರೋಗ ಜನರ ಸಮೀಪ ಸುಳಿಯುವುದಿಲ್ಲ. ನೀವು ಬಳಸುವ ಖಾದ್ಯತೈಲ ಕಲಬೆರಕೆಯಿಂದ ಮುಕ್ತ

ವಾಗಿದೆಯೇ? ಇದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಖಾದ್ಯ ತೈಲವನ್ನು ನಂಬಿಕೆಗೆ ಅರ್ಹವಾದ ಅಂಗಡಿಯಿಂದಲೇ ಕೊಂಡುಕೊಳ್ಳಬೇಕು. ಯಾವುದಾದರೂ ಉತ್ತಮ ಕಂಪನಿಯ ಖಾದ್ಯ ತೈಲವನ್ನೇ ಖರೀದಿಸಬೇಕು. ಇಲ್ಲದಿದ್ದಲ್ಲಿ ಖಾದ್ಯ ತೈಲವೇ ವಧ್ಯತೈಲವಾಗುವುದು.

ಕಲಬೆರಕೆ ತೈಲದಿಂದಾಗುವ ಅಪಾಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.

ಕಲಬೆರಕೆ ಎಣ್ಣೆ ಮಾರಾಟ ಮಾಡುವ ವ್ಯಾಪಾರಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಈ ಕಾನೂನು ಕಟ್ಟುನಿಟ್ಟಾಗಿ ನಾಡಿನುದ್ದಗಲಕ್ಕೂ ವ್ಯಾಪಕವಾಗಿ ಅನುಷ್ಠಾನಗೊಳ್ಳಬೇಕು.

ಸಾಸಿವೆ ಹೊಲದಲ್ಲಿ ಬೆಳೆಯುವ ಗೊಳಗೊಳಕೆ ಕಳೆಯನ್ನು ಸಣ್ಣದಿದ್ದಾಗಲೇ ಕಿತ್ತೆಸೆಯಬೇಕು. ಇದರಿಂದ ಆಕಸ್ಮಿಕ ಕಲಬೆರಕೆಯನ್ನು ತಪ್ಪಿಸಬಹುದು; ಇದರಿಂದ ಅಮಾಯಕರು ಡ್ರಾಪ್ಸಿಗೆ ಬಲಿಯಾಗುವುದನ್ನು ತಡೆಯಬಹುದು!



ನಂಬಿಕೆ; ತನ್ನ ಶಕ್ತಿಯಲ್ಲಿ ನಂಬಿಕೆ, ದೇವರಲ್ಲಿ ನಂಬಿಕೆ-ಇದೇ ಮಹಿಮೆ ರಹಸ್ಯ

ನಿಮ್ಮ ನರಗಳನ್ನು ಬಲಿಷ್ಠವನ್ನಾಗಿ ಮಾಡಿಕೊಳ್ಳಿ. ನಿಮಗೆ ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು; ಮತ್ತು ಉಕ್ಕಿನಂತಹ ನರಗಳು.

ಮೊದಲು ಅನ್ನ; ಅನಂತರ ಧರ್ಮ

—ಸ್ವಾಮಿ ವಿವೇಕಾನಂದ

ಹಾಲು ಕುಡಿದ ಗಣಪ

ಸುಮತಿ ಪಾಂಗಾಳ
೩೦೩–ಮಾನಸ ಅಪಾರ್ಟ್‌ಮೆಂಟ್
ಲೋಬೋ ಲೇನ್, ಬೆಂದೂರು
ಮಂಗಳೂರು–೨

ಊರಲ್ಲೆಲ್ಲ ಗಣೇಶನವಿಗ್ರಹಗಳು ಹಾಲು ಕುಡಿಯುವುವಂತೆ ಎಂದು ಮಧ್ಯಾಹ್ನ ಊಟಕ್ಕೆಂದು ಬಂದ ರಾಮು ಸೋಜಿಗದ ಸುದ್ದಿಯೊಂದನ್ನಿತ್ತ. ಮಾತಿನ ತಲೆಬುಡ ಅರ್ಥವಾಗದ ನಾನು "ಅದೇನೋ ಇಷ್ಟರ ವರೆಗೂ ಇಲ್ಲದ ವಾರ್ತೆ; ಫಕ್ಕನೆ ಗಣೇಶನಿಗೆ ಬಾಯಾರಿಕೆ ಪ್ರಾರಂಭವಾಯಿತೆ ?" ಎಂದೆ.

"ಅಲ್ಲಪ್ಪ ಬೇಕಾದರೆ ನೀನೇ ಬಂದು ನೋಡು" ನಮ್ಮ ತರಗತಿಯ ರಾಜುವಿನ ಮನೆಯಲ್ಲಿಯೂ ಗಣೇಶ ಹಾಲು ಕುಡಿಯುವುದನ್ನು ನಾನೇ ನೋಡಿದೆ. ಎಷ್ಟೊಂದು ಜನರು ನೋಡಲು ಬರುತ್ತಾರೆ ಗೊತ್ತಾ ?"

"ಸಾಯಂಕಾಲ ನಿನ್ನೊಂದಿಗೆ ನಾನೂ ಅಮ್ಮನೂ ಬರುತ್ತೇವೆ" ಎಂದಾಗ ರಾಮು ವಿಗಾದ ಸಂತೋಷ ಅಷ್ಟಿಷ್ಟಲ್ಲ. ಹೇಳಿದಂತೆ ಸಾಯಂಕಾಲ ಕಛೇರಿಯಿಂದ ಬಂದವನೇ ಹೆಂಡತಿ ಸುಶೀ ಮತ್ತು ಮಗನೊಂದಿಗೆ ಗಣೇಶನ ಕ್ಷೀರಪಾನ ನೋಡ ಹೊರಟೆ.

ಆ ಮನೆ ಭವ್ಯವಾಗಿತ್ತು. ಸುಂದರವಾದ ಹೂದೋಟ. ಮನೆಯ ಮುಂದೆ 'ಸೀಲೊ' ಕಾರು ಪಳಪಳನೆ ಹೊಳೆಯುತ್ತಿತ್ತು. ಮಧ್ಯವಯಸ್ಸಿನ ರಾಜುವಿನ ತಾಯಿ ಉದ್ದವಾದ "ಹೌಸ್ ಕೋಟು" ಧರಿಸಿ ಮಕ್ಕಳೊಂದಿಗೆ ಇಂಗ್ಲಿಷಿನಲ್ಲಿಯೇ ಮಾತನಾಡುತ್ತಿದ್ದುದು ಕಂಡುಬಂತು. ಹಣೆಯಲ್ಲಿ ಕುಂಕುಮವಾಗಲಿ ಕತ್ತಿನಲ್ಲಿ ಮಾಂಗಲ್ಯವಾಗಲಿ ಇದ್ದಂತಿರಲಿಲ್ಲ. ನನಗಂತೂ ಆಕೆ ಹಿಂದೂ ಮಹಿಳೆ ಹೌದೋ ಅಲ್ಲವೋ ಎಂಬ ಸಂಶಯ ಬರಲು ಪ್ರಾರಂಭವಾಯಿತು. 'ನೀರು ಮಜ್ಜಿಗೆ ಕುಡಿಯಲು ಬಂದವನಿಗೆ ಎಮ್ಮೆಯ ಕ್ರಯ ಕೇಳುವ ಅಧಿಕ ಪ್ರಸಂಗತನ" ಏಕೆಂದು ಸುಮ್ಮನಾದೆ.

ಗಣೇಶನ ಎದುರಿನಲ್ಲಿ ಒಂದು ಹಿತ್ತಾಳೆಯ ಹರಿವಾಣದಲ್ಲಿ ಹಾಲನ್ನು ಸುಮಾರು ಅರ್ಧ ಇಂಚಿನವರೆಗೆ ಇರಿಸಲಾಗಿತ್ತು. ಗಣೇಶನ ಸೊಂಡಿಲು ಹಾಲಿಗೆ ಸ್ವಲ್ಪವೇ ತಗಲಿರುವಂತೆ ಇರಿಸಲಾಗಿತ್ತು. ಸುಮಾರು ಒಂದು ನಿಮಿಷದ ನಂತರ ಗಣೇಶನನ್ನು ಇನ್ನೊಂದು ಖಾಲಿ ಹರಿವಾಣದಲ್ಲಿ ಇರಿಸಲಾಯಿತು. ನೋಡುವುದೇನು? ಮಗ ರಾಮು ಹೇಳಿದಂತೆ ಹರಿವಾಣದಲ್ಲಿ ಹಾಲು ಹರಿಯಲು ಪ್ರಾರಂಭವಾಯಿತು. ಹೀರಲ್ಪಟ್ಟಿದ್ದ ಹಾಲು

ಹೊರ ಬರಲು ಪ್ರಾರಂಭ. ನೆರೆದಿದ್ದವರು ಕೌತುಕದಿಂದ ಒಬ್ಬರ ಮುಖ ಇನ್ನೊಬ್ಬರು ನೋಡಿಕೊಂಡರು.

"ಮೇಡಂ ನಾನೊಮ್ಮೆ ಅದನ್ನು ಮುಟ್ಟಿ ನೋಡಬಹುದೇ"? ಎಂದಾಗ ಆಕೆ ಕೊಡಲು ಉತ್ಸಾಹ ತೋರಲಿಲ್ಲ" ಇದನ್ನು ಗಮನಿಸಿದ ನಾನು,

"ನಾನೂ ಬ್ರಾಹ್ಮಣನೇ. ನಿತ್ಯ ಗಾಯತ್ರಿ ಜಪ ಮಾಡದೆ ಕಾಫಿಯನ್ನು ಕುಡಿಯುವುದಿಲ್ಲ" ಎಂದು ಆಶ್ವಾಸನೆಯಿತ್ತಾಗ ಮನಸ್ಸಿಲ್ಲದ ಮನಸ್ಸಿನಿಂದ ಗಣೇಶನ ವಿಗ್ರಹವನ್ನು ಅಲ್ಲೇ ಇದ್ದ ವಸ್ತ್ರದಲ್ಲಿ ಒರೆಸಿ ಕೊಟ್ಟಳು. ಕೈಯ್ಯಲ್ಲಿ ಹಿಡಿದಾಗ ವಿಗ್ರಹ ಅದರ ಅಳತೆಗೆ ಮಿಗಿಲಾಗಿ ಭಾರವಾಗಿತ್ತು. ಸಂಪೂರ್ಣ ಚಿನ್ನದ ಕುಸುರಿ ಕೆಲಸದಿಂದ ಹೊಳೆಯುವ ಗಣಪತಿ.ಸೊಂಡಿಲಿನಬುಡದಲ್ಲಿಯೂ,ಕಣ್ಣುಗಳ ಒಳಗಡೆಗಳಲ್ಲೂ ತೀರಾ ಅಪರೂಪವಾದ ನೀಲಿಕಿರಣಗಳನ್ನು ಬೀರುವ ವಜ್ರಗಳನ್ನು ಪೋಣಿಸಲಾಗಿತ್ತು. ಕುತೂಹಲವನ್ನೂ ಆಶ್ಚರ್ಯವನ್ನೂ ಹತ್ತಿಕ್ಕಲಾರದೆ ನಾನು ರಾಜುವಿನ ಅಮ್ಮನನ್ನು ಕೇಳಿದೆ.

"ಮೇಡಂ ಈ ಮೂರ್ತಿಯನ್ನು ನೀವು ಎಲ್ಲಿಂದ ಕೊಂಡಿರಿ? ನಿಮ್ಮವರ ಹತ್ತಿರ ಕೇಳಿ ನನಗೂ ಇಂತಹುದೇ ಒಂದನ್ನು ತರಿಸಿ ಕೊಡಬಹುದೇ?" ಎಂದು "ರಾಜು ಉತ್ಸಾಹದಿಂದ ಹೇಳಿದ.

"ಇದು ನಮ್ಮ ಅಜ್ಜ ನಮಗೆ ಕೊಟ್ಟುದು. ಇಂತಹುದೇ ಇನ್ನೊಂದು ಗೌರಿಯ ವಿಗ್ರಹವೂ ಇದೆ. ಅಲ್ವೇನಮ್ಮ?" ಎಂದಾಗ ಮಿಂಚಿನಂತೆ ನೆನಪಿನ ಹಳೆಯಜಾಡೊಂದನ್ನು ಅರಸಿ ಹೋಗಲು ಮನಸ್ಸು ತವಕಿಸಿತು.

ಅದೇನು ತೋರಿತೋ....ಆಕೆ ವಿಗ್ರಹವನ್ನು ನನ್ನ ಕೈಗಿತ್ತಳು. ನಾನು ಅದನ್ನು ಅಡಿಮೇಲು ಮಾಡಿ ನೋಡಿದಾಗ ತಳಭಾಗದಲ್ಲಿ ಒಂದು ರಂಧ್ರವಿದ್ದುದು ಕಂಡಿತು. ಇದೇಕೆಂದು ಕೇಳಿದಾಗ ಆಕೆ

"ಹಿಂದೆ ಈ ವಿಗ್ರಹಕ್ಕೆ ಬೀಗದ ಕೈ ಇತ್ತಂತೆ. ಅದನ್ನು ಹಾಕಿ ತಿರುಗಿಸಿದರೆ ಗಣೇಶ ತನ್ನ ಸೊಂಡಿಲನ್ನು ಅತ್ತಿಂದಿತ್ತ ತಿರುಗಿಸುತ್ತಿದ್ದನಂತೆ. ಈಗ ಅದಿಲ್ಲ, ಕಳೆದು ಹೋಗಿದೆ" ಎಂದರು.

"ಛೆ ಇಂಥ ಅಮೂಲ್ಯ ವಸ್ತುಗಳನ್ನು ಜಾಗ್ರತೆಯಿಂದಿರಿಸಬೇಡವೇ?ಎಂಥ ಜನರಿವರು ಎಂಬಂತಾಯಿತು. ನನಗಂತೂ ಪುರಾತನ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ ಬೇರೆ. ಹಲವು ವರ್ಷಗಳ ಹಿಂದೆ ಕಾಠ್ಮಂಡುವಿಗೆ ಹೋದಾಗ ಅಲ್ಲಿನ ಪಶುಪತಿ ದೇವಾಲಯದ ಹೊರಗೆ ಮಾರಲು ಇರಿಸಿದ್ದ ಬೆಳ್ಳಿಯ ರಾಜಹಂಸವನ್ನು ಸಾವಿರ ರೂಪಾಯಿಗಳಿಗೆಕೊಂಡಿದ್ದೆ. ಅದರ ತಳಭಾಗದಲ್ಲಿಕೀಲಿ ತಿರುಗಿಸುವ ಏರ್ಪಾಡಿದ್ದು ನಾಲ್ಕು ಚಕ್ರಗಳಿಂದ ಜೋಡಿಸಲ್ಪಟ್ಟಿತ್ತು. ಕೀಲಿ ತಿರುಗಿಸಿದಾಗ ಹಂಸ ತನ್ನ ಕೊಕ್ಕನ್ನು ಅತ್ತಿಂದತ್ತ ತಿರುಗಿಸಿ, ಗಂಭೀರವಾಗಿ, ಒಯ್ಯಾರದಿಂದ ಚಲಿಸುತ್ತಿತ್ತು. ಅದರ ಬೆನ್ನಿನ ಮೇಲ್ಭಾಗದಲ್ಲಿದ್ದ ಮುಚ್ಚಳ ತೆಗೆದರೆ ವೀಳ್ಯ ಹಾಕುವ ಕರಡಿಗೆಯಾಗಿ ಮಾರ್ಪಾಡು. ಶ್ರೀಮಂತ ವೇಶ್ಯಾಗೃಹಗಳಲ್ಲಿ ಗಿರಾಕಿಗಳಿಗೆ ಅದನ್ನು ಅತ್ತಿಂದಿತ್ತ ತಿರುಗುವಂತೆ ಮಾಡಿ ವೀಳ್ಯ ಕೊಡುತ್ತಿದ್ದರಂತೆ. ಯಾವುದೋ ರಾಜವಂಶ ಅವನತಿಯ ದೆಸೆಯುಲ್ಲಿದ್ದಾಗ ಸಾರ್ವಜನಿಕ

ರಿಗೆ ಮಾರಿರಲೂಬಹುದು. ಅಥವಾ ಅರಮನೆ ಯಿಂದಲೋ, ವೇಶ್ಯಾವಾಟಿಕೆಯಿಂದಲೋ ಯಾರಾದರೂ ಊಳಿಗದವರು ಹಾರಿಸಿರಲೂ ಬಹುದಲ್ಲವೇ? ಆ ಸಮಯದಲ್ಲಿ ನನ್ನವ ಳಂಥೂ ಯಾರೇ ಮನೆಗೆ ಬರಲಿ, ಬಂದವ ರಿದುರು ಅದರ ಪ್ರದರ್ಶನ ನಡೆಸಲೇಬೇಕು.

ಆದರೆ ಹಂಸ ಬೆಳ್ಳಿಯದು, ಈ ಗಣೇಶ ಚಿನ್ನದ್ದು.

"ಮೇಡಂ ನೀವು ಅದೃಷ್ಟಶಾಲಿಗಳು. ಇದು ಸುಮಾರು ಇನ್ನೂರೈವತ್ತು, ಮುನ್ನೂರು ವರ್ಷಗಳಷ್ಟು ಹಿಂದಿನದ್ದಾಗಿರ ಬೇಕು. ಯಾವುದೋ ರಾಜವಂಶದವರ ಕುಲದೇವತೆ ಗಣಪತಿಯಾದ ಕಾರಣ ಮೂರ್ತಿ ಹೀಗೆ ಅಲಂಕರಿಸಲ್ಪಟ್ಟಿದೆ. ಇದನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳಿ. ಇಂಥ ಅಮೂಲ್ಯ ವಸ್ತುಗಳನ್ನು ಭದ್ರತೆಗಾಗಿ ಬ್ಯಾಂಕಿನಲ್ಲಿರಿಸುವುದು ಒಳ್ಳೆಯದು" ಎಂದು ಅನಪೇಕ್ಷಿತ ಸಲಹೆ ಇತ್ತೆ.

"ಗಣೇಶನ ಕ್ಷೀರಪಾನ" ನೋಡಿದ ಒಂದು ಗುಂಪು ಬೆರಗಾಗಿ ಹಿಂತಿರುಗಿತು. ದಾರಿಯಲ್ಲಿ ಬರುತ್ತಿದ್ದಂತೆ ರಾಜುವಿನ ತಂದೆ ಗಣೇಶನ್ ಬ್ರಾಹ್ಮಣ ಎಂದೂ ಆತನ ಹೆಂಡತಿ ಕಿರಸ್ತಾನ ಮಹಿಳೆಯೆಂಬ ಸುದ್ದಿಯೂ ಸಿಕ್ಕಿತು. ಎಲ್ಸಾ ಗರ್‌ಟ್ರೂಡ್ ವಿವಾಹವಾದ ಮೇಲೆ ವಿಮಲಾ ಗಣೇಶ್ ಆದಳಂತೆ. ಅವರಿಬ್ಬರೂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಟ್ಟಿಗೇ ಕಲಿತವರಂತೆ. ಈಕೆಯ ಕೈಯಲ್ಲಿ ಆ ಗಣೇಶ....ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತಾಯಿತು. ಎಂಬ ನಾಣ್ಣುಡಿಯು ನೆನಪಾಯಿತು. ಗಣೇಶನ್ ಅವರು ಒಂದು ಕಾರ್ಖಾನೆಯ ಮಾಲಿಕರಾಗಿದ್ದು ವಿದ್ಯು ಚ್ಛಕ್ತಿಯ ಅಭಾವದಿಂದಾಗಿ ಈಗ ಭಾರೀ ಸೋತುಹೋಗಿದ್ದಾರಂತೆ. ಕಿವಿಗಳನ್ನು ತೆರೆದು ಬಾಯಿ ಮುಚ್ಚಿಯೇ ಹಲವು ಸುದ್ದಿ ಸಂಗ್ರಹವಾದಂತಾಯಿತು.

ವಿಷಯ ತಿಳಿಯುತ್ತಿದ್ದಂತೆಯೇ ಮನಸ್ಸು ಹಳೆಯ ನೆನಪಿನ ಜಾಡೊಂದನ್ನು ಅರಸಿ ಹೋಗಲು ತವಕಿಸಿತು. ಮನದಾಳದ ತಲ್ಲಣವನ್ನು ಸಹಿಸಿಕೊಳ್ಳದಾದೆ. ನನ್ನ ಮನಸ್ಸಿನ ಉದ್ವೇಗವನ್ನು ಅರಿತ ಸುಶೀಲ.

"ಏನ್ರಿ ಈಗೀಗ ನೀವು ನೀವೇ ಆಗಿಲ್ಲ. ಪ್ರೈವೇಟ್‌ನಲ್ಲಿ ತೊಡಗಿಸಿದ ಹಣವೇನಾ ದರೂ....ನನಗಾದ್ರೂ ಹೇಳ್ರಿ" ಕಷ್ಟ ಬಂದಾಗಲೂ, ಸುಖ ಬಂದಾಗಲೂ ಹಂಚಿದರೇ ಹಿತಾ....ಯುಗಾದಿಯ ಬೇವು, ಬೆಲ್ಲದ ಅರ್ಥವೂ ಇದೇ ಅಲ್ಲವೇ" ಎಂದು ಸಮಾಧಾನದ ಮಾತನ್ನಾಡಿದಳು.

ಈಗ ನನ್ನ ಹತ್ತಿರ' ಏನೂ ಕೇಳಬೇಡ. ಸಮಯ ಬಂದಾಗ ಎಲ್ಲ ಬಿಡಿಸಿ ಹೇಳುವೆ. ಎಂದು ಸಮಜಾಯಿಸಿದೆ.

'ಸುಶೀ ನನಗೆ ಕೆಲಸದ ಮೇಲೆ' ಟೂರ್ ಹೋಗಲಿದೆ. ಇವತ್ತಿನ ರಾತ್ರಿ ಬಸ್ಸಿನಲ್ಲಿ ಹೊರಡಲು ಎಲ್ಲಾ ತಯಾರಿ ಮಾಡಿಡು 'ಎಂದೆ' ನಾನು ಆಗಾಗ ಹೀಗೆ ಕೆಲಸದ ಮೇಲೆ ಹೋಗುತ್ತಿದ್ದುದು ಹೊಸತೇನಲ್ಲ.

ಹಲವಾರು ದಶಕಗಳ ಅನಂತರ ಹುಟ್ಟಿ ದೂರನ್ನು ನೋಡುವ ಸಂತೋಷ ಒಂದು ಕಡೆಯಾದರೆ ಊರನ್ನು ಬಿಟ್ಟು ಬಂದ ದುಃಖದ ಕಥೆ ಇನ್ನೊಂದೆಡೆ....ತಾಯ್ನಾಡಿನ ಮುಂಜಾನೆಯ ತಂಪಾದ ಗಾಳಿ ಮೈಸೋಕಿ ದಾಗ ಮನಸ್ಸು ಪುಳಕಗೊಂಡಿತು. ಬಸ್ಸು ನಿಲ್ದಾಣದಲ್ಲಿ ಜನಜಂಗುಳಿ ಕಡಿಮೆಯಾದಾಗ ಅಲ್ಲಿಂದ ಹೊರಬಂದು ಮುಖ್ಯ ರಸ್ತೆಗಿಳಿದೆ. ನಗರದಿಂದ ಹದಿನೈದು ಮೈಲಿ ದೂರವಿದೆ

ನಮ್ಮೂರು. ಇಲ್ಲಿಂದ ಇನ್ನೊಂದು ಬಸ್ಸು ಹಿಡಿದು ಹೋಗಬೇಕತ್ತು. ಬಸ್ಸಿನಲ್ಲಿ ಸೀಟಿನ ಮೇಲಿರಿಸಿದ್ದ ಚಿಕ್ಕ ಸೂಟ್‌ಕೇಸನ್ನು ಕೈಯಲ್ಲಿ ಹಿಡಿದುಕೊಂಡವನೇ ನಾನೀಗ ಯಾವ ಬಸ್ಸಿನಲ್ಲಿ ಹೋಗಬೇಕೆಂಬುದನ್ನು ನಿರ್ಧರಿಸಲೂ ಕಷ್ಟವಾಯಿತು.

ಮೂವತ್ತು ವರ್ಷಗಳಲ್ಲಿ ಊರು ಅಷ್ಟೊಂದು ಬೆಳೆದಿತ್ತು. ಬಸ್ಸು ನಿಲ್ದಾಣದ ಪಕ್ಕದ ರಸ್ತೆಗಳಲ್ಲಿ ಮುಗಿಲುಮುಟ್ಟುವ ಬಹುಅಂತಸ್ತಿನ ಹೋಟೆಲುಗಳು ಒಂದಡೆ ಯಾದರೆ, ಸಣ್ಣ ದೊಡ್ಡ ಇರುವೆಗಳ ಸಾಲುಗಳಂತಿರುವ ಕಾರು ಬಸ್ಸುಗಳ ಓಡಾಟ ಇನ್ನೊಂದೆಡೆ. ನಾನು ಹಿಂದೊಮ್ಮೆ ಈ ಪರಿಸರದಲ್ಲಿ ಇದ್ದೆನೇ ಎಂದು ಸೋಜಿಗ ಪಡುವಂತಾಯ್ತು. ಆದರೂ ವರ್ಷಕ್ಕೊಂದು ಬಾರಿ ಅಜ್ಜನ ತಿಥಿಗೆ ಹೋಗಲು ಅಮ್ಮನೊಂದಿಗೆ ಬಸ್ಸಿನಲ್ಲಿ ಇದೇ ದಾರಿಯಲ್ಲಿ ಹೋಗುತ್ತಿದ್ದ ನೆನಪಾಯಿತು.

ಅಂದು....ಒಂದು ನರಪಿಳ್ಳೆಯೂ ಇಲ್ಲದಿದ್ದ ರಸ್ತೆಯಲ್ಲಿ ಇಂದು ಎಷ್ಟೊಂದು ಜನ ಅಬ್ಬಾ!! ನಮ್ಮೂರು ಹೇಗೆ ಬೆಳೆದಿದೆ ಎಂದು ತಿಳಿದು ಆಶ್ಚರ್ಯದೊಂದಿಗೆ ಸಂತೋಷವೂ ಆಯಿತು. ಆದರೆ ನಾನೀಗ ಯಾವ ಬಸ್ಸು ಹಿಡಿದು ಹೋಗಬೇಕೆಂದು ತಿಳಿಯದಾಯ್ತು. ಮನಸ್ಸು ಡೋಲಾಯಮಾನವಾದಾಗ ದೂರದ ಬೃಹತ್ ಕಟ್ಟಡದ ಮೇಲೊಂದು 'ಬೋರ್ಡು' ಕಾಣಿಸಿತು. ನಮ್ಮೂರಲ್ಲಿ ಯಾರಿಗಾದರೂ ಮರಣಾಂತಿಕವಾದ ಕಾಯಿಲೆ ಬಂದಾಗ (ಮಾತ್ರ) ರೋಗಿಯನ್ನು ಇಲ್ಲಿಗೆ ತರುತ್ತಿದ್ದ ನೆನಪು ಮನದಾಳದಲ್ಲಿ ಹಸಿರಾಯಿತು.

ಬಸ್ಸು ಏರಿ ಕುಳಿತವನ ಹತ್ತಿರ 'ಕಂಡಕ್ಟರ್' "ಎಲ್ಲಿಗೆ ಟಿಕೆಟ್ಟು ?" ಎಂದಾಗ ಏನು ಉತ್ತರಿಸಿದೆನೋ ಆ ದೇವರಿಗೇ ಗೊತ್ತು. ಅಂತೂ ಊರು ತಲುಪುತ್ತಿದ್ದಂತೆ ಯಾಂತ್ರಿಕವಾಗಿ ಪೆಟ್ಟಿಗೆಯೊಂದಿಗೆ ಕೆಳಗಿಳಿದೆ. ಹಳ್ಳಿ ರಸ್ತೆಯ ಇಬ್ಬದಿಗಳಲ್ಲಿದ್ದ ತೆಂಗು, ಕಂಗು, ಬಾಳೆ ತೋಟಗಳೆಲ್ಲ ಕಣ್ಮರೆಯಾಗಿದ್ದುವೆಂದು ಹೇಳುವ ಆವಶ್ಯಕತೆಯೇ ಇಲ್ಲ. ಊರ ಚರ್ಚಿನ ಹತ್ತಿರದ ಗೇರು ಹಾಡಿಯ ಬದಿಯಲ್ಲಿಯೇ ನಮ್ಮ ಮನೆ ಇದ್ದುದು. ಮನೆಯಿಂದ ಒಂದು ಫರ್ಲಾಂಗು ದೂರದಲ್ಲಿ ಪ್ರಸಿದ್ಧವಾದ ಗಣೇಶನ ಗುಡಿ.

ಮೂರುದಶಕಗಳ ಹಿಂದಿದ್ದ ಸರ್ವಧರ್ಮ ಸಮನ್ವಯದ ಸಿದ್ಧಾಂತದಂತೆ ಇಂದಿಲ್ಲಿ ಇಗರ್ಜಿ, ಮಸೀದಿ, ದೇವಾಲಯಗಳನ್ನು ಸರ್ವ ಮತೀಯರೂ ಗೌರವದಿಂದಲೇ ಕಾಣುತ್ತಿದ್ದರು. ಮತೀಯ ಗಲಭೆಯ ಲವಲೇಶವನ್ನೂ ಕಂಡರಿಯದ ಕಾಲವದು. ನಮ್ಮೂರಿನ ಸನಿಹದ ಹಳ್ಳಿಯ ಅಮ್ಮನವರ ದೇಗುಲದಲ್ಲಿ ಪೂಜೆಯ ಪ್ರಸಾದವನ್ನು ಮೊದಲು ಮುಸಲ್ಮಾನ ಗೃಹಸ್ಥನಿಗೆ ಕೊಡಲಾಗುತ್ತಿತ್ತು. ದೇಗುಲದ ಅಭಿವೃದ್ಧಿ ಕಾರ್ಯದಲ್ಲಿ ಅವರದೇ ಸಿಂಹಪಾಲು....

ಯೋಚಿಸುತ್ತಾ ನಡೆಯುತ್ತಿದ್ದಂತೆ ಉದ್ವೇಗದಿಂದಲೇ ನಮ್ಮ ಜೀರ್ಣವಾದ ಮನೆಯ ಮೆಟ್ಟಿಲುಗಳನ್ನೇರಿದೆ. ಮನೆಯಲ್ಲಿ ಈಗ ಯಾರಿರಬಹುದು? ನಾನಿರುವಾಗಲೇ ಅಪ್ಪಯ್ಯನ ಆರೋಗ್ಯ ಅಷ್ಟೇನೂ ಚೆನ್ನಾಗಿರಲಿಲ್ಲ, ಅವರು ತೀರಿಕೊಂಡಿರಬಹುದು. ತಮ್ಮ....ತೀರಿಹೋದ ಅಪ್ಪನ ನೆನಪು.... ಹಾಗೂ ಮನೆಯಿಂದ ಓಡಿಹೋದ ನನ್ನ ನೆನಪಿನ ಚಿಂತೆಯಿಂದ ಚಿತೆಯ ಪಾಲಾಗಿರ

ಬಹುದು. ತಂಗಿ ಸುಮಿತ್ರೆ ಎಲ್ಲಿದ್ದಾಳೋ ಉತ್ಸಾಹದ ಚಿಲುಮೆ, ಪಾದರಸದ ಚುರುಕು ಆಕೆ. ಬಡವರ ಕನ್ನೆಯರು ಸುಂದರಿಯ ರಾಗಿದ್ದರೂ ಅವರ ಅಂದ ಚಂದ ಕಾಡಿನಲ್ಲರ ಳಿದ ಪುಷ್ಪಗಳಳಂತೆ.....ಬೇಡದ ಯೋಚನೆ ಗಳು ಉದ್ಭುದ್ಧವಾಗಿ ಅರಳಿ ನಿಂತವು.

ಬಾಗಿಲನ್ನು ತಟ್ಟುತ್ತಿದ್ದಂತೆಯೇ ಸುಮಾರು ಹತ್ತು, ಹನ್ನೆರಡು ವರ್ಷ ವಯ ಸ್ಸಿನ ಹುಡುಗಿಯೊಬ್ಬಳು ಬಾಗಿಲು ತೆರೆ ದಳು. ಮಾಸಲು ಬಣ್ಣದ ಬಟ್ಟೆ ಧರಿಸಿದ್ದ ಆಕೆ ಎಣ್ಣೆ ಹಚ್ಚಿ ಒಪ್ಪವಾಗಿ ಬಾಚಿದ ಕೂದಲನ್ನು ನಾರಿನಿಂದ ಬಿಗಿದಿದ್ದಳು. ನನ್ನನ್ನು ನೋಡಿದ ಕೂಡಲೇ

"ಅಮ್ಮ ದೇವಸ್ಥಾನಕ್ಕೆ ಹೋಗಿದ್ದಾಳೆ. ನೀವು ಯಾರು? ಎಲ್ಲಿಂದ ಬಂದಿರಿ? ಏನಾ ದರೂ ಹೇಳಲಿಕ್ಕಿದೆಯೆ? ಘಂಟೆ ಕಾಯುವು ದಾದರೆ...." ಎಂದು ಪಟಪಟನೆ ಹಲವಾರು ಪ್ರಶ್ನೆಗಳೊಂದಿಗೇ ಸಲಹೆಗಳನ್ನು ಇತ್ತಳು. ಅಂತೂ ಹುಡುಗಿ ಅವಳಮ್ಮನಂತೆಯೇ ಬಹು ಚೂಟಿ. ಚಿಕ್ಕಂದಿನಲ್ಲಿ ಸುಮಿತ್ರೆಯೂ ಬಹು ಚುರುಕು. ದೇವಸ್ಥಾನದಲ್ಲಿದ್ದ ಗಣೇಶ,ಗೌರಿಯರ ವಿಗ್ರಹಗಳಿಗೆ ಹೂಮಾಲೆ ಗಳನ್ನು ಅವಳೇ ಪೋಣಿಸಬೇಕು. ಮಲ್ಲಿಗೆ, ಕನಕಾಂಬರ, ಪಚ್ಚೆ ಕದಿರುಗಳನ್ನು ಕಲಾ ತ್ಮಕವಾಗಿ ಜೋಡಿಸಿ ಮಾಲೆ ಕಟ್ಟಿದಳೆಂದರೆ ಅವು ದೇವರ ವಿಗ್ರಹಗಳ ಮೇಲೆ ಮತ್ತಷ್ಟು ಸೊಬಗಿನಿಂದ ಭಕ್ತರ ಕಣ್ಣು ಕೋರೈಸು ವಂತೆ ಮೂಡುತ್ತಿದ್ದುವು.

"ಇಲ್ಲ ಮಗೂ ನಾನೇ ದೇವಸ್ಥಾನಕ್ಕೆ ಹೋಗುತ್ತೇನೆ. ನಿನ್ನಮ್ಮ ಅಲ್ಲಿ ಸಿಗದಿದ್ದರೆ ಪುನಃ ಬರುವೆ" ಎಂದು, ಬೇರೇನನ್ನೂ ಮಾತನಾಡಲು ಇಚ್ಛಿಸದೆ, ನೇರವಾಗಿ ದೇವ ಸ್ಥಾನಕ್ಕೆ ನಡೆದೆ....

ಅಂದು....ಮೂವತ್ತು ವರುಷಗಳ ಹಿಂದೆ ನಡೆದ ನನ್ನ ಜೀವನದ ಹೊಸ ತಿರುವು. ದೇವ ಸ್ಥಾನದ ವರ್ಷಾವಧಿ ಹಬ್ಬ. ಹಬ್ಬದ ಮರು ದಿನ ಮುಂಜಾನೆ ಎಂದಿನಂತೆ ಅಪ್ಪಯ್ಯ.... "ಯೇ ಮಾಣಿ....ಬೇಗ ಹಲ್ಲುಜ್ಜಿ ಕೆರೆಗೆ ಹೋಗಿ ಸ್ನಾನ ಮಾಡೋ" ಎಂದರು. ದೇವಾಲಯದ ಅರ್ಚಕರ ಸಹಾಯಕ್ಕೆ ದಿನಾ ಹೋಗುವುದು ನನ್ನ ಪದ್ಧತಿ. ಅರ್ಚಕನು ಬಿಸಾಡಿದ ನೈರ್ಮಾಲ್ಯದ ಹಳೆಯ ಹೂವು, ತುಳಸಿ, ಬಾಳೆಹಣ್ಣುಗಳ ಸಿಪ್ಪೆ, ತೆಂಗಿನ ಜುಟ್ಟು, ಕಸ ಇವನ್ನೆಲ್ಲ ತೆಗೆದು, ಲಾವಂಚದ ಹಿಡಿಯಲ್ಲಿ ಗರ್ಭಗುಡಿಯನ್ನು ಚೊಕ್ಕಟವಾಗಿಡುವುದು ನನ್ನ ಕೆಲಸ. ಆ ದಿನ....ಜೀವನದಲ್ಲಿ ಮರೆಯಲಾಗದ ದಿನ. ನನ್ನ ಏಳನೆಯ ತರಗತಿಯ 'ಪಬ್ಲಿಕ್' ಪರೀಕ್ಷೆಯ ಫಲಿತಾಂಶ ಬರುವುದಿತ್ತು. ಅಪ್ಪ ಯ್ಯನ ಒಂದು ಕರೆಗೇ ಎದ್ದು ಹತ್ತಿರದ ಕೆರೆ ಯಲ್ಲಿ ಸ್ನಾನ ಮಾಡಿ ಗಣೇಶನ ಗುಡಿಗೆ ಹೋದೆ. ಹಿಂದಿನ ದಿನ ಜಾತ್ರೆಯಾದುದ ರಿಂದ ದೇವರ ವಿಗ್ರಹಗಳಿಗೆ ಉಳಿದ ದಿನಗಳಿ ಗಿಂತಲೂ ಹೆಚ್ಚು ಚಿನ್ನದ ಆಭರಣಗಳನ್ನು ತೊಡಿಸಿದ್ದರು. ಆಭರಣಗಳೊಂದಿಗೇ ಪುಷ್ಪ ಗಳ ಹಾರಗಳನ್ನು ಹಾಕಿದ್ದರು. ಗಣೇಶನ ಪ್ರಮುಖ ವಿಗ್ರಹದ ಕೆಳಗೆ ಬಂಗಾರದ ಗೌರಿಯ ವಿಗ್ರಹ ಇವುಗಳ ಸುತ್ತ ಪನ್ನೀರು ಗುಲಾಬಿಯ ಪಕಳೆಗಳನ್ನು ಉದುರಿಸಿದ್ದರು. ಮಲ್ಲಿಗೆ, ಗುಲಾಬಿಗಳ ಪರಿಮಳ ಮನಸ್ಸಿಗೆ ಒಂದು ತರದ ಮುದವನ್ನೀಯುವಂತಿದ್ದುವು. ಅಷ್ಟರಲ್ಲಿ ಅರ್ಚಕರು "ಏ ಮಾಣಿ, ನನಗೆ 'ಅರ್ಜೆಂಟ್' ಮನೆಗೆ ಹೋಗಬೇಕಾಗಿದೆ.

ನೀನು ದೇವರ ಮೈಮೇಲಿನ "ನೈರ್ಮಲ್ಯ" ತೆಗಿಯುತ್ತಿರು ಈಗ ಬಂದೆ"....ಎಂದು ಹೋಗುತ್ತಿದ್ದಂತೆ ;

"ನನಗೆ ಇವತ್ತು ಪರೀಕ್ಷೆಯ ಫಲಿತಾಂಶ ನೋಡಲು ಹೋಗಲಿದೆ. ಬೇಗ ಬರ್ತೀರಿ ತಾನೆ ?" ಎಂದೆ.

'ಹೂಂ....ಹೂಂ....ಐದೇ ಐದು ನಿಮಿಷದಲ್ಲಿ ಬರುತ್ತೇನೆ....ಎಂದವರು ಅರ್ಧ ತಾಸಾದರೂ ಇಲ್ಲ. ಉದ್ವೇಗವನ್ನು ತಡೆಯುಲಾಗದೆ ಸೀದಾ ಶಾಲೆಗೆ ಹೋದೆ. ಶಾಲೆಯ ಗೋಡೆಯಲ್ಲಿ ತೂಗುಹಾಕಿದ ಪಟ್ಟಿಯಲ್ಲಿ ತೇರ್ಗಡೆಯಾದವರ ಹೆಸರುಗಳೊಂದಿಗೆ ನನ್ನದಿರಲಿಲ್ಲ. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು....ಯಾವ ಮುಖದಲ್ಲಿ ಮನೆಗೆ ಹೋಗಿ ಈ ವಿಚಾರ ಹೇಳಲಿ ?.... ಎಂದು ದುಃಖದಿಂದಲೇ ಹೋದರೆ ಬಾಗಿಲಿನಲ್ಲಿಯೇ ನಿಂತಿದ್ದ ಅಮ್ಮ,

"ರೀ....ನಾಣಿ ಬಂದ" ಎಂದು ಹೇಳುತ್ತಿದ್ದಂತೆಯೇ ಅಪ್ಪಯ್ಯ ಸುಮಿತ್ರ ಎಲ್ಲ ಹೊರಗೆ ಬಂದರು. ಇಷ್ಟು ಕಷ್ಟದಲ್ಲಿ ಕಲಿಸಿದರೆ ಪಾಸಾಗಲಿಕ್ಕೇನು ಧಾಡಿಯೇ ನಿನಗೆ ?....ಎಂದು ಹತ್ತಿರದಲ್ಲಿಯೇ ಸಿಕ್ಕಿದ ಮಡಿಕೋಲಿನಿಂದ ಹೊಡೆದರು.

"ಇನ್ನು ಶಾಲೆ ಮೆಟ್ಟಲು ಹತ್ತಿದ್ದು ಸಾಕು. ನೆರೆಮನೆ ಸುಬ್ಬಾಭಟ್ರೊಂದಿಗೆ ಅಡುಗೆ ಕೆಲಸಕ್ಕೆ ಸಹಾಯ ಮಾಡಲು ಹೋಗು"....ಎಂದರು. ಮದುವೆ ದಿನಗಳಲ್ಲಿ ಸಿಗುವ ಪಾಯಸ, ಹೋಳಿಗೆ, ಸಿಗುವ ದಕ್ಷಿಣೆಗೆ ಮರುಳಾಗಿ. ರಜೆಯ ದಿನಗಳಲ್ಲಿ ಅವರೊಂದಿಗೆ ವಿಶೇಷದ ಅಡುಗೆಗೆ ತೆಂಗಿನಕಾಯಿ ಹೆರೆದು, ಅರೆದು ಕೊಡಲು ಹೋಗುತ್ತಿದ್ದೆ.

ಪೆಟ್ಟು ತಿಂದ ನೋವು ಒಂದೆಡೆಯಾದರೆ ಈ ಸಲಹೆ ನನ್ನ ಸ್ವಾಭಿಮಾನಕ್ಕೆ ಬೆನ್ನಿನ ಬರೆಯೊಂದಿಗೇ ಇನ್ನೊಂದು ಬರೆಯಾಯಿತು. ದೇವಸ್ಥಾನಕ್ಕೆಂದು ಹೋದವನು ಸೀದಾ ಪೇಟೆಯ ಕಡೆಗೆ ಬಿರಬಿರನೆ ನಡೆದೆ. ನಡೆದೆ ಎನ್ನುವುದಕ್ಕಿಂತಲೂ ಓಡಿಯೇ ಹೋದೆ ಎನ್ನಬಹುದು. ಎದುರಿಗೆ ಸಿಕ್ಕ ಬಸ್ಸು ಹತ್ತಿ ಮುದುಡಿ ಕುಳಿತ ನನ್ನನ್ನು 'ಕಂಡಕ್ಟರ್' ಎಲ್ಲಿಗೆ ಎಂದಾಗ ನನ್ನ ಹತ್ತಿರವಿದ್ದ ಒಂದು ನೂರರ ನೋಟು ಕೊಟ್ಟೆ. ಹಬ್ಬದ ದಿನಗಳಲ್ಲಿ ದೇವಸ್ಥಾನದಲ್ಲಿ ತೀರ್ಥ ವಿತರಣೆ ಮಾಡಿದಾಗ ಸಿಕ್ಕಿದ ಚಿಲ್ಲರೆಯೆಲ್ಲವನ್ನು ಸೇರಿಸಿ ಅಂಗಡಿಗೆ ಹೋಗಿ ಇಡೀ ನೂರರ ನೋಟು ಮಾಡಿಕೊಂಡಿದ್ದೆ. ದೊಡ್ಡ ನೋಟು ನೋಡಿದ ಆತ

'ಬೊಂಬಾಯಿಗಾ ?' ಎಂದಾಗ ಗಾಬರಿಯಾದರೂ ಹೂಂ....ಎಂದೆ. ಮೈಯಲ್ಲಿ ನಡುಕವುಂಟಾಗಿ ಬೆವರಲು ಪ್ರಾರಂಭವಾಯಿತು. ಹತ್ತಿರ ಕುಳಿತ ಮಹಿಳೆಯೊಬ್ಬರು ನನ್ನನ್ನೇ ನೋಡುತ್ತಿದ್ದಾಗ ಅವರ ದೃಷ್ಟಿಯನ್ನೆದುರಿಸುವುದು ಕಷ್ಟವಾಗಿ ಮುಖವನ್ನು ತಿರುಗಿಸಿ ಕೂತೆ.

"ಬೊಂಬಾಯಿಯಲ್ಲಿ ಯಾರ ಮನೆಯಲ್ಲಿ ಇದ್ದಿಯಪ್ಪಾ" ಎಂದಾಗ "ಅಲ್ಲಿಗೆ ಕೆಲಸ ಹುಡುಕಿಕೊಂಡೇ ಹೋಗುತ್ತಿದ್ದೇನೆ" ಎಂದೆ.

"ನೀವು ಯಾವ ಜಾತಿಯವರಪ್ಪ ? ನಾವು ಬಂಟ್ಸ್. ನಮಗೆ ಮಕ್ಕಳಿಲ್ಲ. ನೀವು ಹಗಲು ಮನೆಯಲ್ಲಿ ಕೆಲಸ ಮಾಡಿ....ರಾತ್ರಿ ಶಾಲೆಗೆ ಸೇರಿ ವಿದ್ಯೆಯನ್ನು ಮುಂದುವರಿಸಬಹುದು" ಎಂದರು. ನನ್ನ ಜಾತಿಯ ವಿಚಾರ ಮತ್ತೆ ಮತ್ತೆ ಪ್ರಶ್ನಿಸದಿದ್ದುದು ಅನುಕೂಲವೇ

ಆಯಿತು. ಮಧ್ಯದಲ್ಲಿ ಒಮ್ಮೆ ಇಳಿದಾಗ ನನ್ನ ಜನಿವಾರವನ್ನು ತೆಗೆದು ಚಡ್ಡಿಯ ಕಿಸೆಗೆ ಸೇರಿಸಿದೆ. ಊರಿನಲ್ಲಿ ವೈಶಾಖದ ದಿನಗಳಲ್ಲಿ ಉಪನಯನವಾದ ವಟುಗಳಿಗೆ ದಕ್ಷಿಣೆ ಇತರ ಬಾಲಕರಿಗಿಂತ ಹೆಚ್ಚು ದೊರೆಯುತ್ತಿತ್ತು. ಆದ್ದರಿಂದ ಗಂಡುಮಕ್ಕಳು ತಮಗೆ ಬೇಗನೆ ಉಪನಯನ ಮಾಡಿರೆಂದು ಹಿರಿಯರನ್ನು ಒತ್ತಾಯಿಸುತ್ತಿದ್ದರು. ಅಂದು ಹಾಕಿಕೊಂಡ ಅದೇ ಜನಿವಾರವನ್ನು ತೆಗೆಯುವಾಗ, ತಡೆಯಲು ಎಷ್ಟು ಪ್ರಯತ್ನಿಸಿದರೂ ಕಣ್ಣೀರು ಬಂದೇ ಬಿಟ್ಟಿತ್ತು. ನಾನು ಬಸ್ಸು ಇಳಿದವ ಪುನಃ ಹತ್ತಿದಾಗ ಗಾಬರಿಯಲ್ಲಿದ್ದ ಆ ಮಹಿಳೆಗೆ ಸಂತಸವಾಯಿತು. ಬಹುಶಃ ನಾನು ಹಿಂತಿರುಗಿ ಬರುವುದಿಲ್ಲವೆಂದು ಭಾವಿಸಿರಬೇಕು.

ಬೊಂಬಾಯಿಯಲ್ಲಿ ನಾನು ಆ ಸಂಸಾರದ ಒಬ್ಬ ಸದಸ್ಯನೇ ಆಗಿ ಬಿಟ್ಟೆ. ಪ್ರಾರಂಭದಲ್ಲಿ ಮಾಂಸಾಹಾರಿಗಳಾದ ಅವರ ಮನೆಯಲ್ಲಿ ಆಹಾರದ್ದೇ ಒಂದು ಸಮಸ್ಯೆಯಾಯಿತು. ಮನೆಯಾಕೆಯನ್ನು ಏನೆಂದು ಸಂಬೋಧಿಸಬೇಕೆಂದು ತಿಳಿಯದಾದಾಗ ಅವರೇ ತನ್ನನ್ನು "ಅಮ್ಮ"ನೆಂದು ಕರೆಯೆಂದ ಮೇಲೆ ಅವರು ಅಮ್ಮನೇ ಆದರು. ಯಜಮಾನರನ್ನು ಮಾತ್ರ ರಾಯರೆನ್ನುತ್ತಿದ್ದೆ. ಅದೇನು ಪೂರ್ವಜನ್ಮದ ಋಣಾನುಬಂಧವೋ ಅವರ ಮಗನಾಗಿಯೇ ಬೆಳೆದೆ. ನಾನು ಪದವೀಧರನಾಗಲು ಆ ದಂಪತಿಗಳು ಮಾಡಿದ ಉಪಕಾರ ಮರೆಯಲಸಾಧ್ಯ. ಅವರ ವಶೀಲಿಯಿಂದ ಪೊಲೀಸು ಇಲಾಖೆಯಲ್ಲಿ 'ಎಸ್.ಐ.' ಕೆಲಸವೂ ಸಿಕ್ಕಿತು.

ನನಗಾರೂ ಬಂಧುಗಳಿಲ್ಲವೆಂದೇ ಅವರು ನಂಬಿದ್ದರಿಂದ ಅವರ ಕಡೆಯ ಒಂದು ಬಡ ಹುಡುಗಿಯನ್ನೇ ಮದುವೆ ಮಾಡಿಸಿದರು. ಹುಡುಗಿ ಸುಶೀಲ ಹೆಸರಿಗೆ ತಕ್ಕಂತೆಯೇ ಸುಶೀಲೆಯೇ. ನನ್ನ ಜೀವನದಲ್ಲಿ ಮತ್ತೆ ವಸಂತ ತುಂಬಿತು. ಆಸೆಯ ನೂರಾರು ಚಿಗುರಿತು. ಹೃದಯದ ಕೋಗಿಲೆ ಹಾಡತೊಡಗಿತು.

ಮದುವೆಯಾದ ಮೇಲೂ ಅಲ್ಲಿರುವುದು ನಮ್ಮಾಕೆಗೆ ಸರಿತೋರಲಿಲ್ಲವಾದ್ದರಿಂದ ಹಿರಿಯರ ಅನುಮತಿ ಪಡೆದೇ ಪೂನಾಕ್ಕೆ ವರ್ಗಾಯಿಸಿಕೊಂಡೆ. ಯಾವ ಜನ್ಮದ ಪುಣ್ಯವೊ? ಸುಶೀ ಬಸುರಿಯಾದಾಗ ಅವರೇ ಕರೆಯಿಸಿಕೊಂಡು ಮಗುವಿಗೆ ಎರಡು ತಿಂಗಳಾದ ಮೇಲೆ ಪೂನಾಕ್ಕೆ ಬಿಟ್ಟು ಹೋಗಿದ್ದರು.

ಮಗು ರಾಮು 'ಕೆ.ಜಿ.' ತರಗತಿ ಮುಗಿಸಿ ಊರಿನ ಪ್ರತಿಷ್ಠಿತ ಶಾಲೆ ಸೇರಿದ. ಸ್ವಲ್ಪವೇ ದಿನಗಳಲ್ಲಿ ಗಣೇಶನ ಕ್ಷೀರಪಾನ ನಾಡಿನುದ್ದಗಲಕ್ಕೆ ಬಹುದೊಡ್ಡ ಸುದ್ದಿಯಾಯಿತು. ಮಗನೊಂದಿಗೆ ಆತನ ಗೆಳೆಯನ ಮನೆಗೆ ಹೋಗಿ ಕಣ್ಣಾರೆ ನೋಡಿದ ಮೇಲೆ ನನ್ನ ಪೋಲೀಸು ಮನಸ್ಸಿನ ಹೆಡೆ ಎದ್ದು ನಿಂತಿತು. ಇದೇ ತರದ ವಿಗ್ರಹ ನಮ್ಮೂರಿನ ದೇವಾಲಯದಲ್ಲೂ ಇತ್ತಲ್ಲ. ಇದು ಅದೇ ಆಗಿರಬಹುದೇ? ಅಥವಾ ಅಂತಹುದೇ ಇನ್ನೊಂದು.... ಯಾವುದಕ್ಕೂ ಒಮ್ಮೆ ಊರಿಗೆ ಹೋಗಿ ಬರೋಣ........ ಎಂದು ಯೋಚಿಸುತ್ತಿದ್ದಂತೆಯೇ ದೇವಾಲಯದ ಮಹಾದ್ವಾರದಿಂದ ಪ್ರದಕ್ಷಿಣೆ ಪಥಕ್ಕೆ ಬಂದೆ. ಗರ್ಭಗುಡಿಯ ಎದುರಿನಲ್ಲಿ ನಿಂತೆ. ಹಿಂದಿನ ನೆನಪುಗಳಿಂದ ಹೃದಯ ತುಂಬಿತು. ಕೈಕಾಲುಗಳಲ್ಲಿ ಹಿತವಾದ ನಡುಕ. ಯಾರೋ ಹೊಸಬರನ್ನು ನೋಡುವಂತೆ ನನ್ನತ್ತ ನೋಡಿ ಅರ್ಚಕರು

ತೀರ್ಥ ಪ್ರಸಾದವಿತ್ತಾಗ ಹರಿವಾಣಕ್ಕೆ ಹತ್ತರ ನೋಟು ಹಾಕಿದೆ.

“ತಮ್ಮೂರು ಯಾವುದು ಸ್ವಾಮೀ?” ಎಂದಾಗ ನಾನು ಈ ಊರಿಗೆ ಹೊಸಬ. ಬೊಂಬಾಯಿಯಿಂದ ಬಂದಿದ್ದೇನೆ. ಇಲ್ಲಿಯವರು ಯಾರೋ ಒಬ್ಬರು ನೀವು ದಕ್ಷಿಣ ಕನ್ನಡಕ್ಕೆ ಹೋದರೆ ಈ ದೇವಸ್ಥಾನಕ್ಕೆ ಹೋಗಲೇಬೇಕು. ಅಷ್ಟು ಕಾರ್ಣಿಕದ ದೇವಸ್ಥಾನ ಎಂದಿದ್ದರು. ಇಲ್ಲಿ ವಿಶೇಷ ಶಕ್ತಿಯ ಗಣೇಶನ ಚಿನ್ನದ ವಿಗ್ರಹವಿದೆಯಂತಲ್ಲ” ಎಂದೆ.

“ಹಿಂದೆ ಇದ್ದುದು ಸತ್ಯ. ಆದರೆ ಮೂವತ್ತು ವರ್ಷಗಳ ಹಿಂದೆ ವರ್ಷಾವಧಿ ಜಾತ್ರೆಯ ಸಮಯದಲ್ಲಿ ಅರ್ಚಕರ ಸಹಾಯಕ್ಕೆ ಬರುತ್ತಿದ್ದ ನಾಣಿ ಎಂಬ ಹುಡುಗ ನೈರ್ಮಲ್ಯದೊಂದಿಗೆ ದೇವರ ವಿಗ್ರಹದ ಮೈಮೇಲಿನ ಎಲ್ಲಾ ಆಭರಣಗಳನ್ನು ಮಾತ್ರವಲ್ಲ ವಿಗ್ರಹವನ್ನೂ ಎಗರಿಸಿ ಒಯ್ದನಂತೆ. ಹುಡುಗನ ಹೆತ್ತವರು ಅದೇ ದುಃಖದಲ್ಲಿ ಸತ್ತೇ ಹೋದರು.”

ಸಿಟ್ಟಿನಿಂದ ರಕ್ತ ಕುದಿಯುತ್ತಿದ್ದರೂ ಅದನ್ನು ತೋರಗೊಡದೆ ‘ಆ ಹುಡುಗನನ್ನು ಹುಡುಕಿಸಲಿಲ್ಲವೆ? ಅಷ್ಟೊಂದು ಚಿನ್ನವನ್ನು ಆ ಪುಟ್ಟ ಬಾಲಕ ಏನು ಮಾಡಿರಬಹುದಪ್ಪ?’

“ಎಷ್ಟು ಹುಡುಕಿದರೂ ಆ ಬಾಲಕ ಸಿಗದಿದ್ದಾಗ ಅರ್ಚಕರೇ ಊರಿನ, ನೆರೆಯೂರಿನ ಭಕ್ತರಲ್ಲಿ ಚಂದಾ ಎತ್ತಿ ಈ ಬೆಳ್ಳಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಅಂದಿನ ಆ ಚಿನ್ನದ ಗಣೇಶನ ಸೊಂಡಿಲು ಕೂಡಾ ಕೀಲಿ ಕೊಟ್ಟರೆ. ಅತ್ತಿಂದಿತ್ತ ತಿರುಗುತ್ತಿತ್ತಂತೆ ಆ ಕೀಲಿ ಈಗಲೂ ಭಟ್ಟರ ಮನೆಯಲ್ಲಿದೆ ಎಂದರು; ಆತನ ಮಾತಿಗೆ ಸಿಟ್ಟಿನಲ್ಲಿಯೂ ನನಗೆ ನಗು ಬಂತು. ಪ್ರಯಾಣದಲ್ಲಿ ಬೆಲೆಬಾಳುವ ವಸ್ತುಗಳಿದ್ದ ಪೆಟ್ಟಿಗೆ ಕಳವಾದರೂ ಬೀಗದ ಕೈ ಇದೆಯಲ್ಲ ಇಲ್ಲೇ ಎಂಬಂತಾಯಿತು.

ನೀವು ಇನ್ನೊಂದು ಅರ್ಧ ಘಂಟೆ ಇಲ್ಲಿಯೇ ಇರಲು ತಯಾರಿದ್ದರೆ ಭಟ್ಟರ ಮನೆಗೆ ಹೋಗೋಣ. ಪರ ಊರಿನವರಿಗೆ ಅಲ್ಲಿಯೇ ಊಟದ ವ್ಯವಸ್ಥೆಯೂ ಇದೆ ಎಂದರು. ನನ್ನ ತಂಗಿ ಸುಮಿತ್ರನನ್ನು ದೂರದಿಂದಲಾದರೂ ನೋಡುವ ಆಸೆ ಪೂರೈಸಲಿಲ್ಲ. ಗುಡಿಗೆ ಪ್ರದಕ್ಷಿಣೆ ಹಾಕಿ ಕಾರ್ಯ ನಿಮಿತ್ತ ಬೇರೆಲ್ಲಿಗೋ ಹೋಗಿರಬಹುದು. ಮೂವತ್ತು ವರ್ಷಗಳ ಮೇಲೆ ಅವಳ ಗುರುತೂ ಸಿಗಲಾರದು. ಅಲ್ಲದೆ ಊರಿನವರ ದೃಷ್ಟಿಯಲ್ಲಿ ಅಪರಾಧಿಯಾದ ನಾನು ಅವಳನ್ನು ಯಾವ ಮುಖದಿಂದ ಮಾತನಾಡಿಸಬೇಕು ಅಲ್ಲವೇ?”

“ಊಟಕ್ಕೆ ಇಲ್ಲಿಯೇ ಹತ್ತಿರದಲ್ಲಿರುವ ಹೊಟೇಲಿಗೆ ಹೋಗುವೆ. ಆದರೆ ಅದರ ಮೊದಲು ಮೂರ್ತಿಯ ಕೀಲಿ ಕೈ ತೋರಿಸಿ” ಎಂದೆ. ಅಲ್ಲಿಯೇ ಹಿಂಬದಿಯಲ್ಲಿದ್ದ ಭಟ್ಟರ ಮನೆಗೆ ಹೋದಾಗ ಮಡಿ ಹೆಂಗಸೊಬ್ಬರು ಒಳಗೆ ಪೆಟ್ಟಿಗೆಯಲ್ಲಿರಿಸಿದ ಬೀಗದ ಕೈ ತಂದು ತೋರಿಸಿದರು.

“ತುಂಬಾ ಉಪಕಾರವಾಯಿತು ತಾಯಿ. ಎಷ್ಟೊಂದು ತ್ರಾಸ ತೆಗೆದುಕೊಂಡಿರಿ?” ನಿಮ್ಮ ಮಕ್ಕಳು....ಎಂದಾಗ

“ಎಲ್ಲ ಅವರವರ ಪ್ರಾರಬ್ಧ ಕರ್ಮ. ಮಗ ಈ ಪೌರೋಹಿತ್ಯದ ಕಸುಬೇ ಬೇಡವೆಂದು ಎಲ್ಲಿಯೋ ಕಾರ್ಖಾನೆ ಇರಿಸಿ ಕೈಸುಟ್ಟುಕೊಂಡ. ಎಲ್ಲವನ್ನು ಕಳೆದುಕೊಂಡು ಈಗ

ಪೂನಾದಲ್ಲಿದ್ದಾನಂತೆ. ಹೂಂ....ಮಾಡಿದ ಪಾಪ....ಯಾರನ್ನೂ ಬಿಡುವುದಿಲ್ಲ" ಮಗನ ಹೆಸರು ಗಣೇಶ ಭಟ್ಟನೆಂದೂ ಅವರಿಂದ ತಿಳಿಯಿತು. ಆದರೆ ಈಗ ಗಣೇಶನ್ ಆದುದು ಅವರಿಗೆ ಹೇಗೆ ತಿಳಿಯಬೇಕು.

"ಸರಿ, ತಾಯಿ, ಬರುವ ತಿಂಗಳು ನನ್ನ ಮನೆಯವರೊಂದಿಗೆ ಪುನಃ ಇಲ್ಲಿಗೆ ಬರುವೆ" ಎಂದಾಗ, ಆಯ್ತಪ್ಪ ಎಂದು ಕಳುಹಿಸಿ ಕೊಟ್ಟರು.

ಪೂನಾಕ್ಕೆ ಬಂದವನೇ ಮೂವತ್ತು ವರ್ಷಗಳ ಹಿಂದಿನ "ಕೇಸಿ"ನ ವಿಚಾರಣೆಗೆ ಬೇಕಾದ ಏರ್ಪಾಡು ಮಾಡಿಕೊಂಡೆ. ನನ್ನ ಇನ್ನಿಬ್ಬರು ಸಹಾಯಕ ಪೊಲೀಸರನ್ನು ಕರೆದುಕೊಂಡು ನೆಟ್ಟಗೆ ಗಣೇಶ ಭಟ್ಟರ ಮನೆಗೆ ಹೋದೆ.

ಅದೇನೋ ನಮ್ಮ ಪುಣ್ಯ ಗಣೇಶನ್ ಮನೆಯಲ್ಲಿಯೇ ಇದ್ದರು. ಗುರುತು ಸಿಗದೆ ನಮ್ಮತ್ತಲೇ ನೋಡಿದಾಗ....

"ನಾನು ಮೊನ್ನೆ ನಿಮ್ಮ ಗಣೇಶನ ವಿಗ್ರಹ ಹಾಲು ಕುಡಿಯುವುದನ್ನು ನೋಡಲು ಬಂದಿದ್ದೆ. ಆದರೆ ನೀವಿರಲಿಲ್ಲ. ದಯಮಾಡಿ ಪುನಃ ತೋರಿಸಬಹುದೇ"........ಎನ್ನುತ್ತಿದ್ದಂತೆ,

"ಏನ್ರಿ? ದೇವರನ್ನು ಎಷ್ಟು ಸಾರಿ ಪ್ರದರ್ಶಿಸಬೇಕು? ಅದು ಈಗ ಇಲ್ಲಿಲ್ಲ", ಎಂದು ಗಡುಸಾಗಿ ಮಾತನಾಡಿದರು. ನಾನು ಪೊಲೀಸು ಉಡುಪನ್ನು ಬೇಕೆಂದೇ ತೊಟ್ಟು ಕೊಂಡಿರಲಿಲ್ಲವಾಗಿ ಅವರು ನಮ್ಮನ್ನು ದಬಾಯಿಸಿರಬೇಕು.

ಸಹನೆ ಕಳೆದುಕೊಂಡ ನಾನು—

"ಸತ್ಯ ಹೇಳಿ ನಾವು ಅಪರಾಧ ಪತ್ತೆ ಇಲಾಖೆಯವನು, ದಕ್ಷಿಣ ಕನ್ನಡದ ಗಣೇಶನ ಗುಡಿಯಿಂದ ದೇವರ ಚಿನ್ನದ ಗಣೇಶ ಮತ್ತು ಗೌರಿಯರ ವಿಗ್ರಹಗಳು ಆಭರಣಗಳ ಸಮೇತ ಮೂವತ್ತು ವರ್ಷಗಳ ಹಿಂದೆ ಕಳುವಾಗಿದೆ. ಇದು ಅದೇ ವಿಗ್ರಹವೇ ಎಂದು ನೋಡ ಬೇಕು." ಎಂದೆ....

"'ಏನ್ರಿ ನಿಮ್ಮ ಮಾತು? ದಕ್ಷಿಣ ಕನ್ನಡ ಎಲ್ಲಿ? ಪೂನಾ ಎಲ್ಲಿ? ನಿಮ್ಮ ಮಾತಿನ ಅರ್ಥ ವಾಗುತ್ತಿಲ್ಲ. ನನ್ನ ಮೇಲೆ ಅಪವಾದ ಹೊರಿಸುವಿರಾ? ನಾನೀಗ ಪೊಲೀಸು ಸ್ಟೇಷನ್ನಿಗೆ ಫೋನು ಮಾಡುತ್ತೇನೆ ಜಾಗ್ರತೆ...."

"ನೀವು ಫೋನು ಮಾಡುವ ಅಗತ್ಯವಿಲ್ಲ, ನಾನೇ 'ಎಸ್.ಐ.' ನಾರಾಯಣ್, ಇವರು ನನ್ನ ಸಹಾಯಕ ಪೊಲೀಸರು .."

ಗಣೇಶ ಭಟ್ಟರು ಗಡಗಡ ನಡುಗಲು ಪ್ರಾರಂಭಿಸಿದರು. ಮೂವತ್ತು ವರ್ಷಗಳ ಮೇಲೆ......ಹೀಗಾಗಬಹುದೆಂದು ಭಾವಿಸಿಯೇ ಇರಲಿಲ್ಲ.

"ಸ....ಸ....ಸರ್....ನಾ....ನು ಅಪರಾಧಿಯಲ್ಲ, ನನ್ನ ತ....ತಂದೆಯವರು ನನಗೆ ಕೊಟ್ಟವು ಅವು. ಊರಿನಿಂದ ಎಲ್ಲಿಗಾದರೂ ದೂರ ಹೋಗಿಬಿಡು ಎಂದು." "ಸರಿ....ನೀವು ವಿಗ್ರಹಗಳೊಂದಿಗೇ ಗರ್ಭಗುಡಿಯ ಆ ದೊಡ್ಡ ಶಿಲಾ ವಿಗ್ರಹಗಳ ಮೇಲಿದ್ದ ಮಾಣಿಕ್ಯ ಹಾರ, ಚಂದ್ರ ಹಾರ, ಚಕ್ರ ಹಾರ ಕಿರೀಟ ಎಲ್ಲವನ್ನು ತನ್ನಿರಿ. ಇಲ್ಲವಾದರೆ ಗೊತ್ತಿಲ್ಲ ನಾವು ಹೇಗೆ ತರಿಸಬಲ್ಲೆವೆಂದು?" ಎಂದೆ ಮಾತ್ರವಲ್ಲ ನನ್ನ ಗುರುತಿನ ಚೀಟಿಯನ್ನು ಭಾವಚಿತ್ರ ಸಮೇತವಿತ್ತೆ.

"ದೇವರ ಆಭರಣಗಳಲ್ಲಿ ಎರಡು ಹಾರಗಳನ್ನು ಹೊರತು ಎಲ್ಲವನ್ನು ನಮಗಿತ್ತರು ಗಣೇಶ ಭಟ್ರು. ಆ ಎರಡು ಹಾರಗಳನ್ನು ಕಷ್ಟ ಕಾಲದಲ್ಲಿ ಮಾರಿದ್ದರಂತೆ. ಮಾರಿದ

ಅಂಗಡಿಯನ್ನು ತೋರಿಸಲು ಒಪ್ಪಿದರು. ನಮ್ಮೂರಿಗೆ ಹೋಗಿ ಎಲ್ಲರ ಸಮಕ್ಷಮದಲ್ಲಿ ಆಭರಣಗಳನ್ನು ಪುನಃ ದೇವರಿಗೆ ತೊಡಿಸಿ, ನನ್ನ ಮೇಲಿನ ಅಪವಾದದ ಪೊರೆ ಕಳಚಿ ಕೊಳ್ಳುವುದೇ ನನ್ನ ಏಕೈಕ ಗುರಿಯಾಗಿತ್ತು.

ಗಣೇಶ ಭಟ್ರೊಂದಿಗೆ ಪೊಲೀಸು ವ್ಯಾನ್‌ನಲ್ಲಿ ನಾನು ಹೋಗಲೇಬೇಕಿತ್ತು. ಕೈಗೆ ಸಿಕ್ಕಿದುದು ಬಾಯಿಗೆ ಬಾರದೆ ಹೋದರೆ? ಎಂಬಂತಾಗಬಾರದಲ್ಲವೆ? ಸುಶೀ ಮತ್ತು ಮಗ ರಾಮು ನಮ್ಮ ಹಿಂದೆಯೇ ಹೊರಟರು. ಗಣೇಶ ಭಟ್ಟರನ್ನು ದೇವರ ಆಭರಣಗಳೊಂದಿಗೇ ದಕ್ಷಿಣ ಕನ್ನಡದ ಪೊಲೀಸು ಇಲಾಖೆಗೆ ಒಪ್ಪಿಸಿದೆ. ವಿಗ್ರಹಗಳು ಮತ್ತು ಆಭರಣಗಳ ವಿವರಗಳನ್ನು ಒಪ್ಪಿಸಿ ರುಜು ಹಾಕಿಸಿ ಕೊಂಡೆ.

ಹೆಂಡತಿ ಮಗನೊಂದಿಗೆ ಗಣೇಶನಿಗೆ ಅಡ್ಡ ಬಿದ್ದು ನನ್ನ ಮೇಲಿನ ಅಪವಾದ ನಿವಾರಿಸಿದುದಕ್ಕಾಗಿ ವಂದಿಸಿದೆ. ನಿಜವಾಗಿಯೂ “ಆ ಗಣೇಶನ ಗುಡಿ ಬಹಳ ಕಾರ್ಣಿಕದ್ದೇ ಎಂಬುದರಲ್ಲಿ ಏನೇನೂ ಸಂಶಯವಿಲ್ಲ. ಇಲ್ಲವಾದರೆ ಮೂವತ್ತು ವರ್ಷಗಳ ಬಳಿಕ ಮಾಲಿನೊಂದಿಗೇ ಕಳ್ಳ ಸಿಗುವುದೆಂದರೆ ಸಾಮಾನ್ಯವೆ?



ಹಣ, ಹೆಸರು, ಪಾಂಡಿತ್ಯ–ಯಾವುದರಿಂದಲೂ ಲಾಭವಿಲ್ಲ, ಕಷ್ಟಗಳ ಅಭೇದ್ಯ ಕೋಟೆಗಳನ್ನು ಸೀಳಿಕೊಂಡು ನುಗ್ಗಬಲ್ಲದ್ದು ಚಾರಿತ್ರ್ಯವೊಂದೇ ಎಂಬುದು ಜ್ಞಾಪಕದಲ್ಲಿರಲಿ.

ಇಡೀ ಮಾನವಕೋಟಿಗೆ ಅನುಕಂಪ ಹಾಗೂ ಪ್ರೀತಿ ತೋರುವುದೇ ನಿಜವಾದ ಧರ್ಮ.

—ಸ್ವಾಮಿ ವಿವೇಕಾನಂದ

ವೀರಸೇನಾನಿ ಕೆ.ಎಂ. ಕಾರ್ಯಪ್ಪ

ಟಿ. ಎಸ್. ಲಲಿತ

೭೦೨, ಮೊದಲ ಮಹಡಿ, ೧೭ ನೇ ಮೇನ್

ಸರಸ್ವತಿಪುರ, ಮೈಸೂರು–೫೭೦೦೦೯



೨೮.೧.೧೯೦೦ — ೧೫.೫.೧೯೯೩

ಶಿಸ್ತು, ಸಮಯಪ್ರಜ್ಞೆ, ಪರಿಸರ ಕಾಳಜಿ, ಸಂಸ್ಕೃತಿ, ಸಭ್ಯತೆ, ರಾಷ್ಟ್ರೀಯತೆ ಈ ಎಲ್ಲವನ್ನೂ ಮೈಗೂಡಿಸಿಕೊಂಡಿದ್ದ ಭಾರತ ಸೇನೆಯ ಮಾಜಿ ವರಿಷ್ಠ ದಂಡನಾಯಕ ದಿವಂಗತ ಕೊಡೆಂಡೇರ ಮಾದಪ್ಪ ಕಾರ್ಯಪ್ಪ ಅವರ ಜನ್ಮದಿನ ಇದೇ ಜನವರಿ ೨೮ ರಂದು. ಈ ವೀರ ಸೇನಾನಿಯ ಸ್ಮರಣೆಯೇ ರೋಮಾಂಚನ. ಇಂಥ ಸುಪುತ್ರನನ್ನು ಪಡೆದ ಕನ್ನಡ ಜನನಿ ಕೃತಾರ್ಥೆ. ಭಾರತಮಾತೆ ಧನ್ಯೆ.

ವ್ಯಕ್ತಿಯೊಬ್ಬರು ಆಹ್ವಾನಿತ ಕಾರ್ಯಕ್ರಮಕ್ಕೆ ಬಂದಾಗ ಕಂಡದ್ದು ಆವರಣದ ತುಂಬಾ ಅಡ್ಡಾದಿಡ್ಡಿಯಾಗಿ ನಿಂತ ವಾಹನಗಳು. ಕಾರಿಳಿದ ಕೂಡಲೇ ಅವರು ನೇರವಾಗಿ ಕಾರ್ಯಕ್ರಮದ ಕೊಠಡಿಗೆ ಹೋಗದೆ ವಾಹನಗಳ ಬಳಿ ಹೋಗಿ ಅವುಗಳನ್ನು ವ್ಯವಸ್ಥಿತವಾಗಿ ನಿಲ್ಲಿಸತೊಡಗಿದರು. ಕಾರ್ಯಕ್ರಮ ವ್ಯವಸ್ಥಾಪಕರು ಕೂಡಲೇ ಬಂದು ವಾಹನಗಳನ್ನು ವ್ಯವಸ್ಥಿತವಾಗಿ ನಿಲ್ಲಿಸಿದ ನಂತರವೇ ಅತಿಥಿ ಕಾರ್ಯಕ್ರಮದ ಕೊಠಡಿಯೊಳಗೆ ನಡೆದದ್ದು. ಆ ವ್ಯಕ್ತಿಯೇ ಶಿಸ್ತಿನ ಸಿಪಾಯಿ ದಿ॥ ಜನರಲ್ ಕಾರ್ಯಪ್ಪ. ಭಾರತ ಸೇನೆಯ ಮಾಜಿ ವರಿಷ್ಠ ದಂಡನಾಯಕ.

ದೇಶದ ರಕ್ಷಣೆಗಾಗಿ ಇಬ್ಬರು ಮಹಾನ್ ದಂಡನಾಯಕರನ್ನು ಕೊಡುಗೆ ಇತ್ತ ಕೊಡಗು ಯೋಧರನಾಡು. ಪ್ರಕೃತಿ ಸೌಂದರ್ಯದ ಬೀಡು. ಇದೇ ಕೊಡಗಿನ ಒಂದು ಹಳ್ಳಿ ಶನಿವಾರ ಸಂತೆಯಲ್ಲಿ ಕಾರ್ಯಪ್ಪನವರ ಜನನ ೨೮-೧-೧೯೦೦ ರಂದು. ತಂದೆ ಮಾದಪ್ಪ ಶಿಕ್ಷಕ. ತಾಯಿ ಕಾವೇರಮ್ಮ. ಕೊಡಗಿನ ಕುಶಾಲನಗರ ಹಾಗೂ ವಿರಾಜಪೇಟೆಯಲ್ಲಿ ಪ್ರಾರಂಭದ ಶಿಕ್ಷಣ. ಮುಂದಿನದು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ೧೯೧೮ ರಲ್ಲಿ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸೇನಾ ಕೇಂದ್ರ ಕಛೇರಿಯಿಂದ ಭಾರತೀಯ ಸೇನೆಗೆ ಸೆಕೆಂಡ್ ಲೆಫ್ಟಿನೆಂಟ್ ತರಬೇತಿಗಾಗಿ ಆಯ್ಕೆ. ೧೯೧೯ ರ ಡಿಸೆಂಬರ್ ೧ ರಿಂದ ಮುಂದಿನ ೩೪ ವರ್ಷಗಳ ವರ್ಣಮಯ ವೃತ್ತಿ ಜೀವನದ ಪ್ರಾರಂಭ. ಮೊದಲುಗಳ ಮಜಲುಗಳನ್ನು ಹಂತ ಹಂತವಾಗಿ ಏರಿದ ಕಾರ್ಯಪ್ಪನವರ ಸೇವಾವಧಿ ವೈಶಿಷ್ಟ್ಯಪೂರ್ಣ. ೧೯೨೦ ರಲ್ಲಿ 'ನೇಪಿಯರ್ಸ್ ರೈಫಲ್ಸ್' ನೊಂದಿಗೆ ಮೆಸಪೊಟೋಮಿಯಾಕ್ಕೆ ಪ್ರಯಾಣ. ೧೯೨೫ ರಲ್ಲಿ ಲೆಫ್ಟಿನೆಂಟ್ ಆಗಿ ಮಲಯಾ, ಚೈನಾ, ಜಪಾನ್, ಯು. ಎಸ್. ಎ. ಗಳ ಸೇನೆಯ ಬಗ್ಗೆ ಅಭ್ಯಾಸ ನಡೆಸಲು ಪ್ರವಾಸ. ೧೯೩೦ ರವರೆಗೂ ಪಶ್ಚಿಮೋತ್ತರ ಗಡಿನಾಡುಗಳಲ್ಲಿ ಸೇವೆ.

೧೯೩೩ ರಲ್ಲಿ ಕ್ವೆಟ್ಟಾದ ಸ್ಟಾಫ್ ಕಾಲೇಜಿನಲ್ಲಿ ಲೆಫ್ಟಿನೆಂಟ್ ಆಗಿ ಪ್ರವೇಶಿಸಿದ ಮೊದಲ ಭಾರತೀಯ ಅಧಿಕಾರಿ ಕಾರ್ಯಪ್ಪ. ೧೯೪೧–೪೨ ರಲ್ಲಿ ಮಧ್ಯಪೂರ್ವದ ಸಿರಿಯಾ ಹಾಗೂ ಇರಾನ್‌ನಲ್ಲಿ ಕಾರ್ಯ ಮುಂದುವರಿಕೆ. ಏಪ್ರಿಲ್ ೧೯೪೨ ರಲ್ಲಿ ಇನ್‌ಫೆಂಟ್ರಿ ಬೆಟಾಲಿಯನ್'ನ ಲೆಫ್ಟಿನೆಂಟ್ ಕರ್ನಲ್ ಎನಿಸಿದ ಮೊದಲ ಭಾರತೀಯ. ೧೯೪೩–೪೪ ರಲ್ಲಿ ಇವರ ಕಾರ್ಯಕ್ಷೇತ್ರ ಬರ್ಮಾ. ೧೯೪೫ ರಲ್ಲಿ ಆರ್ಮಿ ಆರ್ಗನೈಸೇಶನ್ ಕಮಿಟಿಯ ಬ್ರಿಗೇಡಿಯರ್ ಆಗಿ ಆಯ್ಕೆ. ೧೯೪೬ ರಲ್ಲಿ ಬ್ರಿಗೇಡ್ ಕಮಾಂಡರ್. ೧೯೪೭ ರಲ್ಲಿ ಲಂಡನ್ನಿನ ಇಂಪೀರಿಯಲ್ ಡಿಫೆನ್ಸ್ ಕಾಲೇಜಿಗೆ ಆಯ್ಕೆ. ಅನಂತರ ಹೊಸದಾಗಿ ಅಸ್ತಿತ್ವಕ್ಕೆ ಬಂದ ಪಾಕಿಸ್ತಾನ-ಭಾರತದ ನಡುವೆ ಸೇನೆಯನ್ನು ವಿಭಾಗಿಸುವ 'ಪಾರ್ಟಿಶನ್ ಕಮಿಟಿ'ಗೆ ನೇಮಕ. ಭಾರತ ಬ್ರಿಟಿಷರ ದಾಸ್ಯದಿಂದ ಮುಕ್ತಿಗೊಂಡಾಗ ಕಾರ್ಯಪ್ಪ ಮೊದಲ ಭಾರತೀಯ ಮೇಜರ್ ಜನರಲ್ ಎನಿಸಿದರು. ಡಿಸೆಂಬರ್ ೧೯೪೭ ರಲ್ಲಿ ಪೂರ್ವ ಕಮಾಂಡಿನ ಜಿ.ಓ.ಸಿ.-ಇನ್-ಸಿ. ಆಗಿ ಬಡ್ತಿ. ಅನಂತರ ಭಾರತದ ಮೊಟ್ಟ ಮೊದಲ ಕಮಾಂಡರ್-ಇನ್-ಚೀಫ್ ಎನಿಸಿದರು. ೧೯೫೩ ರಲ್ಲಿ ನಿವೃತ್ತಿಯ ನಂತರವೂ ಅವರ ಆಡಳಿತ ಪ್ರತಿಭೆಯನ್ನು ಗುರುತಿಸಿದ ಸರ್ಕಾರ ೧೯೫೩-೫೬ ರವರೆಗೂ ಅವರನ್ನು ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ಗಳ ಹೈಕಮೀಷನರ್ ಆಗಿ ನಿಯುಕ್ತಗೊಳಿಸಿತು. ನಿವೃತ್ತಿಯ ೩೦ ವರ್ಷಗಳ ನಂತರವೂ ಅವರ ದಕ್ಷತೆಗೆ ಕಿರೀಟಪ್ರಾಯವಾಗಿ ಸಿಕ್ಕಿದ್ದು ಫೀಲ್ಡ್ ಮಾರ್ಷಲ್ ಪದವಿ.

ಎರಡನೆಯ ವಿಶ್ವ ಸಮರದ ಸಮಯದಲ್ಲಿ ಕಾರ್ಯಪ್ಪನವರಿಗೆ ಆರಡರ್ ಆಫ್ ದಿ ಬ್ರಿಟಿಷ್ ಎಂಪೈರ್ (ಓಬಿಇ) ಪ್ರಶಸ್ತಿ, ಅಮೆರಿಕಾದ ಅಧ್ಯಕ್ಷ ಹ್ಯಾರಿ ಟ್ರೂಮನ್‌ರಿಂದ ಆರಡರ್ ಆಫ್ ದಿ ಚೀಫ್

ಕಮಾಂಡರ್ ಆಫ್ ದಿ ಲೇಜನ್ ಆಫ್ ಮೆರಿಟ್ ಪ್ರಶಸ್ತಿ. ಪ್ರಪ್ರಥಮ ಭಾರತೀಯನಿಗೆ ಸಂದ ಗೌರವ. ೧೯೫೩ ರ ಜನವರಿಯಲ್ಲಿ ಆಗ್ರಾ ಅನಂತರ ಮಂಗಳೂರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟೋರೇಟ್ ಪದವಿಗಳ ನೀಡಿಕೆ. ಅವರಿಗೆ ಸಂದ ಹತ್ತು ಹಲವು ಗೌರವಗಳಲ್ಲಿ ಕೆಲವು. ಅತ್ಯುತ್ತಮ ಕ್ರೀಡಾಪಟುವೆನೆಸಿದ ಕಾರ್ಯಪ್ಪ ಕ್ರಿಕೆಟ್, ಹಾಕಿ, ಟೆನ್ನಿಸ್, ಸ್ಕ್ವಾಷ್ ಪೋಲೋಗಳಲ್ಲಿ ಆಸಕ್ತಿ. ಕುದುರೆ ಸವಾರಿ ಅವರ ಮೆಚ್ಚಿನ ಹವ್ಯಾಸ.

ಸಮಯ ಪ್ರಜ್ಞೆಗೆ ಮತ್ತೊಂದು ಹೆಸರು ಕಾರ್ಯಪ್ಪ. ಅವರೊಂದಿಗೆ ಸಂದರ್ಶನಕ್ಕಾಗಿ ಮೊದಲೇ ವೇಳೆ ಗೊತ್ತುಪಡಿಸಿ ಕೊಳ್ಳಬೇಕಿತ್ತು. ಸಮಯಕ್ಕೆ ಮಹತ್ವಕೊಟ್ಟು, ಅದರ ಅಪವ್ಯಯವನ್ನೆಂದೂ ಸಹಿಸದ ಕಾರ್ಯಪ್ಪ ಗೊತ್ತು ಗುರಿಯಿಲ್ಲದೆ ರಸ್ತೆಯಲ್ಲಿ ಸುತ್ತುವ ತರುಣರಿಗೆ ಒಳಿತಾಗಿ ಛೀಮಾರಿ ಹಾಕುತ್ತಿದ್ದರು. ಮಾಡಲು ಎಷ್ಟೊಂದು ಕೆಲಸವಿದೆ? ಆದರೆ ದಿನಕ್ಕೆ ೪೮ ಘಂಟೆಗಳ ಬದಲು ಕೇವಲ ೨೪ ಘಂಟೆಗಳು ಮಾತ್ರವೇ ಇದೆಯಲ್ಲ! ಎನ್ನುವ ಕಾರ್ಯಪ್ಪ ದುಡಿಮೆಯ ಬಗ್ಗೆ ಬೇಸರ ಅರಿಯದವರು. ಯುವ ಕಲ್ಯಾಣದ ಬಗ್ಗೆ ತೀವ್ರ ಆಸಕ್ತರಾಗಿ, ಯುವಕರಿಗೆ ಕೆಲಸ ಕೊಡಿಸಲು ನೆರವಾಗಿದ್ದರು. ಪ್ರತಿಭೆಯ ಬಗೆಗೆಂದೂ ರಾಜಿ ಮಾಡಿಕೊಳ್ಳಲು ಅವರು ಸಿದ್ಧರಿರಲಿಲ್ಲ. ದಂಡನಾಯಕರಾಗಿದ್ದಾಗಲೂ ಸೇನೆಯ ಯುವ ಅಧಿಕಾರಿಗಳಿಗೆ ಕರ್ತವ್ಯ ಪಾಲನೆಯ ಬಗ್ಗೆ ಬೇಕು-ಬೇಡಗಳ ಪಟ್ಟಿ ಮಾಡಿ ಕಳಿಸುತ್ತಿದ್ದು, ಆ ಪಟ್ಟಿ ಅನೇಕ ಬಾರಿ ಮರು ಮುದ್ರಣಗೊಂಡಿದೆ. ಈ ಬಗ್ಗೆ ಅವರು ಮಾಡಿರುವ ಭಾಷಣಗಳಿಗೆ ಲೆಕ್ಕವಿಲ್ಲ.

ಉಡುಪಿನ ಬಗೆಗೂ ಅಷ್ಟೇ ಶಿಸ್ತು. ಮನೆಯಲ್ಲಿ ಒಬ್ಬರೇ ಇರಲಿ, ಊಟದ ಮೇಜಿಗೇ ಬರಲಿ, ಸೂಟು ಧರಿಸಿಯೇ ಬರುತ್ತಿದ್ದು ಇತರರಿಂದಲೂ ಅದನ್ನೇ ನಿರೀಕ್ಷಿಸುತ್ತಿದ್ದರು. ಉಡುಪು, ಶಿಸ್ತು, ಸಭ್ಯತೆಯ ಬಗ್ಗೆ ಪಾಶ್ಚಾತ್ಯರ ಸಂಪ್ರದಾಯ ಇದ್ದರೂ, ಅಪ್ಪಟ ರಾಷ್ಟ್ರೀಯವಾದಿ. ಸ್ಥಳೀಯ ಸಂಸ್ಕೃತಿ, ಪರಂಪರೆಯ ಬಗ್ಗೆ ಗೌರವ. ಕೊಡವರ ಪದ್ಧತಿಯ ಪ್ರಕಾರ ಹಿರಿಯರ ಕಾಲಿಗೆ ನಮಸ್ಕರಿಸದ ಕಿರಿಯರನ್ನು ಕ್ಷಮಿಸುತ್ತಿರಲಿಲ್ಲ.

ಪ್ರಕೃತಿ ನೆಲೆವೀಡಿನಲ್ಲಿ ಬೆಳೆದ ಕಾರ್ಯಪ್ಪನವರ ಪ್ರಕೃತಿಪ್ರೇಮ ಸಹಜವಾದದ್ದೇ. ತಮ್ಮ ಜಮೀನನ್ನು ಕಾಫಿ ತೋಟವಾಗಿ ಪರಿವರ್ತಿಸಬೇಕೆನ್ನುವ ಸ್ನೇಹಿತರ ಸಲಹೆಯನ್ನು ಅಲ್ಲಿ ಇದ್ದ ಮರಗಳನ್ನು ಕಡಿಯಲು ಇಚ್ಛಿಸದ ಕಾರಣ ಅವರು ಒಪ್ಪಲಿಲ್ಲ.

ಯಾರ ಹೆಸರು ಕೇಳಿದರೆ ವೈರಿಗಳ ಎದೆ ನಡುಗುತ್ತಿತ್ತೋ ಅಂಥ ದಿಟ್ಟ ಸೇನಾನಿಯ ಗಟ್ಟಿ ಹೃದಯದಲ್ಲಡಗಿದ್ದುದು ಮಗುವಿನಂಥ ಮನಸ್ಸು. ಪ್ರತಿ ಸಂಜೆ ಮಡಿಕೇರಿಯ ಕಾನ್ವೆಂಟ್ ಬಳಿ ತಮ್ಮ ಕಾರನ್ನು ಸುತ್ತುವರಿವ ಮಕ್ಕಳಿಗೆ ಸಿಹಿ ಹಂಚಿ ಆ ಮಕ್ಕಳೊಂದಿಗೆ ಮಗುವಾಗುತ್ತಿದ್ದರು. ಅಂಚೆಚೀಟಿ ಕಲೆಹಾಕುವ ಬಗ್ಗೆ ಆಸಕ್ತರಾಗಿ, ತಯಾರಿಸಿದ ಆಲ್ಬಮ್ ಅನ್ನು, ಮಕ್ಕಳಲ್ಲೂ ಆ ಆಸಕ್ತಿ ಬೆಳೆಸುವ ಸಲುವಾಗಿ, ಶಾಲೆಗಳಿಗೆ ಕಳಿಸಿಕೊಡುತ್ತಿದ್ದರು.

ದೇಶರಕ್ಷಣೆಗಾಗಿ ಕೋವಿಯ ನಳಿಗೆಯ ಮೇಲೆ ಬೆರಳಿಟ್ಟು ಜೀವನ ಸಾಗಿಸುವ

ರಾದರೂ, ಮಾನವೀಯ ಮೌಲ್ಯಗಳಿಂದ ವಿಮುಖರಾದವರಲ್ಲ ಕಾರ್ಯಪ್ಪ. ಉತ್ತಮ ಗುರಿಕಾರರೆನಿಸಿ, ಒಮ್ಮೆ ತಾವು ಹೊಡೆದ ಜಿಂಕೆಯ ಕಣ್ಣುಗಳಲ್ಲಿನ ಅಸಹಾಯಕತೆ ಅವರ ಮನ ಕಲಕಿತು. ಮತ್ತೆಂದೂ ಅವರು ಪ್ರಾಣಿಗಳ ಬೇಟೆಯಾಡಲಿಲ್ಲ. ಅನಂತರದ ದಿನಗಳಲ್ಲಿ ಅವರು ಸಸ್ಯಾಹಾರಿಗಳಾಗಿಯೇ ಉಳಿದರು. ೧೯೬೦ರಲ್ಲಿ ದೇಶದಲ್ಲಿ ಆಹಾರ ಕೊರತೆ ಉಂಟಾದಾಗ ಒಪ್ಪೊತ್ತಿನ ಊಟ ತ್ಯಜಿಸಿದರು. ಸಕ್ಕರೆಯ ಕೊರತೆಯ ದಿನಗಳಲ್ಲಿ ಸಕ್ಕರೆ ಇಲ್ಲದ ಕಾಫಿ ಕುಡಿಯುತ್ತಿದ್ದರು. ಖಾಸಗಿ ಜೀವನದಲ್ಲಿ ಅನಗತ್ಯ ವೆಚ್ಚಗಳಿಗೆ ಅವಕಾಶ ಕೊಡದೆ ಸಾಧ್ಯವಿದ್ದಷ್ಟೂ ಉಳಿಸಿ ದೇಶಕ್ಕೆ ಒಪ್ಪಿಸಬೇಕೆನ್ನುವುದು ಅವರ ಅಭಿಲಾಷೆ. ಆದರೆ ಇವರ ಕೆಲವು ನಿಷ್ಠುರ ತತ್ವಗಳು ಅವರ ಖಾಸಗಿ ಜೀವನದಲ್ಲಿ ಬಿರುಕು ತಂದುವು. ವಿವಾಹವು ವಿಚ್ಛೇದನದಲ್ಲಿ ಕೊನೆಗೊಂಡಿತು. ಮಡದಿ ಮುತ್ತಮ್ಮ ರಸ್ತೆ ಅಪಘಾತವೊಂದರಲ್ಲಿ ನಿಧನರಾದರು.

ದೇಶ, ಸೇನೆ, ಸೈನಿಕರ ಬಗ್ಗೆ ಅತ್ಯಂತ ಅಭಿಮಾನ ಕಾರ್ಯಪ್ಪನವರಿಗೆ. ಇವರ ಮಂಚದ ಪಕ್ಕಕ್ಕೆ ಭಾರತೀಯ ಯೋಧನೊಬ್ಬನ ಮೂರ್ತಿ ಯಾವಾಗಲೂ ಇರುತ್ತಿತ್ತಂತೆ. ತಾವು ಹೋದಲ್ಲೆಲ್ಲಾ ಆ ಮೂರ್ತಿಯನ್ನು ಕೊಂಡೊಯ್ಯುತ್ತಿದ್ದ ಕಾರ್ಯಪ್ಪ 'ಈತ ನನ್ನ ಆರಾಧ್ಯ ದೈವ' ಎನ್ನುತ್ತಿದ್ದರು. ಯೋಧರು ಯಾವ ದೇಶದವರೇ ಇರಲಿ, ಅವರ ಬಗ್ಗೆ ಸಮಾನ ಗೌರವ. ಆಸ್ಟ್ರೇಲಿಯಾದಲ್ಲಿ ಹೈಕಮೀಷನರ್ ಆಗಿದ್ದ ಸಮಯ. ಪ್ರತಿ ದಿನ ವಾಯು ವಿಹಾರಕ್ಕೆ ಹೋದಾಗ ಹಲವು ಸಮಾಧಿಗಳನ್ನವರು ಕಾಣುತ್ತಿದ್ದರು. ಗಿಡ ಬಳ್ಳಿ ಬೆಳೆದು ಶಿಥಿಲವಾಗಿದ್ದ ಆ ಸಮಾಧಿಗಳು ಸೈನಿಕರದೆಂದು ತಿಳಿದ ಕಾರ್ಯಪ್ಪ ಒಮ್ಮೆ ತೋಟಗಾರಿಕೆಗೆ ಬೇಕಾದ ಸಲಕರಣೆಗಳನ್ನು ತಂದು, ಆ ಗಿಡ ಗುಟೆಗಳನ್ನೆಲ್ಲ ಕತ್ತರಿಸಿ ಸುತ್ತಲಿನ ಜಾಗವನ್ನೆಲ್ಲ ಶುಚಿಗೊಳಿಸಿದರು. ಆ ವೇಳೆಗೆ ಅಲ್ಲಿಗೆ ಬಂದ ತರುಣನೊಬ್ಬ ನಿಂತಿದ್ದ ಕಾರಿನ ಮೇಲೆ ಹಾರುತ್ತಿದ್ದ ಬಾವುಟವನ್ನು ನೋಡಿ ಸ್ಮಾರಕದ ಬಳಿ ಬಂದು ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ತಾನೊಬ್ಬ ಆಸ್ಟ್ರೇಲಿಯನ್ ಸೇನಾಬಲದ ಕ್ಯಾಪ್ಟನ್ ಎಂದು ಪರಿಚಯಿಸಿಕೊಂಡ. ಆ ವ್ಯಕ್ತಿಯ ಬಗ್ಗೆ ವಿಚಾರಿಸಿದ. ಆತ ತನ್ನ ಗುರುತಿನ ಚೀಟಿ ತೋರಿಸಿದಾಗ ಕ್ಯಾಪ್ಟನ್ ದಂಗಾದ. ತಾನು ಮಾತನಾಡುತ್ತಿದ್ದುದು ಭಾರತದ ಮಾಜಿ ದಂಡನಾಯಕರಾಗಿ, ಈಗ ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮೀಷನರ್ ಆಗಿರುವ ಕಾರ್ಯಪ್ಪ! ಸೇನೆ ಸೈನಿಕರನ್ನು ತನ್ನ ಸ್ವಂತ ಕುಟುಂಬದವರಂತೆ ಪ್ರೀತಿಸಿದ ಕಾರ್ಯಪ್ಪ ಮೃತ ಸೈನಿಕರ ಬಗ್ಗೆಯೂ ಅಷ್ಟೇ ಗೌರವ ತೋರುತ್ತಿದ್ದರು. ಇವರ ಬಗ್ಗೆ ಮೆಚ್ಚಿದ ಆಸ್ಟ್ರೇಲಿಯಾ ಸರ್ಕಾರ ಅವರ ಹೆಸರಿನಲ್ಲೊಂದು ವಿಶೇಷ ಅಂಚೆ ಚೀಟಿ ಮುದ್ರಿಸಿತು!

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವಕ್ಕೆ ಆಹ್ವಾನಿತರಾಗಿದ್ದರು ಫೀಲ್ಡ್ ಮಾರ್ಷಲ್ ೭೦ರ ಕಾರ್ಯಪ್ಪ. ಭಾಷಣ ಮುಗಿಸಿದ ನಂತರ ವಿದ್ಯಾರ್ಥಿಗಳಿಗೆ ಜೈ ಹಿಂದ್ ಎನ್ನಲು ಹೇಳಿದರು. ವಿದ್ಯಾರ್ಥಿಗಳ ಪ್ರತಿಕ್ರಿಯೆಯಲ್ಲಿ ಉತ್ಸಾಹ ಕಾಣಲಿಲ್ಲ. ಪ್ರತಿ ವಿದ್ಯಾರ್ಥಿಯೂ ಎತ್ತರದ ಸ್ವರದಲ್ಲಿ 'ಜೈ ಹಿಂದ್' ಎಂದು ಉಚ್ಛರಿಸುವವರೆಗೂ ತಾವು ಕೊಠಡಿಯಾಚೆ ಹೋಗುವುದಿಲ್ಲವೆಂದರು. ಮರುಕ್ಷಣವೇ

ಮೂರು ನಿಮಿಷಗಳಾದರೂ ನಿಲ್ಲದ ಜೈಕಾರ ಕೊಠಡಿಯ ಮೂಲೆ ಮೂಲೆಗಳಿಂದ ಪ್ರತಿಧ್ವನಿಸಿತು. ಅವರಿಗಾದ ಸಂತಸಕ್ಕೆ ಮಿತಿ ಇಲ್ಲವಾಗಿತ್ತು.

ನಿವೃತ್ತಿಯ ಅನಂತರದ ದಿನಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿ, ಕೊಡಗಿನ ಅವರ ಹೆಸರಾಂತ ಬಂಗಲೆ 'ರೋಷನಾರ' ದಲ್ಲೇ ಕಳೆಯಿತು. ಸ್ವಾತಂತ್ರ್ಯವೇ ಉಸಿರಾದ ಅವರಿಗೆ ಇಳಿವಯಸ್ಸಿನಲ್ಲೂ ತಮ್ಮ ಕೆಲಸಗಳಿಗಾಗಿ ಇತರರ ಸಹಾಯ ಪಡೆಯುವುದು ಇಷ್ಟವಾಗದ ವಿಷಯ. ಬಾಳಿನ ಒಂಟಿತನದ ಅಸಹನೀಯತೆಯೂ ಅವರ ತತ್ವಗಳಿಗಡ್ಡ ಬರಲಿಲ್ಲ. ಅನಾರೋಗ್ಯದ ನಿಮಿತ್ತ ಬೆಂಗಳೂರಿನ ಹೈಕಮಾಂಡ್ ಆಸ್ಪತ್ರೆಯಲ್ಲಿ ಕಾಲ ಕಳೆಯುತ್ತಿದ್ದಾಗ ಬೇಸರ ನೀಗಿಸಲು ಆಸ್ಪತ್ರೆಯ ಅಧಿಕಾರಿಗಳು ಅವರ ಕೊಠಡಿಯಲ್ಲಿ ಟಿವಿಯೊಂದನ್ನಿರಿಸಿದಾಗ ಬೇರಾರಿಗೂ ಇಲ್ಲದ ಸೌಲಭ್ಯ ತನಗೊಬ್ಬನಿಗೆ ಮಾತ್ರ ಬೇಡವೆಂದು ಅದನ್ನು ತೆಗೆಸಿದರು.

ಅವರ ಅಂತಿಮ ದಿನಗಳಲ್ಲಿ ಬದಲಾಗುತ್ತಿದ್ದ ಬದುಕಿನ ಮೌಲ್ಯಗಳು ಅವರನ್ನು ನಿರಾಶರನ್ನಾಗಿ ಮಾಡಿದ್ದವು. "ಇಂದಿನ ಪ್ರಪಂಚ ನನ್ನಂಥ ವ್ಯಕ್ತಿಗಲ್ಲ, ನನ್ನ ಜೀವನದ ತತ್ವಗಳು ಈ ಜನಾಂಗಕ್ಕೆ ಸರಿಹೊಂದುವಂಥವಲ್ಲ" ಎನ್ನುತ್ತಿದ್ದರು.

ಭಾರತಕ್ಕೆ ಸುಭದ್ರ ಸೇನೆಯ ಅಗತ್ಯವನ್ನು ಒತ್ತಿಹೇಳಿ ಅದಕ್ಕೊಂದು ಭದ್ರ ಬುನಾದಿ ಹಾಕಿದ್ದರೂ "ಇಲ್ಲಾಗಲೀ, ಎಲ್ಲಾಗಲೀ ಎಂದೆಂದೂ ಯುದ್ಧ ನಡೆಯದಿರಲಿ" ಎಂದು ಹಾರೈಸಿದ ಕಾರ್ಯಪ್ಪ ಉದಾತ್ತ ಗುಣಗಳ ಪ್ರತೀಕ. ತೀರಾ ಇತ್ತೀಚೆಗೆ, ಅಮೆರಿಕಾ ಬ್ರಿಟನ್‌ಗಳು ಇರಾಕಿನ ಮೇಲೆ ಯುದ್ಧ ಸಾರಿದವು. ಯುದ್ಧದಿಂದಾದ ಜೀವಹಾನಿ, ನೋವು, ನರಳಿಕೆ ಕಂಡವರ ಹೃದಯ ಕರಗಿಸುವಂತಿತ್ತು. ಈ ಸಂದರ್ಭದಲ್ಲಂತೂ ಕಾರ್ಯಪ್ಪನವರ ಕಳಕಳಿಯ ಹಾರೈಕೆ ತೀರಾ ಪ್ರಸ್ತುತ. ಯೋಧನಾಗಿ ಹಾಗೂ ಆಡಳಿತಗಾರರಾಗಿ ಹೆಸರು ಮಾಡಿದ ಕಾರ್ಯಪ್ಪ ಸಭ್ಯತೆ, ಸುಸಂಸ್ಕೃತಿ, ಹಾಸ್ಯ ಜ್ಞಾನ, ಶೌರ್ಯ, ಶಿಸ್ತು ಹಾಗೂ ಘನತೆಗಾಗಿ ಜನ ಮನದ ನೆನಪಿನಲ್ಲುಳಿದವರು. ದೇಶಪ್ರೇಮಿ ಬದುಕಿದ್ದಾಗಲೇ ದಂತಕಥೆ ಎನಿಸಿ, ಎಲ್ಲಕ್ಕೂ ಮಿಗಿಲಾಗಿ ಪರಿಪೂರ್ಣ ಎನಿಸಿ, ೯೪ ವರ್ಷಗಳ ಶಿಸ್ತಿನ ಜೀವನ ನಡೆಸಿ ೧೯೯೩ ರ ಮೇ ೧೫ ರಂದು ಕಾರ್ಯಪ್ಪ ನಿಧನರಾದಾಗ ಇತಿಹಾಸದ ಅಧ್ಯಾಯವೊಂದು ಕೊನೆಗೊಂಡಿತ್ತು. ಯುವಕರಿಗೆ ಸ್ಫೂರ್ತಿಯ ಸೆಲೆಯಾಗಿ, ಭಾರತೀಯ ಸೇನೆ ಹಾಗೂ ನಾಗರಿಕರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವರು ಕಾರ್ಯಪ್ಪ.

ಪ್ರತಿಯೊಂದು ಸುಖದ ಅನಂತರ ದುಃಖ ಬಂದೇ ಬರುತ್ತದೆ. ಅವು ದೂರದಲ್ಲಿರಬಹುದು ಅಥವಾ ಹತ್ತಿರದಲ್ಲಿರಬಹುದು.

—ಸ್ವಾಮಿ ವಿವೇಕಾನಂದ

ಅಡುಗೆ ಮನೆಯಲ್ಲಿ ವಿಜ್ಞಾನ

ಜಿ. ವೈದೇಹಿ

೩೫೪, ನವಿಲು ರಸ್ತೆ, ಕುವೆಂಪುನಗರ
ಮೈಸೂರು ೫೭೦೦೨೩

ಪಾಕಕಲೆ ನಾಗರಿಕತೆಯು ಒಂದು ವಿಶಿಷ್ಟ ಕೊಡುಗೆ—ನೈಸರ್ಗಿಕ ವಸ್ತುಗಳಿಂದ ಸ್ವಾದಿಷ್ಟ ಆಕರ್ಷಕ ಪದಾರ್ಥಗಳ ತಯಾರಿಕೆ ಇದು. ನಿಸರ್ಗದಿಂದ ತೀರ ದೂರಸರಿಯುತ್ತಿರುವ ಈ ಕಲೆಯನ್ನು ವರ್ಧಿಸುವುದು ಸಾಧ್ಯವೇ? 'ಅಡುಗೆ ಮನೆಯಲ್ಲಿ ವಿಜ್ಞಾನ' ಎನ್ನುತ್ತದೆ ಸಾಧ್ಯ!

'ಅಡುಗೆ ಒಂದು ಕಲೆ' ಎಂಬುದು ಸಾಮಾನ್ಯ ಹೇಳಿಕೆ. ಆದರೆ ಅದಕ್ಕೊಂದು ವಿಜ್ಞಾನದ ಬುನಾದಿ ಇದ್ದಲ್ಲಿ ಆಹಾರದ ಪೌಷ್ಟಿಕಾಂಶಗಳನ್ನು ಉಳಿಸಿಕೊಂಡು ಅಡುಗೆ ಮಾಡಬಹುದು. ಅನೇಕ ಸ್ತ್ರೀಯರು ಅನೇಕ ವರ್ಷಗಳಿಂದ ಅಡುಗೆ ಮಾಡುತ್ತಿದ್ದರೂ ಅದರ ವಿಜ್ಞಾನದ ಬಗ್ಗೆ ಹೆಚ್ಚು ತಿಳುವಳಿಕೆಯನ್ನು ಹೊಂದಿರುವುದಿಲ್ಲ.

ನಾವು ಕೆಲವು ಪದಾರ್ಥಗಳನ್ನು ಬೇಯಿಸಿ ತಿನ್ನುತ್ತೇವೆ. ಹಣ್ಣು, ಸೌತೆಕಾಯಿಯಂತಹ ಕೆಲವು ತರಕಾರಿಗಳು ಮತ್ತು ಮೊಳಕೆಯೊಡೆದ ಕಾಳುಗಳನ್ನು ಹಸಿಯಾಗಿಯೇ ತಿನ್ನುತ್ತೇವೆ. ಆಹಾರ ಪದಾರ್ಥಗಳನ್ನು ಬೇಯಿಸುವುದರಿಂದ ಅವುಗಳ ರಾಸಾಯನಿಕ ರಚನೆ ಬದಲಾಗಿ ಪೌಷ್ಟಿಕ ಮೌಲ್ಯವೂ ಬದಲಾಗುತ್ತದೆ. ಆದ್ದರಿಂದ ಕೆಲವು ಪದಾರ್ಥಗಳನ್ನು ಬೇಯಿಸುವಾಗ ಎಚ್ಚರಿಕೆಯಿಂದಿರಬೇಕಾಗುತ್ತದೆ. ವೈಜ್ಞಾನಿಕವಾಗಿ ಅಡುಗೆ ಮಾಡುವುದರಿಂದ ಪದಾರ್ಥಗಳ ಪೌಷ್ಟಿಕ ಮೌಲ್ಯವನ್ನು ಗಣನೀಯವಾಗಿ ಉಳಿಸಬಹುದಾಗಿದೆ. ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ವಿಧಾನವೂ ಅವುಗಳ ಪೌಷ್ಟಿಕತೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ.

ಆಹಾರ ಧಾನ್ಯವನ್ನು ವರ್ಷಕಾಲ ಸಂಗ್ರಹಿಸಿಡುವುದು ನಮ್ಮ ದೇಶದಲ್ಲಿ ಹಿಂದಿನಿಂದಲೂ ಬಂದಿರುವ ಪದ್ಧತಿ. ಸಂಗ್ರಹಿಸಿಟ್ಟ ಧಾನ್ಯ ಹೊಸ ಧಾನ್ಯಕ್ಕಿಂತ ಚೆನ್ನಾಗಿ ಬೇಯುತ್ತದೆ. ಹೆಚ್ಚು ಕಾಲ ಸಂಗ್ರಹಿಸಿಡುವುದರಿಂದ ಧಾನ್ಯಗಳು ನೀರಿನಂಶವನ್ನು ಪೂರ್ತಿಯಾಗಿ ಕಳೆದುಕೊಂಡಿರುತ್ತವೆ. ಅಂಥ ಧಾನ್ಯಗಳು ಬೇಯುವಾಗ ಎರಡರಷ್ಟು ನೀರನ್ನು ಹೀರಿಕೊಂಡು ಮೃದುವಾಗುವುದಲ್ಲದೆ ಒಂದಕ್ಕೊಂದು ಅಂಟಿಕೊಳ್ಳದೆ ನೋಡಲು ಅಂದವಾಗಿಯೂ ಕಾಣುತ್ತವೆ.

ಅಕ್ಕಿಯನ್ನು ಯಂತ್ರದಲ್ಲಿ ಮೆರುಗು ಮಾಡುವುದರಿಂದ ಜೀವಸತ್ವ 'ಬಿ' ನಾಶವಾಗಿರುತ್ತದೆ. ಅಲ್ಲದೆ ಅಡುಗೆ ಮಾಡುವ ಮೊದಲು ಅಕ್ಕಿಯನ್ನು ತೊಳೆಯುವುದರಿಂದಲೂ ಶೇಕಡಾ ೩೩ ರಷ್ಟು ಜೀವಸತ್ವ

ಗಳು ನಾಶವಾಗುತ್ತವೆ. ಆದ್ದರಿಂದ ಜೀವ ಸತ್ವಗಳನ್ನು ರಕ್ಷಿಸಿಕೊಳ್ಳಲು ಅಕ್ಕಿಯನ್ನು ಉಜ್ಜಿ ತೊಳೆಯಬಾರದು. ಅನ್ನ ಬೇಯಿಸುವ ವಿಧಾನವೂ ಪೋಷಕಾಂಶಗಳು ನಷ್ಟವನ್ನು ನಿರ್ಧರಿಸುತ್ತದೆ. ಅಕ್ಕಿ ಜೊತೆ ಹೆಚ್ಚು ನೀರನ್ನಿಟ್ಟು ಬೇಯಿಸಿದನಂತರ ನೀರನ್ನು ಬಸಿದರೆ ಅಕ್ಕಿಯಲ್ಲಿರುವ ಥೈಯಮಿನ್ ಮತ್ತು ಜೀವಸತ್ವ 'ಬಿ' ಶೇಕಡಾ ೩೩ರಷ್ಟು ನಾಶವಾಗುತ್ತದೆ. ಆದ್ದರಿಂದ ನೀರು ಎಷ್ಟು ಬೇಕೋ ಅಷ್ಟುಮಾತ್ರ ಇಡುವುದರಿಂದ ಆಗುವ ನಷ್ಟವನ್ನು ತಪ್ಪಿಸಬಹುದು.

ಅನ್ನ ಸುಲಭವಾಗಿ ಜೀರ್ಣವಾಗುವ ಪದಾರ್ಥ. ಆದರೆ ಬೇಳೆಯ ಜೊತೆ ತಿಂದಾಗ ರೋಗದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತದೆ. ಇಂಥ ಹವರಿಗೆ ಹಾಲು ಮೊಸರು ಅಥವಾ ಮಜ್ಜಿಗೆಯ ಜೊತೆ ಅನ್ನ ಕೊಡುವುದರಿಂದ ಸುಲಭವಾಗಿ ಜೀರ್ಣಿಸಿಕೊಳ್ಳಬಹುದು.

ಭಾರತದಲ್ಲಿ ಹೆಚ್ಚು ಜನಗಳಿಗೆ ದೊರಕುವ ಹಾಲು ಯಾವಾಗಲೂ ದೋಷಮುಕ್ತ ವಾಗಿರುವುದಿಲ್ಲ. ಆದ್ದರಿಂದ ಹಾಲನ್ನು ಕುದಿಸಿದನಂತರ ಕುಡಿಯುವುದೇ ಕ್ಷೇಮ. ಹೀಗೆ ಮಾಡುವುದರಿಂದ ಜೀವಸತ್ವಗಳು ನಾಶವಾಗುತ್ತವೆಂಬ ಆಕ್ಷೇಪಣೆಯೂ ಇದೆ. ಆದರೆ ಕುದಿಸುವುದರಿಂದ ರೋಗಾಣುಗಳು ನಾಶವಾಗುತ್ತವೆ. ಅಲ್ಲದೆ ಹಾಲಿನಲ್ಲಿರುವ ಲ್ಯಾಕ್ಟಿಕ್ ಆಮ್ಲದ ಜೀವಾಣುಗಳೂ ನಾಶ ವಾಗುವುದರಿಂದ ಹಾಲನ್ನು ಹೆಚ್ಚುಕಾಲ ಕೆಡದಂತೆ ಇಡಬಹುದು. ಹಾಲಿನಲ್ಲಿರುವ ಕೇಸಿನ್ ಎಂಬ ಪ್ರೋಟೀನನ್ನೂ ಹೆಚ್ಚಾಗಿ ಜೀರ್ಣಿಸಿಕೊಳ್ಳಬಹುದು. ಕುದಿಸಿದ ಹಾಲಿನ ಕೇಸಿನ್‌ಗಿಂತ ಹಸಿಹಾಲಿನ ಕೇಸಿನ್ ಅನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಕುದಿಸಿದ ಹಾಲನ್ನು ತಂಪುಮಾಡಿದರೆ ಗಟ್ಟಿಯಾದ ಕೆನೆ ಮೇಲೆ ತೇಲುತ್ತದೆ. ಹಾಲಿನಲ್ಲಿರುವ ಕೊಬ್ಬನ್ನು ಶೇಕಡಾ ೭೦ರಷ್ಟು ಸುಲಭ ವಾಗಿ ಬೇರ್ಪಡಿಸಬಹುದು. ಹಾಲನ್ನು ಕುದಿಸುವುದರಿಂದ ಮೊಸರುಮಾಡುವ ಯೀಸ್ಟ್ ಕೋಶಗಳು ಅದರಲ್ಲಿ ಬೆಳೆಯಲು ಯುಕ್ತವಾತಾವರಣ ಉಂಟಾಗುತ್ತದೆ.

ಬೇಯಿಸಿದ ಮೊಟ್ಟೆಗಿಂತ ಹಸಿಮೊಟ್ಟೆ ಯಲ್ಲಿ ಹೆಚ್ಚು ಪೋಷಕಾಂಶವಿದೆ ಎಂಬುದು ಅನೇಕ ಜನರ ನಂಬಿಕೆ. ಇದು ತಪ್ಪು ತಿಳು ವಳಿಕೆ. ಏಕೆಂದರೆ ಮೊಟ್ಟೆಯ ಬಿಳಿ ಭಾಗ ದಲ್ಲಿರುವ ಜೀರ್ಣವಿರೋಧ ಅಂಶ ಕಾಯಿಸು ವುದರಿಂದ ನಾಶವಾಗುತ್ತದೆ. ಮೊಟ್ಟೆಯನ್ನು ಬೇಯಿಸದೆ ಹಾಗೆಯೇ ತಿಂದರೆ ಜೀರ್ಣ ವಾಗದ ಬಿಳಿಭಾಗ ಮಲದಲ್ಲಿ ಹೊರಬರು ತ್ತದೆ.

ಮಾಂಸವನ್ನು ಸಾಮಾನ್ಯ ಉಷ್ಣತೆಯಲ್ಲಿ ಒಂದು ದಿನಕ್ಕಿಂತ ಹೆಚ್ಚು ಸಂಗ್ರಹಿಸಿಡಲು ಆಗದು. ಏಕೆಂದರೆ ಅದು ಬ್ಯಾಕ್ಟೀರಿಯಗಳ ಆಕ್ರಮಣದಿಂದಾಗಿ ಕೊಳೆಯಲು ಆರಂಭ ವಾಗುತ್ತದೆ. ಆದ್ದರಿಂದ ಮಾಂಸವನ್ನು ತಂಪುಪೆಟ್ಟಿಗೆಯ ಶೈತ್ಯಕಾರಿಯಲ್ಲಿಟ್ಟು ಸಂಗ್ರಹಿಸಬೇಕು. ಮಾಂಸ ಬೇಯುವಾಗ ಸ್ನಾಯು ತಂತುಗಳ ಪ್ರೋಟೀನ್ ಗರಣೆ ಗಟ್ಟುತ್ತದೆ ಮತ್ತು ಸ್ನಾಯು ಸಂಯೋಜಕ ಅಂಗಾಂಶ ಜಿಲೆಟಿನ್ ಆಗಿ ಪರಿವರ್ತನೆಯಾಗು ತ್ತದೆ. ಕೊಬ್ಬು ಉಷ್ಣತೆಗೆ ಅನುಸಾರವಾಗಿ ವಿವಿಧ ಹಂತಗಳಲ್ಲಿ ಕರಗುತ್ತದೆ. ಕರಿಯುವು ದರಿಂದಲೂ ಮಾಂಸದಲ್ಲಿರುವ ಕೊಬ್ಬು ಕರಗುತ್ತದೆ. ಹುರಿಯುವುದರಿಂದ ಶೇಕಡಾ ೬೦ ರಷ್ಟು ನೀರು ಕಡಿಮೆಯಾಗುತ್ತದೆ. ಹೀಗೆ

೩೦ ಗ್ರಾಂ ಬೇಯಿಸಿದ ಮಾಂಸವು ಅದೇ ತೂಕದ ಹಸಿ ಮಾಂಸಕ್ಕಿಂತ ಹೆಚ್ಚು ಪೌಷ್ಟಿಕಾಂಶವನ್ನು ಹೊಂದಿರುತ್ತದೆ.

ಸಮುದ್ರ ಮತ್ತು ನದಿ ತೀರದಲ್ಲಿ ವಾಸಿಸುವ ಹೆಚ್ಚು ಜನರು ಮೀನು ತಿನ್ನುವವರಾಗಿರುತ್ತಾರೆ. ಮೀನನ್ನು ಸರಿಯಾಗಿ ಸಂಗ್ರಹಮಾಡದಿದ್ದರೆ ಬಹಳ ಬೇಗ ಕೆಟ್ಟು ಹೋಗುತ್ತದೆ. ಸರಿಯಾಗಿ ಸಂಗ್ರಹ ಮಾಡದಿರುವ ಮೀನನ್ನು ತಿನ್ನುವುದರಿಂದ ಹೊಟ್ಟೆ ನೋವು ಮತ್ತು ಭೇದಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣ. ಮೀನಿನ ಪೌಷ್ಟಿಕಾಂಶ (ಕ್ಯಾಲೊರಿ)ವನ್ನೂ, ಜೀವಸತ್ವ ಮತ್ತು ಖನಿಜಲವಣವನ್ನೂ ಉಳಿಸಿಕೊಳ್ಳುವ ಉತ್ತಮ ವಿಧಾನವೆಂದರೆ ಅದನ್ನು ಉಗಿಯಲ್ಲಿ ಬೇಯಿಸುವುದು. ಮೀನನ್ನು ನೀರಿನಲ್ಲಿ ಕುದಿಸಿ ಆ ನೀರನ್ನು ಚೆಲ್ಲುವುದರಿಂದ ಅಧಿಕ ಪೌಷ್ಟಿಕಾಂಶವು ನಷ್ಟವಾಗುತ್ತದೆ. ವಿನೆಗರ್‌ನಲ್ಲಿ ಬೇಯಿಸುವುದರಿಂದ ಮೂಳೆಗಳು ಮೃದುವಾಗಿ ಹೆಚ್ಚು ಕ್ಯಾಲ್ಸಿಯಮ್ ದೊರೆಯುತ್ತದೆ. ಹುರಿದ ಮೀನಿನಲ್ಲಿ ಕೊಬ್ಬು ಹಾಗೆಯೇ ಇರುವುದರಿಂದ ಅದರಲ್ಲಿ ಕ್ಯಾಲೊರಿ ಹೆಚ್ಚಾಗಿದ್ದು ಸ್ವಾದ ನಷ್ಟವಾಗಿರುವುದಿಲ್ಲ.

ಹಸಿಬೇಳೆಕಾಳುಗಳು ಚೆನ್ನಾಗಿ ಜೀರ್ಣವಾಗುವುದಿಲ್ಲ. ಏಕೆಂದರೆ ನಮ್ಮ ಜೀರ್ಣಾಂಗ ವ್ಯೂಹದಲ್ಲಿ ಪ್ರೋಟೀನನ್ನು ಜೀರ್ಣಿಸಿಕೊಳ್ಳಲು ಉತ್ಪತ್ತಿಯಾಗುವ ಪೆಪ್ಸಿನ್ ಎಂಬ ಕಿಣ್ವದ ಉತ್ಪಾದನೆಯನ್ನು ತಡೆಗಟ್ಟುವ ಅಂಶ ಬೇಳೆಕಾಳುಗಳಲ್ಲಿ ಇರುತ್ತದೆ. ಬೇಳೆಯನ್ನು ಬೇಯಿಸುವುದರಿಂದ ಈ ಅಂಶ ನಾಶವಾಗಿ ಜೀರ್ಣಕ್ರಿಯೆಯು ಸುಲಭವಾಗುತ್ತದೆ. ಮೊಳಕೆ ಕಟ್ಟಿದ ಕಾಳುಗಳಲ್ಲಿ ಕೋಶಬೆಳವಣಿಗೆಗೆ ಅಗತ್ಯವಾದ ಕಿಣ್ವಗಳು ಹೆಚ್ಚಾಗಿರುವುದರಿಂದ ಸ್ವಲ್ಪ ಪ್ರಮಾಣದಲ್ಲಿ ದಿನವೂ ಉಪಯೋಗಿಸುವುದು ಆರೋಗ್ಯಕ್ಕೆ ಲಾಭಕರ.

ಇತರ ಜೀವಸತ್ವಗಳಿಗಿಂತ 'ಸಿ' ಜೀವಸತ್ವ ಬಹಳ ಸುಲಭವಾಗಿ ನಷ್ಟವಾಗುತ್ತದೆ. ತರಕಾರಿಗಳನ್ನು ಅತಿ ಸಣ್ಣಗೆ ಕತ್ತರಿಸುವುದು, ಕತ್ತರಿಸಿದ ನಂತರ ತೊಳೆಯುವುದು, ಹೆಚ್ಚು ನೀರಿನೊಂದಿಗೆ ಬೇಯಿಸಿ ಆ ನೀರನ್ನು ಚೆಲ್ಲುವುದು, ಕಡಿಮೆ ಉರಿಯಲ್ಲಿ ನಿಧಾನವಾಗಿ ಬೇಯಿಸುವುದು, ಅತಿಯಾಗಿ ಬೇಯಿಸುವುದು ಮತ್ತು ಊಟಮಾಡುವವರೆಗೂ ತರಕಾರಿಯನ್ನು ಬಿಸಿಯಾಗಿಯೇ ಇಟ್ಟಿರುವುದರಿಂದ ಜೀವಸತ್ವ 'ಸಿ' ನಷ್ಟವಾಗುತ್ತದೆ. ತರಕಾರಿಗಳ ಬಣ್ಣ ಕೆಡದೆ ಇರಲು ಅಡುಗೆಸೋಡ ಹಾಕಿ ಬೇಯಿಸುವುದರಿಂದ ಜೀವಸತ್ವಗಳು ನಾಶವಾಗುತ್ತವೆ.

ಇದನ್ನು ತಡೆಗಟ್ಟಲು ಕೆಲವು ಸುಲಭ ಉಪಾಯಗಳಿವೆ. ತರಕಾರಿ ಕತ್ತರಿಸುವುದಕ್ಕೆ ಮೊದಲೇ ತೊಳೆಯಬೇಕು. ತರಕಾರಿ ಸಿಪ್ಪೆಯಲ್ಲಿಯೂ ಪೋಷಕಾಂಶಗಳು ಮತ್ತು ನಾರಿನಂಶವು ಇರುವುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಸಿಪ್ಪೆ ತೆಗೆಯಬಾರದು, ದೊಡ್ಡ ದೊಡ್ಡ ತುಂಡುಗಳಾಗಿ ಕತ್ತರಿಸಬೇಕು. ಬೀಟ್‌ರೂಟ್‌ನಂತಹ ಗಟ್ಟಿ ತರಕಾರಿಗಳನ್ನು ಸಿಪ್ಪೆಸಹಿತವಾಗಿ ಇಡಿಯಾಗಿ ಬೇಯಿಸಿ ನಂತರ ಕತ್ತರಿಸುವುದರಿಂದ ಜೀವಸತ್ವಗಳನ್ನು ಅಧಿಕ ಪ್ರಮಾಣದಲ್ಲಿ ಸಂರಕ್ಷಿಸಬಹುದು.

ಸಿಪ್ಪೆ ತೆಗೆಯದೆ ಬೇಯಿಸಿದ ಆಲೂಗೆಡ್ಡೆಯಲ್ಲಿ ಜೀವಸತ್ವ 'ಬಿ' 'ಸಿ' ಮತ್ತು ಇತರ ಲವಣಗಳು ನಷ್ಟವಾಗಿರುವುದಿಲ್ಲ. ಬೆಂದ

ತರಕಾರಿಗಳನ್ನು ಮತ್ತೆ ಬಿಸಿಮಾಡಿದರೆ ಇನ್ನಷ್ಟು ಜೀವಸತ್ವಗಳು ನಾಶವಾಗುತ್ತವೆ.

ಈರುಳ್ಳಿಯಲ್ಲಿ ಬಾಷ್ಪಶೀಲ ತೈಲವಿರುವುದರಿಂದ ಹಸಿ ಈರುಳ್ಳಿಯನ್ನು ತಿಂದಾಗ ಶ್ವಾಸಕೋಶ ಮತ್ತು ಜೊಲ್ಲುರಸದಲ್ಲಿ ತೈಲದ ಆವಿಯು ಹರಡಿ ಉಸಿರಿನಲ್ಲಿ ಮತ್ತು ಬಾಯಿಯ ಮೂಲಕ ಒಂದು ರೀತಿಯ ವಾಸನೆ ಹೊರಬರುತ್ತದೆ. ಬೇಯಿಸುವಾಗ ಈ ತೈಲವು ಆವಿಯಾಗಿ ಹೋಗುವುದರಿಂದ ಬೇಯಿಸಿದ ಈರುಳ್ಳಿಯನ್ನು ತಿಂದಾಗ ಉಸಿರಿನಲ್ಲಿ ವಾಸನೆ ಬರುವುದಿಲ್ಲ. ಆದರೂ ಹಸಿ ಈರುಳ್ಳಿಯು ಜೀವಸತ್ವ 'ಸಿ'ಯ ಉತ್ತಮ ಮೂಲವಾಗಿದೆ ಅಲ್ಲದೆ ಅದರ ಬಾಷ್ಪಶೀಲ ತೈಲವು ಶ್ವಾಸನಾಳವನ್ನು ಪ್ರವೇಶಿಸಿ ಮೂಗು ಕಟ್ಟಿರುವುದನ್ನು ನಿವಾರಿಸುತ್ತದೆ.

ಪರಂಗಿಕಾಯಿಯಲ್ಲಿ ಹೆಚ್ಚು ಪಪಾಯಿನ್ ಇರುತ್ತದೆ. ಆಮ್ಲ, ಕ್ಷಾರ ಮತ್ತು ತಟಸ್ಥ ಮಾಧ್ಯಮದಲ್ಲಿ ಇದು ಪ್ರೋಟೀನನ್ನು ಮೆದು ಮಾಡುತ್ತದೆ. ಆದ್ದರಿಂದ ಕತ್ತರಿಸಿದ ಪರಂಗಿ ಕಾಯಿಯ ನಾಲ್ಕಾರು ತುಂಡುಗಳನ್ನು ಮಾಂಸ ಮತ್ತು ಬೇಳೆ ಬೇಗ ಬೇಯಲು ಉಪಯೋಗಿಸುವರು.

ಚಹವನ್ನು ಮಣ್ಣಿನಬಟ್ಟಲು ಅಥವಾ ಪಿಂಗಾಣಿ ಬಟ್ಟಲಿನಲ್ಲಿ ಕುಡಿಯುವುದು ಸೂಕ್ತ. ಏಕೆಂದರೆ ಚಹವಲ್ಲಿರುವ ಟ್ಯಾನಿನ್ ಲೋಹಗಳ ಮೇಲೆ ವರ್ತಿಸುತ್ತದೆ. ಕೆಲವರಿಗೆ ಊಟದ ಜೊತೆಯಲ್ಲಿ ಚಹ ಕುಡಿಯುವ ಅಭ್ಯಾಸವಿರುತ್ತದೆ. ಹೀಗೆ ಮಾಡುವುದರಿಂದ ಕರಗದಿರುವ ಟ್ಯಾನೇಟ್ ಉಂಟಾಗಿ ಕಬ್ಬಿಣ ರಕ್ತಗತವಾಗುವುದರಲ್ಲಿ ತಡೆಯಾಗುತ್ತದೆ. ಪಾಲಿಸ್ಟರೀನ್ ಬಟ್ಟಲಿನಲ್ಲಿ ನಿಂಬೆರಸ ಹಿಂಡಿದ ಚಹವನ್ನು ಹಾಕುವುದರಿಂದ ಅಪಾಯಕಾರಿಯಾದ ಪಾಲಿಸ್ಟರೀನ್ ಚಹದಲ್ಲಿ ಕರಗುತ್ತದೆ.

ಅನೇಕರಿಗೆ ಬೆಳಗಿನ ಹೊತ್ತು ಕಾಫಿ ಅಥವಾ ಚಹ ಕುಡಿಯುವ ಅಭ್ಯಾಸವಿರುತ್ತದೆ. ಬಿಸಿಯಾಗಿ ತೆಗೆದುಕೊಳ್ಳುವುದರಿಂದ ಅನ್ನನಾಳದ ಪರಿಕ್ರಮ ಸ್ನಾಯು ಚಲನೆ ತ್ವರಿತಗೊಂಡು ಜೀರ್ಣಕ್ರಿಯೆಗೆ ಸಹಾಯವಾಗುತ್ತದೆ.

ಊಟದ ಮಧ್ಯೆ ನೀರನ್ನು ಕುಡಿದರೆ ಜೀರ್ಣರಸಗಳು ದುರ್ಬಲವಾಗಿ ಜೀರ್ಣಕ್ರಿಯೆಗೆ ತೊಂದರೆಯಾಗುವುದೆಂಬ ನಂಬಿಕೆ ಇದೆ. ಒಂದು ಲೋಟ ನೀರನ್ನು ಮಧ್ಯೆ ಮಧ್ಯೆ ಕುಡಿಯುವುದರಿಂದ ಯಾವ ಅಪಾಯಕಾರಿ ಪರಿಣಾಮವೂ ಉಂಟಾಗುವುದಿಲ್ಲ. ತಿಳಿಸಾರು, ಹಾಲು, ಪಾಯಸದಂತಹ ಪೇಯಗಳು, ಘನ ಆಹಾರ ಪದಾರ್ಥಗಳೆನಿಸಿದ ಸೌತೆಕಾಯಿ, ಟೊಮೆಟೊ ಮತ್ತು ಹಣ್ಣುಗಳಲ್ಲಿಯೂ ಅಧಿಕಾಂಶ ನೀರು ಇರುತ್ತದೆ ಇವುಗಳನ್ನು ಊಟದ ಮಧ್ಯೆ ಸೇವಿಸುವಂತೆ ನೀರನ್ನೂ ಕುಡಿಯಬಹುದು.

ಅಡುಗೆಮನೆಗೆ ಮತ್ತು ಊಟಕ್ಕೆ ಸಂಬಂಧಿಸಿದ ಇಂಥ ಹಲವಾರು ವಿಷಯಗಳ ಅರಿವು ಅಡುಗೆಮಾಡುವವರಿಗೆ ಇದ್ದಲ್ಲಿ ಆಹಾರ ಪದಾರ್ಥಗಳ ಪೌಷ್ಟಿಕಾಂಶವನ್ನು, ಪೋಷಕಾಂಶಗಳನ್ನೂ ಸಂರಕ್ಷಿಸಿಕೊಂಡು ಆದರ ಲಾಭವನ್ನು ಪಡೆಯಬಹುದು.

ವಿಜ್ಞಾನದ ಬುನಾದಿ ಇರುವ ಶುಚಿರುಚಿಯಾದ ಅಡುಗೆಯು ದೇಹದ ಆರೋಗ್ಯವನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಸತ್ಕಾರ್ಯದಿಂದ ಸತ್ಫಲ

ಗೋಪಾಲ ಆಶ್ರಿತ
೭-೫-೪೩, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

ಆಫ್ರಿಕಾಕ್ಕೆ ಬಂದು ನೆಲಸಿದ್ದ ಇಂಗ್ಲೀಷ್ ದಂಪತಿಗಳ ಮಗನಾಗಿದ್ದ ನಾನು ಅಲ್ಲಿಯೇ ಬೆಳೆದದ್ದು. ವೈದ್ಯಳಾಗಿದ್ದ ನನ್ನ ತಾಯಿಯ ಜೊತೆ ಅವಳು ಹೋದಲ್ಲೆಲ್ಲ ನಾನೂ ಹೋಗುತ್ತಿದ್ದೆ. ನಾವು ಹೋಗುತ್ತಿದ್ದ ಮೋಟಾರು ವಾಹನ ಒಂದು ಚಲಿತ ಚಿಕಿತ್ಸಾಲಯವಾಗಿತ್ತು. ನನ್ನ ತಂದೆ ಯೋಜಿಸಿದಂತೆ ಅದರಲ್ಲೊಂದು ಔಷಧಿಗಳ ಕಪಾಟನ್ನು ಕೂಡಿಸಲಾಗಿತ್ತು. ಈ ಸಾಧನ ಪೆಟ್ಟಿಗೆಯಲ್ಲಿ ವಿವಿಧ ಸಾಮಗ್ರಿಗಳಿದ್ದವು. ಹೊಳೆಯುವ ಸಣ್ಣ ಚೂರಿಗಳು, ಹೀರುವ ಹತ್ತಿ, ಹತ್ತಾರು ಗುಳಿಗೆ ಶೀಶೆಗಳು ಮತ್ತು ಮುಲಾಮಿನ ಟ್ಯೂಬುಗಳಿದ್ದವು. ಮೆಲ್ಸೆಟರ್ ಗ್ರಾಮದ ಸುತ್ತಲಿನ ಭಾಗ (ಆಗಿನ ದಕ್ಷಿಣ ರೊಡೇಶಿಯಾದ ಪೂರ್ವಕ್ಕಿದ್ದ ಎತ್ತರ ಪ್ರದೇಶ) ದಲ್ಲಿ ನಾವು ನೂರಾರು ಕಿಲೋಮೀಟರ್ ತಿರುಗಾಡುತ್ತಿದ್ದೆವು.

ಇಲ್ಲಿ ಜೀವನದ ಪರಿಚಯ ನನಗಾಯಿತು. ಕೆಲವೊಮ್ಮೆ ಮರಣಗಳನ್ನು ನೋಡಿದ್ದೆ. ಲಸಿಕೆ ಚುಚ್ಚುಮದ್ದು ನೀಡಿ ಜನರನ್ನು ಮರಣದಿಂದ ಪಾರು ಮಾಡಿದ್ದು ನನ್ನ ತಾಯಿಯ ಪಾಲಿಗೆ ಅತ್ಯಂತ ಮಹತ್ವದ ಕಾರ್ಯಕ್ರಮವಾಗಿತ್ತು. ಶುಷ್ಕಕಾಲದಲ್ಲಿ ಸಿಡುಬುರೋಗ, ಗಂಟಲಮಾರಿ, ಕ್ಷಯ ಮತ್ತು ಪೋಲಿಯೊ ರೋಗಗಳ ವಿರುದ್ಧ ಚುಚ್ಚುಮದ್ದು ನೀಡಲು ಹೋಗುವ ಪರಿಪಾಠ ನನ್ನ ಪಾಲಿಗೆ ಒಳ್ಳೆಯ ಪ್ರವಾಸ ಕೈಗೊಂಡಂತಾಗಿರುತ್ತಿತ್ತು.

ಇಂಥ ಒಂದು ಪ್ರವಾಸದಲ್ಲಿ ನಾವು ಎತ್ತರದ ಮಿಂಚುವ ಗ್ರಾನೈಟ್ ಶಿಲೆಯ (ಬೆಣಚುಕಲ್ಲು) ಚಿನಾಮನಿಮಾನಿ ಪರ್ವತಗಳ ಮೇಲೆ ಹೋಗಿದ್ದೆವು. ಈ ಪರ್ವತಗಳು, ಶೋಧಗೊಳ್ಳದ ಮೊಜಾಂಬಿಕಾದ ಸೀಮಾಭಾಗವಾಗಿದ್ದುವು. ಆಗ ಮೊಜಾಂಬಿಕಾದಲ್ಲಿ ಪೋರ್ಚುಗೀಸ್ ವಲಸೆಗಾರರ ವಿರುದ್ಧ ಕೂಟಯುದ್ಧ ನಡೆದಿತ್ತು.

ನಾವು ಬರುವ ವಿಷಯ ಮೊದಲೇ ತಿಳಿಸಿದ್ದರಿಂದ, ಆ ಸ್ಥಳ ತಲಪುವಷ್ಟರಲ್ಲಿ ಸಾವಿರಾರು ಸ್ಥಳೀಯ ಜನರು (ನ್ಯಾವು)— ಅವರಲ್ಲಿ ಬಹಳಷ್ಟು ಜನರು ಸೀಮೆಯ ಆ ಕಡೆಯಿಂದಲೂ ಬಂದಿದ್ದರು. ಮೊಜಾಂಬಿಕನ್ನರಿಗೆ ಚುಚ್ಚುಮದ್ದು ನೀಡುವುದು ನಮ್ಮ

೧೯೯೮ರ ಏಪ್ರಿಲ್ ತಿಂಗಳಿನ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪೀಟರ್ ಗಾಡ್ವಿನ್ ಅವರ "ಎ ಗುಡ್ ಡೀಡ್ ಕಮ್ಸ್ ರೌಂಡ್" ಎಂಬ ಲೇಖನ.

ಕೆಲಸವಾಗಿರಲಿಲ್ಲ. ಆದರೆ ನ್ಯಾವು ಜನರು ಸೀಮೆಯನ್ನು ಇಷ್ಟು ಸಹಜವಾಗಿ ದಾಟಿ ಬಂದಿದ್ದರಿಂದ ಅವರಿಗೂ ನೀಡಬೇಕೆಂಬುದು ನನ್ನ ತಾಯಿಯ ಅಭಿಪ್ರಾಯವಾಗಿತ್ತು.

ಚಿಕ್ಕಮಕ್ಕಳಿಗೆ ಪೋಲಿಯೊ ಲಸಿಕೆ ಕೊಡುವುದು ನನ್ನ ಕೆಲಸವಾಗಿತ್ತು. ನನ್ನ ಹತ್ತಿರ ಸಕ್ಕರೆ ತುಣುಕುಗಳ ಒಂದು ತಟ್ಟೆಯಿತ್ತು. ಪ್ರತಿಯೊಂದು ಮಗುವಿಗೆ ಒಂದು ತುಣುಕು ಕೊಡುತ್ತಿದ್ದೆ. ನನ್ನ ಹಿಂದಿದ್ದ ಆರೋಗ್ಯ ಸಹಾಯಕ ಶೀಶೆಯಲ್ಲಿ ಚುಚ್ಚುಮದ್ದನ್ನಿಟ್ಟುಕೊಂಡಿದ್ದನು. ಪ್ರತಿಯೊಂದು ಸಕ್ಕರೆ ತುಣುಕಿನಲ್ಲಿ ಅವನು ನಸುಗೆಂಪು ಬಣ್ಣದ ಒಂದು ಹನಿ ಚುಚ್ಚುಮದ್ದಿನ ಔಷಧಿಯನ್ನು ಹಿಂಡುತ್ತಿದ್ದನು. ಆಗ ನಾನು “ನಾಲಿಗೆ ಹೊರಗೆ ತೆಗೆಯಿರಿ” ಎಂದು ಹೇಳುತ್ತ ಅವರ ಬಾಯಲ್ಲಿ ಸಕ್ಕರೆ ತುಣುಕನ್ನ ಹಾಕಿ ಅವರು ನುಂಗಿದ್ದನ್ನು ಪರೀಕ್ಷಿಸುತ್ತಿದ್ದೆ. ಸಕ್ಕರೆ ತುಣುಕಿನ ಆಸೆಗಾಗಿ ಎರಡನೇ ಸಲ ಬರದಂತೆ ನೋಡಿಕೊಳ್ಳುವುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು.

ಅದೊಂದು ಶಾಂತಿಯುತ ಕಾಲ. ಆದರೆ ೬೦ರ ದಶಕದಲ್ಲಿ ನಾನು ಬೆಳೆದು ದೊಡ್ಡವನಾಗುತ್ತಿದ್ದಂತೆ, ಬಹು ಸಂಖ್ಯಾತ ಕರಿಯರ ಆಳ್ವಿಕೆಗಾಗಿ ಘೋರ ಯುದ್ಧ ನಡೆಯಹತ್ತಿತು. ಮೊಜಾಂಬಿಕಾದ ಉದ್ದ ಸೀಮೆಯ ಭಾಗಕ್ಕೆ ಹತ್ತಿಕೊಂಡಿದ್ದ ನಮ್ಮ ಜಿಲ್ಲೆ ನಾಶವಾಯಿತು. ಪ್ರತಿಯೊಂದು ಹೊಲದ (ಫಾರ್ಮ್) ಮೇಲೆ ದಾಳಿ ಮಾಡಲಾಯಿತು. ಚಿನಾಮನಿಮಾಗಿ ಪರ್ವತಗಳು, ಒಂದು ವಿಶಾಲ ಗಣಿ ಪ್ರದೇಶವಾಗಿ ಪರಿವರ್ತನಗೊಂಡವು. ದೊಡ್ಡ ದೊಡ್ಡ ದಿಮ್ಮಿಗಳು ಸ್ಫೋಟಗೊಂಡು ಕಣಿವೆಗಳೆಡೆಗೆ ಜಾರುತ್ತಿದ್ದಂತೆ ಕ್ಲಿಪ್ ಸ್ಪ್ರಿಂಗರ್ಸ್, ಎಲಾಂಡ್ ಮತ್ತು ಇತರ ಪ್ರಾಣಿಗಳು ಸ್ಫೋಟಕ್ಕೆ ಬಲಿಯಾದವು. ಸುಮಾರು ೧೦ ವರ್ಷಗಳವರೆಗೆ ಯಾವ ನರಪ್ರಾಣಿಯೂ ಆ ಕಡೆ ಹೋಗುವ ಧೈರ್ಯ ಮಾಡಲಿಲ್ಲ.

ನಾನು ಇಂಗ್ಲೆಂಡಿಗೆ ತೆರಳಿದೆ. ಆಫ್ರಿಕಾವನ್ನು ಮರೆಯಲೆತ್ನಿಸಿದೆ. ಜಿಂಬಾಬ್ವೆಯೆಂಬ ಹೊಸ ಹೆಸರು ಪಡೆದ ಆ ನನ್ನ ತಾಯ್ನಾಡನ್ನು ಅಲ್ಲಿನ ಕ್ರೂರ ಹಾಗೂ ಹಿಂಸಕಾರಕ ಘಟನೆಗಳನ್ನು—ಆ ಮೃತ್ಯು ಕೂಪವನ್ನು—ನಾನು ಮರೆಯಲೆತ್ನಿಸಿದೆ.

ಪತ್ರಿಕೋದ್ಯೋಗ ವಿಷಯ ತೆಗೆದುಕೊಂಡು ಅಭ್ಯಾಸ ಮಾಡುತ್ತಿದ್ದಂತೆ, ಲಂಡನ್ನಿನ ‘ಸಂಡೆ ಟೈಮ್ಸ್’ಗಾಗಿ ಕೆಲಸ ಮಾಡಹತ್ತಿದೆ. ೧೯೮೬ರಲ್ಲಿ ಈ ಪತ್ರಿಕೆಯವರು ನನ್ನನ್ನು ದ. ಆಫ್ರಿಕಾಕ್ಕೆ ಕಳಿಸಿದರು. ಆಗ ಕರಿಯರ ಊರುಗಳಲ್ಲಿ ಪ್ರತಿದಿನ ಕೊಳ್ಳಿ ಇಡಲಾಗುತ್ತಿತ್ತು. ಜೊಹಾನ್ಸ್‌ಬರ್ಗ್ ನನ್ನ ಕಾರ್ಯಕ್ಷೇತ್ರವಾಗಿತ್ತು. ಬಾಲ್ಯ ಕಳೆದಿದ್ದ ಮೊಜಾಂಬಿಕಾಗೆ ಮೊಟ್ಟಮೊದಲಿಗೆ ಹೋಗುವ ಧೈರ್ಯ ಮಾಡಿದೆ.

ಈ ಸಮಯಕ್ಕಾಗಲೇ ದಶಕಗಳ ಯುದ್ಧ ಮತ್ತು ಕ್ಷಾಮವನೆದುರಿಸಿದ್ದ ಮೊಜಾಂಬಿಕಾ ಬಹಳಷ್ಟು ಹಾಳಾಗಿತ್ತು. ಅಂದು ಅದು ವಿಶ್ವದಲ್ಲಿನ ಅತಿ ಬಡ ರಾಷ್ಟ್ರವಾಗಿತ್ತು. ಮಾರ್ಕ್ಸಿಸ್ಟ್ ಸರಕಾರಕ್ಕೆ ಕೂಡಾ ಹೊಸ ಪೀಳಿಗೆಯ ಕ್ರಾಂತಿಕಾರರನ್ನು ಎದುರಿಸುವುದು ಕಷ್ಟಕರವೆನಿಸಹತ್ತಿತ್ತು.

ಮೊಜಾಂಬಿಕಾದ ಈ ಕ್ರಾಂತಿಕಾರಿಗಳು ಹತ್ತಿರದ ಮಾಲವಿ ಎಂಬ ಊರನ್ನು ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆಂದು ವರದಿಯಾಗಿತ್ತಾದರೂ,

ಅದಕ್ಕೆ ಖಚಿತವಾದ ಸಾಕ್ಷ್ಯಾಧಾರ ಯಾರಲ್ಲೂ ಇರಲಿಲ್ಲ. ಮಾಲವಿಯಲ್ಲಿ ವಿದೇಶಿ ಪತ್ರಕರ್ತರಿಗೆ ಪ್ರವೇಶವಿರಲಿಲ್ಲ. ಆದರೆ ಆಗ ರಾಜಕುಮಾರ ಚಾರ್ಲ್ಸ್ ಆ ಭಾಗದಲ್ಲಿ ಪ್ರವಾಸ ಕೈಗೊಳ್ಳಲಿದ್ದಾನೆಂಬುದರ ಲಾಭ ಪಡೆದು, ಆತನ ಅಧಿಕೃತ ಪತ್ರಿಕಾ ಸಮೂಹದವನೆಂದು ಹೇಳಿಕೊಂಡು ಆ ಊರಲ್ಲಿ ಪ್ರವೇಶಿಸಿದೆ. ಕೆಲವೇ ದಿನಗಳಲ್ಲಿ ಆ ಸಮೂಹದಿಂದ ಸರಿದುಕೊಂಡು, ದಕ್ಷಿಣದ ಕಡೆಗೆ ಹೊರಟೆ. ಸುಮಾರು ಒಂದೂವರೆ ದಿನದವರೆಗೆ ಮೋಟಾರಿನಲ್ಲಿ ಮೊಜಾಂಬಿಕಾದ ಗಡಿಪ್ರದೇಶದಲ್ಲಿ ಓಡಾಡಿ ಎಲ್ಲ ಜನರ ಜೊತೆ ಮತ್ತು ಧರ್ಮಪ್ರಚಾರಕರ ಜೊತೆ ಮಾತಾಡಿದೆ. ಅನಂತರ, ಎರಡನೇ ದಿನ ಮಧ್ಯಾಹ್ನ ಒಂದು ಅಂಗಡಿಯ ಮುಂದೆ ನಿಂತೆ.

ಹೊರಗೆ ಪ್ರಕಾಶಮಾನವಾದ ಸೂರ್ಯನ ಬೆಳಕಿದ್ದರೂ ಆ ಅಂಗಡಿಯ ಒಳಭಾಗದಲ್ಲಿ ಕತ್ತಲಿತ್ತು. ನಾನು ಸಹಜವಾಗಿ, ಈ ಗಡಿಭಾಗದಲ್ಲಿ ಕ್ರಾಂತಿಕಾರಿಗಳಿದ್ದುದನ್ನು ಕಂಡಿರುವ ಬಗ್ಗೆ ಅಂಗಡಿಯವನನ್ನು ಕೇಳಿದೆ. ನನ್ನ ದೃಷ್ಟಿ ಆ ಕತ್ತಲಿಗೆ ಹೊಂದಿಕೊಳ್ಳುತ್ತಿದ್ದಂತೆ, ಅವನ ಮುಖದ ಮೇಲಿನ ನಗೆ ಮಾಯವಾಯಿತು. ದೂರದ ಮೂಲೆಯ ಕಡೆಯಿಂದ ಪಾತ್ರೆಗಳ ಸಪ್ಪಳ ಕೇಳಿಸಿತು.

"ಯಾರಿಗೆ ಈ ವಿಷಯ ತಿಳಿಯಬೇಕಾಗಿದೆ ?" ಎಂದು ಜೋರಾದ ಧ್ವನಿ.

ಮೂಲೆಯೊಂದರಲ್ಲಿ ಮುಖಕ್ಕೆ ಬಟ್ಟೆ ಸುತ್ತಿಕೊಂಡಿದ್ದ ಆರು ಜನರಿದ್ದರು. ಗುಂಡಿಟ್ಟು ಹೊಡೆಯಲು ಬೇಕಾದ ವಿವರದ ಪಟ್ಟಿಗಳು ಅವರ ಬಟ್ಟೆಯ ಮೇಲೆ ಜೋತಾಡುತ್ತಿದ್ದವು. ರಶಿಯಾದ ಕಲಾಶ್ನಿಕೊವ್ ಬಂದೂಕುಗಳನ್ನು ಗೋಡೆಗೆ ಸಿಗಿಸಲಾಗಿತ್ತು. ಅಲ್ಲಿನ ಒಂದು ಬಂಡೆಯ ಮೇಜಿನ ಮೇಲೆ ಒಂದು ಕ್ಷಿಪಣಿ ಉಡಾವಣೆಯ ನಕ್ಷೆಯನ್ನು ಹರಡಿಸಲಾಗಿತ್ತು. ಈ ಜನರು ಸೋಡಾ ಕುಡಿಯುತ್ತಿದ್ದರು. "ನೀನೂ ನಮ್ಮ ಜೊತೆ ನಡೆ..., ನಮ್ಮ ಕಾರ್ಯಸ್ಥಾನಕ್ಕೆ" ಎಂದೆನ್ನುತ್ತ ಒಬ್ಬನು ನನ್ನ ಗಟ್ಟಿಯಾಗಿ ಹಿಡಿದ. ಅವನು ಹೀಗೆ ಹೇಳುತ್ತಿದ್ದಂತೆ ಉಳಿದವರೆಲ್ಲ ಹರಡಿ ಬಿದ್ದಿದ್ದ ಕಬ್ಬಿಣದ ಸಾಮಾನು ತುಳಿಯುತ್ತ ಹೊರಡಲು ಸಿದ್ಧರಾದರು.

ಗಿಡಗಳನ್ನೆಲ್ಲಾ ಕಡಿದು ಹಾಕಿದ ದಾರಿಯ ಮೂಲಕ ದಕ್ಷಿಣದ ಕಡೆ ಪ್ರಯಾಸದಿಂದ ಸಾಗಿದೆವು. ಕಾವಲುಗಾರರಲ್ಲಿ ಇಂಗ್ಲೀಷ್ ಬಲ್ಲ ಯೋಧ ತನ್ನ ದಿಕ್ಕನ್ನು ಬದಲಿಸಿದ. ಆಗ ನನ್ನ ಜೊತೆ ಐದು ಸಶಸ್ತ್ರ ಗೆರಿಲ್ಲಾಗಳು ಇದ್ದರಾದರೂ ಅವರ ಜೊತೆ ಸಂಪರ್ಕಿಸಲು ಅವಕಾಶವಿರಲಿಲ್ಲ. ಇವರಿಗೆ ನಾಯಕನೆಂಬಂತೆ ಒಬ್ಬ ದೈತ್ಯ ಅಧಿಕಾರಿಯಿದ್ದ. ಬಿಸಿಲಿನ ತಾಪ ಸಾಕಷ್ಟಿದ್ದಾಗಲೂ ಅವನು ರಶಿಯನ್ ವಿಮಾನ ಚಾಲಕ ಧರಿಸುವ ಕುರಿಚರ್ಮದ ಅಂಚುಳ್ಳ ಒಂದು ಹ್ಯಾಟನ್ನು ಹಾಕಿಕೊಂಡಿದ್ದನು. ಕುರಿಚರ್ಮದ ಅಂಚು ಕಿವಿಯಿಂದ ಭುಜದವರೆಗೆ ಮುಚ್ಚಿತ್ತು. ಬಹಳ ಸಡಿಲಾಗಿದ್ದುದರಿಂದ ಅದು ನಾಯಿಯ ಕಿವಿಯಂತೆ ಕಾಣುತ್ತಿತ್ತು.

ಈ ಕ್ರಾಂತಿಕಾರಿಗಳು ಪ್ರತಿಯೊಂದು ಪಾಳ್ಯದಲ್ಲಿ ನನ್ನನ್ನು 'ವಶಪಡಿಸಿ'ಕೊಂಡ ಬಗ್ಗೆ ಹೊಸ ಕಥೆ ಸೃಷ್ಟಿಸಿ ಹೇಳುತ್ತಿದ್ದರು. ನನ್ನಲ್ಲಿ ಶಸ್ತ್ರಗಳಿದ್ದವು; ನಾನು ತಡೆಯಲೆತ್ನಿಸಿದೆ. ನಾನೊಬ್ಬ ಗೂಢಚಾರಿ ಎಂದು ಹೇಳಲಾಗುತ್ತಿತ್ತು. ಕೆಲವೊಮ್ಮೆ ಹೀಗೆ ಹೇಳುತ್ತಿದ್ದಂತೆ ಮುಷ್ಟಿಯಿಂದ ಹೊಡೆಯು

ವುದು, ಒದೆಯುವುದು ನಡೆಯುತ್ತಿತ್ತು. ನನ್ನನ್ನು ಬಂಧಿಸಿಕೊಂಡು ಹೋಗುತ್ತಿದ್ದ ಈ ಜನರು ಎಷ್ಟೆಷ್ಟು ದಗ್ಗಾ—ಗಾಂಜಾ ಸೇವಿಸುತ್ತಿದ್ದರೋ ಅಷ್ಟಷ್ಟು ನನ್ನೆದುರಿಗೆ ಸಾಹಸ ಬೀರುತ್ತಿದ್ದರು. ಆ ಕೆಂಪುಗಣ್ಣಿನ ಸಾರ್ಜಂಟ್ ತನ್ನ ಭ್ರಮಾಯುಕ್ತ ಜೊತೆಗಾರರ ಮೇಲೆ ಪ್ರಭಾವ ಬೀರಲು ನನ್ನನ್ನು ಗುಂಡಿಟ್ಟು ಹೊಡೆಯಲೂಬಹುದೆಂಬ ಭಯ ನನ್ನನ್ನಾವರಿಸಿತು.

ಕೊನೆಗೂ ಎರಡನೇ ದಿನ ನಾವು ಅವರ ತಾಣ ತಲುಪಿದೆವು. ನನಗೆ ಉಣಿಸಿ, ಒಂದು ಒದ್ದೆ ಬಟ್ಟೆಯಿಂದ ಮೈ ಒರೆಸಿಕೊಳ್ಳಲು ಬಿಟ್ಟುಕೊಟ್ಟರು. ಅನಂತರ ನನ್ನನ್ನು ಆ ಶಿಬಿರದ ಮುಖ್ಯಸ್ಥನೆದುರಿಗೆ ಒಯ್ದು ನಿಲ್ಲಿಸಿದರು. ಸೈನಿಕರ ಉಡುಪನ್ನು ಧರಿಸಿದ್ದ ಆ ವ್ಯಕ್ತಿ ಕುಳ್ಳನಾಗಿದ್ದ.

ಗೀಚು ಬಿದ್ದಿದ್ದ ಫಾರ್ಮಿಕಾ ಮೇಜಿನ ಮುಂದೆ ಕುಳಿತಿದ್ದ ಈ ವ್ಯಕ್ತಿ ಬಾಟ್ಲಿಯೊಂದರಿಂದ ಹೆಂಡ ಕುಡಿಯುತ್ತಲಿದ್ದ. ನನ್ನ ಬಂಧನದ ಬಗೆಗಿನ ದೀರ್ಘ ವರದಿ ಕೇಳುತ್ತಿದ್ದಂತೆ ಅವನ ಊಟ ಬಂತು. ಭುಜದ ಮೇಲೆ ಒಂದು ಸಣ್ಣ ಬಟ್ಟೆ ತುಂಡನ್ನಿಟ್ಟುಕೊಂಡ ಒಬ್ಬ ಆಳು ಒಂದು ತಟ್ಟೆಯನ್ನು ವಿಧ್ಯುಕ್ತವಾಗಿ ಹೊತ್ತುಕೊಂಡು ಬಂದನು....ನಾನು ಕಾಯಬೇಕೆಂದು ಹೇಳಲಾಯಿತು.

ಈವರೆಗೆ ಅವರು ಮಾತಾಡುತ್ತಿದ್ದ ಭಾಷೆ ಅರ್ಥವಾಗಿರಲಿಲ್ಲ. ಅವರಾಡುತ್ತಿದ್ದ ಭಾಷೆ ಉತ್ತರ ಮೊಜಾಂಬಿಕನ್ ಮತ್ತು ಮಾಲವಿಯನ್ ಪ್ರಾಂತ ಭಾಷೆಯ ಮಿಶ್ರಣವಾಗಿತ್ತು. ಈ ಮಿಶ್ರಣದಲ್ಲಿ ಪೋರ್ಚುಗೀಸ್ ಪದಗಳೂ ಸೇರಿದ್ದು ಕಂಡುಬಂತು. ನ್ಯಾವು ಜನರ ಪ್ರಾಂತಭಾಷೆಯಾಗಿ ಚಿನ್ಯಾವಿನಲ್ಲಿ ಆ ಕಮಾಂಡರ್ ಆಳಿಗೆ ಆದೇಶ ನೀಡಿದ್ದು ನನಗೆ ಸ್ಪಷ್ಟವಾಗಿ ತಿಳಿಯಿತು. ಇನ್ನೂ ಸ್ವಲ್ಪ ಸಮಯದವರೆಗೆ ಆಲಿಸಿದ ನಂತರ ನಾನು ಕಮಾಂಡರನನ್ನು ನನಗೆ ನೆನಪಿದ್ದ ಚಿನ್ಯಾವು ಭಾಷೆಯಲ್ಲಿ ವಂದಿಸಿದೆ. ಅವನಿಗೆ ಆಶ್ಚರ್ಯವಾಯಿತು.

"ಈ ಭಾಷೆಯನ್ನು ನೀನೆಲ್ಲಿ ಕಲಿತೆ ?" ಎಂದು ಕೇಳಿದ. ನಾನು ಬಾಲಕನಾಗಿದ್ದಾಗ ರೊಡೇಶಿಯಾ ಭಾಗದ ಚಿಮಾನಿಮನಿ ಪರ್ವತಗಳಲ್ಲೇ ಬೆಳೆದದ್ದೆಂದು ಹೇಳಿದೆ.

"ನಿನ್ನ ಮನೆತನದ ಹೆಸರೇನು ?" ಎಂದು ಕೇಳಿದ.

"ಗೊಡ್ವಿನ್" ಎಂದೆ.

"ಗೊಡ್ವಿನ್" ಎಂದು ಪದೇ ಪದೇ ಅನ್ನುತ್ತ ಯೋಚನಾಮಗ್ನನಾದ.

"ಆ ಭಾಗದಲ್ಲಿ ನಿನ್ನ ತಾಯಿ ಡಾಕ್ಟರ್ ಆಗಿದ್ದಳೆ ?"

"ಹೌದು. ಅವಳು ಮೆಲ್ಸೆಟರ ಜಿಲ್ಲೆಯ ಸರ್ಕಾರಿ ವೈದ್ಯಾಧಿಕಾರಿಯಾಗಿದ್ದಳು."

ಅವನು ನಸುನಕ್ಕು ತಲೆಯಾಡಿಸಿ, ಎದ್ದು ಬಂದು ಆಫ್ರಿಕೆಯ ಪದ್ಧತಿಯಂತೆ ಕೈಚಾಚಿ ಹಸ್ತಲಾಘವ ಮಾಡಿದ. "ಹೌದಪ್ಪಾ.... ನಾನು ಮಗುವಾಗಿದ್ದಾಗ ನನಗೆ ಚುಚ್ಚು ಮದ್ದನ್ನು ನೀಡಿದ್ದು ಅದೇ ಮಹಿಳೆ" ಎಂದು ಹೇಳುತ್ತ ತನ್ನ ಅಂಗಿಯ ತೋಳನ್ನು ಸರಿಸಿ ಮೈಲಿಚುಚ್ಚಿನಿಂದಾದ ಕಲೆಯನ್ನು ತೋರಿಸಿದ.

"ನೀನೆಂದಾದರೂ ನಿನ್ನ ತಾಯಿಗೆ ಸಹಾಯ ಮಾಡಲು ಅವಳ ಜೊತೆಗೆ ಹೋಗುತ್ತಿದ್ದೆಯಾ ?" ಎಂದು ಕೇಳಿದ. ನಾನು ಹೌದೆಂದು ತಲೆಯಾಡಿಸಿದೆ. "ಹೌದು.... ನೀನೇ ನನಗೆ ಸಕ್ಕರೆಯ ತುಣುಕಿನ ಔಷಧಿ

ಯನ್ನಿತ್ತಿರಬೇಕು. ಹೌದು....ನನಗೆ ಈಗ ಚೆನ್ನಾಗಿ ನೆನಪಾಯಿತು. ನಾವು ನಮ್ಮ ನಾಲಿಗೆ ಹೊರಗೆ ಚಾಚಿರುತ್ತಿದ್ದಂತೆ ನೀನು ಸಕ್ಕರೆ ತುಣುಕುಗಳ ತಟ್ಟೆಯೊಂದಿಗೆ ನಮ್ಮ ಸಾಲಿಗೆ ಬಂದು ಪ್ರತಿಯೊಬ್ಬನ ನಾಲಿಗೆಯ ಮೇಲೆಒಂದು ತುಣುಕನ್ನಿಡುತ್ತಿದ್ದೆ" ಎಂದು ಹೇಳಿ ನನ್ನ ಕೈಯಿಂದ ಬಿಡಿಸಿಕೊಂಡು "ಈಗ ನೋಡು....ನಾನು ಎಷ್ಟು ಬಲಶಾಲಿಯಾಗಿದ್ದೇನೆ" ಎಂದನು.

ಕೆಲವೇ ಕ್ಷಣಗಳಲ್ಲಿ ನನ್ನನ್ನು ಬಂದಿಯ ಸ್ಥಿತಿಯಿಂದ ಗೌರವಾನ್ವಿತ ಅತಿಥಿಯ ಪಟ್ಟಕ್ಕೇರಿಸಲಾಯಿತು; ಕಮಾಂಡರನ ಬಲಬದಿಯ ಪೀಠಕ್ಕೆ ಕರೆದೊಯ್ಯಲಾಯಿತು. ನನ್ನನ್ನು ಬಂಧಿಸಿದ್ದ ಆ ಸಾರ್ಜೆಂಟ್ ತೆಪ್ಪಗಾಗಿಬಿಟ್ಟನು.

ಮರುದಿನ ನನ್ನನ್ನು ಮೂಲವಿಗೆ ಮರಳಿ ಕಳಿಸಲಾಯಿತು. ಗಡಿಭಾಗದಲ್ಲಿ ನನ್ನನ್ನು ಬಿಡಲು ಬಂದಿದ್ದ ವ್ಯಕ್ತಿ ನನ್ನಿಂದ ವಶಪಡಿಸಿಕೊಂಡಿದ್ದ ವಸ್ತುಗಳಾದ ನನ್ನ ಕೈಗಡಿಯಾರ, ನೀರಿನ ಬಾಟ್ಲಿ, ಕಪ್ಪುಕನ್ನಡಕ ಮತ್ತು ಕ್ಯಾಮರಾಗಳನ್ನು ಮರಳಿಕೊಟ್ಟ. ನನ್ನ ನೋಟ್ ಬುಕ್ ಮತ್ತು ನನ್ನ ಪೆನ್ ಕೂಡಾ ನನಗೆ ಕೊಟ್ಟ.

ಅವರು ಹೋಗುವ ಮೊದಲು ಅವರ ಜೊತೆ ನಾನು ಒಂದು ಸಮೂಹ ಛಾಯಾಚಿತ್ರ ತೆಗೆಸಿಕೊಳ್ಳುವಂತೆ ಒತ್ತಾಯಿಸಿದರು. ಅಲ್ಲಿಯೇ ಇದ್ದ ವ್ಯಾಪಾರಿಯೊಬ್ಬ ನನ್ನ ಕ್ಯಾಮರಾದಿಂದ, ಆ ನಾಲ್ಕು ಕ್ರಾಂತಿಕಾರಿಗಳ ಜೊತೆಗೆ ನಾನಿದ್ದ ಚಿತ್ರ ತೆಗೆದ. ಆಗ ಕೂಡಾ ಸಾರ್ಜೆಂಟ್, ಆ ಜೋತಾಡುವ ಕುರಿ ಉಣ್ಣೆಯ ಹ್ಯಾಟ್ ಹಾಕಿಕೊಂಡಿದ್ದ. ಚಿತ್ರ ತೆಗೆಯುವಾಗ ಅವನ ತೋಳು ನನ್ನ ಭುಜದ ಮೇಲಿತ್ತು. ಇದು ಅವನ ಮೈತ್ರಿಯ ಸಂಕೇತವೆನಿಸಿತು.

ಒಳ್ಳೆಯ ಕೆಲಸಕ್ಕೆ ದೊರೆಯುವ ಮನ್ನಣೆ ಶಾಶ್ವತವಾದದ್ದೆಂಬುದಕ್ಕೆ ಸಾಕ್ಷಿಯಂತಿರುವ ಆ ಚಿತ್ರ ಈಗಲೂ ನನ್ನ ಹತ್ತಿರವಿದೆ.

ಯಾವುದು ಸ್ವಾರ್ಥದಿಂದ ಕೂಡಿದೆಯೋ ಅದು ಅನೀತಿಯುತವಾದುದು, ಯಾವುದು ನಿಸ್ವಾರ್ಥತೆಯಿಂದ ಕೂಡಿದೆಯೋ ಅದು ನೀತಿಯುತವಾದುದು.

ಎಲ್ಲ ಪೂಜೆ ಪುರಸ್ಕಾರಗಳ ಸಾರಾಂಶವಿಷ್ಟೆ: ಪವಿತ್ರವಾಗಿರುವುದು ಮತ್ತು ಇತರರಿಗೆ ಒಳ್ಳೆಯದನ್ನು ಬಯಸುವುದು.

—ಸ್ವಾಮಿ ವಿವೇಕಾನಂದ

ಸಮಾಜ ಸೇವೆಗೆ ಸ್ನೇಹ ಮಾರ್ಗ

ಸುಧಾ ಹರೀಶ್

ನಂ. ೧೯೮, ೨ ನೆಯ 'ಬಿ' ಮುಖ್ಯರಸ್ತೆ
೨ ನೆಯ ಅಡ್ಡರಸ್ತೆ, ಗೋಕುಲಂ ೨ ನೆಯ ಹಂತ
ಮೈಸೂರು-೫೭೦೦೦೨

ಜೀವನ ಹಗಲಿರುಳುಗಳ ದರ್ಶನದಲ್ಲಿ, ಸವೆಯುವ ದಿನಗಳ ಸಂಕಲನ. ಪ್ರತಿಯೊಂದು ಜೀವಕ್ಕೂ ಈ ದರ್ಶನ ಅನಿವಾರ್ಯ. ಮಾನವನೂ ಇದಕ್ಕೆ ಹೊರತಾಗಿಲ್ಲ. ಇತರ ಜೀವಿಗಳಿಗಿಂತಲೂ ಮಾನವ ಈ ಪ್ರತ್ಯಕ್ಷ ದರ್ಶನದ ಅನುಭವವನ್ನು, ನೆಳವಾಗಿ ಅನುಭವಿಸುತ್ತಾನೆ. ಇದೇ ಮಾನವ ಹಾಗೂ ಇತರ ಜೀವಿಗಳ ನಡುವೆ ಇರುವ ವ್ಯತ್ಯಾಸ. ಮಾನವ ಈ ಸಮಗ್ರ ದರ್ಶನವನ್ನು ಅನುಭವಿಸುವುದರ ಜೊತೆಗೆ ಅದಕ್ಕೆ, ಹೊಸ ಚೈತನ್ಯವನ್ನು ನೀಡುತ್ತಾನೆ. ಈ ಚೈತನ್ಯ ಅವನಿಗೆ ಅವ್ಯಕ್ತವಾದ ಸಮಾಧಾನ ಹಾಗೂ ಸಂತೋಷವನ್ನು ಕೊಡುತ್ತದೆ. ಇಂಥ ಸಂತೋಷವನ್ನು ಅವನು ತನ್ನಲ್ಲೇ ಇಂಗಿ ಹೋಗಲುಬಿಡದೆ ಅದನ್ನು ತನ್ನ ಸಹಜೀವಿಗಳೊಡನೆ ಅಭಿವ್ಯಕ್ತಿಸುತ್ತಾನೆ. ಅಭಿವ್ಯಕ್ತಿಯೇ ಸ್ನೇಹ.

ಸ್ನೇಹ ಸಮಾಜವನ್ನು ಬಂಧಿಸುವ ಬೆಳಕು. ಈ ಬೆಳಕು ಅಸ್ತಂಗತವಾದರೆ, ಇಡೀ ಸಮಾಜ ಕತ್ತಲಿನಲ್ಲಿ ಮುಳುಗುತ್ತದೆ. ಸ್ನೇಹದಿಂದ ಸಮಾಜ ವರ್ಧಿಸುತ್ತದೆ. ಐಕ್ಯತೆ ಫಲಿಸುತ್ತದೆ. ಮಹತ್ತರವಾದ ಸಾಧನೆಗಳು ಕಾರ್ಯಗತಗೊಳ್ಳುತ್ತವೆ.

ಸ್ನೇಹವೆಂಬ ಕಿರಣ ಜೀವಿಗಳಲ್ಲಿ ಪ್ರವೇಶಿಸಿದಾಗ, ಪರಸ್ಪರರಲ್ಲಿ ಪ್ರೀತಿ, ಸೌಹಾರ್ದ, ವಿನಯ ಮುಂತಾದ ಸದ್ಗುಣಗಳು ರೂಪತಾಳಿ, ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿಯ ಪ್ರತೀಕವಾಗಿ, ಕೆಲಸ ನಿರ್ವಹಿಸುತ್ತವೆ. ಸ್ನೇಹದ ನೆರಳಿನಲ್ಲಿ ಜೀವಿಗಳಿಗೆ ತಂಪು ಕಾಣಿಸುತ್ತದೆ. ಇಂಥ ಅದ್ವಿತೀಯವಾದ ಸ್ನೇಹದ ಮುಖ್ಯ ತತ್ವವನ್ನು ರೂಪಿಸಿ ಅದರ ಪ್ರಭೆಯನ್ನು ಇಡೀ ಪ್ರಪಂಚಕ್ಕೆ ಪ್ರದರ್ಶಿಸಿರುವ, ಹೆಮ್ಮೆ "ಇನ್ನರ್ ವೀಲ್" ಕ್ಲಬ್ಬುಗಳಿಗೆ ಸಲ್ಲುತ್ತದೆ. ಇನ್ನರ್ ವೀಲ್ ಸ್ನೇಹ ಸೇವೆಯ ಧಾರಣವನ್ನು ರೂಪಿಸುವ ಒಂದು ಅಂತರ ರಾಷ್ಟ್ರೀಯ ಸಂಸ್ಥೆ ಇಂಗ್ಲೆಂಡಿನಲ್ಲಿ ೧೯೨೪ ನೆಯ ಇಸವಿ ಜನವರಿ ಹತ್ತನೆಯ ತಾರೀಖು ಅಸ್ತಿತ್ವಕ್ಕೆ ಬಂತು. ಈ ಸಂಸ್ಥೆಯು ಉದಯವಾದ ಹತ್ತನೆಯ ತಾರೀಖನ್ನು ಇಂಟರ್ ನ್ಯಾಷನಲ್ ಇನ್ನರ್ ವೀಲ್ ಚಾರ್ಟರ್ ಡೇ ಎಂದೇ ಇನ್ನರ್ ವೀಲ್ ಕ್ಲಬ್ಬುಗಳಲ್ಲಿ ಆಚರಿಸಲಾಗುತ್ತಿದೆ. ಈ ಮಹಾ ಸಂಸ್ಥೆಯನ್ನು ಸ್ಥಾಪಿಸಿದ ಮಹಾ ಮಾತೆಯ ಹೆಸರು ಶ್ರೀಮತಿ ಆಲಿವರ್ ಗೋಲ್ಡಿಂಗ್. ಆಕೆ ವೃತ್ತಿಯಲ್ಲಿ ಮಾದ್ರಿಯಾಗಿದ್ದರು.

ರೋಟರಿಯ ಪಿತಾಮಹರಾದ ಪಾಲ್ ಹ್ಯಾರಿಸ್‌ರವರು ರೋಟರಿಯನ್ನು ಸ್ಥಾಪಿಸಿ ಅದರ ಸದಸ್ಯರು ಅವಿರತ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವಾಗ ಶ್ರೀಮತಿ ಆಲಿವರ್ ಗೋಲ್ಡಿಂಗ್ ಮತ್ತು ಕೆಲವು ಮಹಿಳೆಯರು ಅವರೊಡನೆ ಸಮಾಜ ಸೇವೆಯಲ್ಲಿ ನಿರತರಾಗಿದ್ದರು. ಅಂಥ ಸಮಯದಲ್ಲಿ ಆಕೆಯ ಮನಸ್ಸಿನಲ್ಲಿ "ತಾವೂ ಏಕೆ ಪ್ರತ್ಯೇಕವಾದ ಒಂದು ಸಂಸ್ಥೆಯನ್ನು ಸ್ಥಾಪಿಸಬಾರದು" ಎಂಬ ಆಸೆ ಅಂಕುರಿಸಿ ಅದರ ಕಾರ್ಯದಲ್ಲಿ ತೊಡಗಿ ಯಶಸ್ವಿಯಾದರು. ಶ್ರೀಮತಿ ಆಲಿವರ್ ಗೋಲ್ಡಿಂಗ್ ಸಂಸ್ಥಾಪಕ ಅಧ್ಯಕ್ಷೆಯಾದರು ಹಾಗೂ ಶ್ರೀಮತಿ ನಿಕ್ಸನ್ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟರು.

ಶ್ರೀಮತಿ ಗೋಲ್ಡಿಂಗ್‌ರವರು, ರೋಟರಿ ಸಂಸ್ಥೆಯ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದು, ರೋಟರಿ ಇಲ್ಲದೆ ಇನ್ನರ್ ವೀಲ್ ಇಲ್ಲಾ, ರೋಟರಿ ಕೇಂದ್ರ ಸಂಸ್ಥೆ ಎಂದು ಹೇಳಿದ್ದಾರೆ. ಇನ್ನರ್ ವೀಲ್ ರೋಟರಿ ಸದಸ್ಯರ ಮಹಿಳೆಯರನ್ನು ಸದಸ್ಯರನ್ನಾಗಿ ಒಳಗೊಂಡಿರುವ ಸಂಸ್ಥೆ. ಇದರ ಮುಖ್ಯಧ್ಯೇಯ ಸ್ನೇಹ ಮತ್ತು ಸೇವೆಗೆ ದೇಣಿಗೆ ಹಣವನ್ನು ಸೇರಿಸುವ ಉದ್ದೇಶ. ಸೇವೆಗೋಸ್ಕರ ಕ್ಲಬ್ಬುಗಳ, ಕಾರ್ಯಕ್ರಮಗಳ ಮೂಲಕ ದೇಣಿಗೆಗಳನ್ನು ಸ್ವೀಕರಿಸಬಹುದು. ಇನ್ನರ್‌ವೀಲ್ ಗುರಿ ನಿಜವಾದ ಸ್ನೇಹವನ್ನು ಪ್ರೋತ್ಸಾಹಿಸುವುದು. ವೈಯಕ್ತಿಕ ಸೇವೆಯನ್ನು ಉತ್ತೇಜಿಸುವುದು. ಪ್ರಪಂಚಾದ್ಯಂತ ಸ್ನೇಹವನ್ನು ಘೋಷಿಸುವುದು.

ಈ ಸೇವಾ ಸಂಸ್ಥೆಯು, ಪ್ರಪಂಚಾದ್ಯಂತ ನಾಲ್ಕು ವಿಭಾಗವಾಗಿ ತನ್ನ ಸ್ನೇಹ ಸೇವೆಯನ್ನು ಪ್ರೋತ್ಸಾಹಿಸುವ ಕಾರ್ಯವನ್ನು ಮಾಡುತ್ತದೆ. ಅವು ಈ ಕೆಳಕಂಡಂತೆ ಇವೆ.

೧. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂಟರ್ ನ್ಯಾಷನಲ್ ಇನ್ನರ್‌ವೀಲ್

೨. ರಾಷ್ಟ್ರೀಯ ಮಟ್ಟದಲ್ಲಿ, ಅಸೋಸಿಯೇಷನ್ ಆಫ್ ಇನ್ನರ್ ವೀಲ್ ಕ್ಲಬ್ಸ್ ಇನ್ ಇಂಡಿಯಾ.

೩. ಜಿಲ್ಲಾ ಮಟ್ಟದಲ್ಲಿ ಇನ್ನರ್‌ವೀಲ್ ಡಿಸ್ಟ್ರಿಕ್ಟ್.

೪. ಪ್ರತ್ಯೇಕ ಪಟ್ಟಣ ಹಾಗೂ ಊರುಗಳಲ್ಲಿ, ಇನ್ನರ್‌ವೀಲ್ ಕ್ಲಬ್ ಈ ನಾಲ್ಕು ವಿಭಾಗಗಳು, ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಪ್ರತಿಯೊಂದು ವಿಭಾಗಕ್ಕೂ, ಪ್ರತ್ಯೇಕ ಕಾರ್ಯಕಾರಿ ಸಮಿತಿಯ ರಚನೆ ಇದ್ದು, ಕಾರ್ಯವನ್ನು ನಿರ್ವಹಿಸುತ್ತದೆ.

ಪ್ರಪಂಚಾದ್ಯಂತ, ಇನ್ನರ್‌ವೀಲ್, ಕ್ಲಬ್ಬುಗಳು ೭೩೬ ಇನ್ನು ಡಿಸ್ಟ್ರಿಕ್ಟ್‌ಗಳು, ೨೭ ಇವೆ.

ನಮ್ಮ ಇನ್ನರ್‌ವೀಲ್ ಡಿಸ್ಟ್ರಿಕ್ಟ್ ೩೧೮ರಲ್ಲಿ ಮೈಸೂರು, ಮಂಗಳೂರು, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು ಜಿಲ್ಲೆಗಳು ಸೇರಿವೆ. ಇದರಲ್ಲಿ ೨೫ ಕ್ಲಬ್ಬುಗಳು ಇದ್ದು ಅಂದಾಜು ೫೮೧ ಮಂದಿ ಇನ್ನರ್‌ವೀಲ್ ಸದಸ್ಯೆಯರಿದ್ದಾರೆ. ಹದಿನೈದು ದಿವಸಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಒಟ್ಟುಗೂಡಿ ಸ್ನೇಹವನ್ನು ಪ್ರತಿಪಾದಿಸುವ

ಹಾಗೂ ಸೇವಾ ಯೋಜನೆಗಳನ್ನು ರೂಪಿಸುವ ಕಾರ್ಯಕ್ರಮವನ್ನು ಪ್ರತಿಕ್ಲಬ್ಬು ಹಾಕಿಕೊಳ್ಳುತ್ತದೆ.

ಜಿಲ್ಲೆಯ ಕಾರ್ಯಕಾರಿ ಸಮಿತಿ ಸೇವಾ ಯೋಜನೆಗಳ ರೂಪರೇಖೆಯನ್ನು ಕ್ಲಬ್ಬುಗಳಿಗೆ ನೀಡುತ್ತದೆ. ಯಶಸ್ವಿ ಸೇವಾ ಯೋಜನೆಯನ್ನು ನಿರ್ವಹಿಸಿದ ಕ್ಲಬ್ಬುಗಳಿಗೆ ವರ್ಷದ ಕೊನೆಯ ಸಮಾರಂಭ ಡಿಸ್ಟ್ರಿಕ್ಟ ಅಸೆಂಬ್ಲಿಯಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಸೇವಾ ಯೋಜನೆಗಳು ಕೆಳಕಂಡಂತೆ ಇವೆ.

೧. ಸಮಾಜ ಸೇವೆ

ಮೇಲ್ಕಂಡ ಯೋಜನೆಯಡಿ, ನಮ್ಮ ಇನ್ನರ್‌ವೀಲ್ ಕ್ಲಬ್ಬುಗಳು ಅಪರಿಮಿತ ಹಾಗೂ ಪರಿಶುದ್ಧ ಸೇವೆಯನ್ನು ಸಲ್ಲಿಸಿವೆ. ಸಮಾಜದ ಹಿತವನ್ನು ಒಳಿತನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಮಾಜದಲ್ಲಿನ ದೀನರ ನಿರ್ಲಕ್ಷತೆಗೊಳಗಾದವರ ಸೇವೆ ಹಾಗೂ ಉದ್ಧರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

೨. ವೈಯಕ್ತಿಕ ಸೇವೆ

ಪ್ರತಿಯೊಬ್ಬ ಸದಸ್ಯೆಯೂ ವೈಯಕ್ತಿಕವಾಗಿ ತನ್ನ ಸಮಯ ಹಾಗೂ ಹಣವನ್ನು ಸಮಾಜದ ಹಾಗೂ ವ್ಯಕ್ತಿಗಳ ಉದ್ಧಾರಕ್ಕಾಗಿ ವಿನಿಯೋಗಿಸುವ ಕಾರ್ಯಕ್ರಮಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ.

೩. ಶಿಕ್ಷಣ

'ಒಬ್ಬ ವ್ಯಕ್ತಿ ಒಬ್ಬರಿಗೆ ಶಿಕ್ಷಣ ನೀಡಿ' ಎಂಬ ನುಡಿಯನ್ನು ಪರಿಪಾಲಿಸುತ್ತ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ, ಶಿಕ್ಷಣ ಸಂಸ್ಥೆಗಳಿಗೆ ಹಣ ಸಹಾಯ' ಬಡ ಮಕ್ಕಳಿಗೆ ಶಿಕ್ಷಣ. ಈ ಎಲ್ಲಾ ಸೌಲಭ್ಯಗಳನ್ನು ಸೇವಾ ಕಾರ್ಯಕ್ರಮದಡಿ ರೂಪಿಸಿಕೊಂಡು, ಶಿಕ್ಷಣ ಕ್ಷೇತದಲ್ಲಿ ಅಪಾರ ಸೇವೆಯನ್ನು ಸಲ್ಲಿಸುತ್ತಿದೆ.

೪. ಪರಿಸರ ಸೇವೆ

ಪ್ರಸ್ತುತ ಪ್ರಪಂಚದಲ್ಲಿ ಪರಿಸರದ ಪಾಲನೆ, ಸಂರಕ್ಷಣೆ, ಅತ್ಯಾವಶ್ಯಕವೆನಿಸಿದೆ. ಈ ದಿಕ್ಕಿನಲ್ಲಿ ನಮ್ಮ ಇನ್ನರ್‌ವೀಲ್ ಸಂಸ್ಥೆಗಳು, ಸರ್ಕಾರದೊಡನೆ ಜಂಟಿ ಕಾರ್ಯಕ್ರಮ ಹಾಗೂ ಸಂಘಟನೆಗಳ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆದಿವೆ.

೫. ವೈದ್ಯಕೀಯ ಸೇವೆ

'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿಯಂತೆ ನಮ್ಮ ಸಂಸ್ಥೆಗಳು, ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ವಿವಿಧ ರೋಗ ತಪಾಸಣೆ ಮುಂಜಾಗ್ರತೆ ಕ್ರಮ ಹಾಗೂ ವೈದ್ಯಕೀಯ ನೆರವು ನೀಡುವ ಮಹೋನ್ನತವಾದ ಸೇವೆಯನ್ನು ಸಮಾಜಕ್ಕೆ ಸಲ್ಲಿಸುತ್ತಿದೆ. ವೈದ್ಯಕೀಯ ಸೇವೆಯಡಿ, ಶಸ್ತ್ರಚಿಕಿತ್ಸೆಗೆ ನೆರವು, ಬುದ್ಧಿಮಾಂದ್ಯ ಮಕ್ಕಳಿಗೆ ವಿವಿಧ ರೀತಿಯ ನೆರವು, ಅಂಗ ವಿಕಲತೆಯನ್ನು ಹೊಂದಿರುವವರಿಗೆ ನೆರವು, ಪೋಲಿಯೋ ನಿರ್ಮೂಲನ ಕಾರ್ಯಕ್ರಮ. ಏಡ್ಸ್ ಹಾಗೂ ಮಾರಕರೋಗಗಳಿಗೆ ಬಗ್ಗೆ ತಿಳುವಳಿಕೆ ಮೂಡಿಸುವ ಶಿಬಿರಗಳನ್ನು ಏರ್ಪಡಿಸಿ, ಸಮಾಜದ ಆರೋಗ್ಯಕ್ಕಾಗಿ ಶ್ರಮಿಸುತ್ತಿದೆ.

ಪುಸ್ತಕ ಪರಿಚಯ

ದ್ರೌಪದೀ ಸಮೀಕ್ಷೆ (ಡಾಕ್ಟರೇಟ್ ಪ್ರಬಂಧ); ಪ್ರಕಟಣೆ: ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ; ಲೇಖಕಿ: ಡಾ|| ಮಣಿಮಾಲಿನಿ ವಿ.ಕೆ. ಪುಟಗಳು: ೬+೨೫೨; ಬೆಲೆ: ೧೦೦ ರೂ.

ಲೇಖಕಿ ತಮ್ಮ ಮೊದಲ ಮಾತಿನಲ್ಲಿ ಹೇಳುವಂತೆ ಭಾರತೀಯ ಸ್ತ್ರೀ ಪಾತ್ರದ ನೆಲೆ–ಬೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನವಾಗಿ ದ್ರೌಪದೀ ಸಮೀಕ್ಷೆಯನ್ನು ಮಾಡಲಾಗಿದೆ. ಭೈರಪ್ಪನವರ ಪರ್ವ, (ಕನ್ನಡ) ಶಿವಾಜಿ ಸಾವಂತರ ಮೃತ್ಯುಂಜಯ, (ಮರಾಠಿ) ಶಂಕರಲಾಲರ ಯಾಜ್ಞಸೇನಿ (ಒರಿಯಾ) ಕಾದಂಬರಿಗಳನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಒಟ್ಟು ೧೦ ಅಧ್ಯಾಯಗಳಲ್ಲಿ ದ್ರೌಪದಿಯ ಅಧ್ಯಯನ ನಡೆದಿದೆ. ಇದು ಲೇಖಕಿಯ ಡಾಕ್ಟರೇಟ್ ಪ್ರಬಂಧವೂ ಹೌದು. ಒಟ್ಟಾಗಿ ಸ್ತ್ರೀ ಸಮಾಜದ ತುಮುಲಗಳ—ಶೋಷಣೆಯ ವಿವೇಚನೆ, ವಿಮರ್ಶೆ ಪುಸ್ತಕದ ಉದ್ದೇಶ. ತಮ್ಮ ಶೋಧನೆಗಳನ್ನು ಸಮರ್ಥಿಸಲು ಮಣಿಮಾಲಿನಿಯವರು ೩೦ ಆಕರ ಗ್ರಂಥಗಳ ಸಹಾಯ ಪಡೆದಿದ್ದಾರೆ. ಓದಿದ್ದಾರೆ, ಉದ್ಧರಿಸಿದ್ದಾರೆ. ಹೀಗಾಗಿ ಈ ಪುಸ್ತಕದಲ್ಲಿ ಸ್ವಂತ ಸಾಲುಗಳಿಗಿಂತ ಉದ್ಧರಣೆಗಳೇ ಜಾಸ್ತಿ, ಓದುವಾಗ ಆಸಕ್ತಿ ಕುದುರುವುದಿಲ್ಲ.

ಇದು ಮೂರು ಮಹಾನ್ ಕಾದಂಬರಿಗಳ ವಿಮರ್ಶೆ ಎಂದು ಸ್ವೀಕರಿಸಿದರೆ, ಆ ನೆಲೆಯಲ್ಲೂ ಸೋತಿದೆ. ಇದನ್ನು ಓದಿ ಮುಗಿಸುವಾಗ ಪರಿಣಾಮ ಸೊನ್ನೆ. ಆ ಕಾದಂಬರಿಗಳ ಕುರಿತು ನನಗೆ ಸ್ವೀಕಾರವಾಗಲೀ ತಿರಸ್ಕಾರವಾಗಲೀ ಮೂಡಿಸಲು ಈ ಕೃತಿ ಶಕ್ತವಾಗಲಿಲ್ಲ. ಹಿನ್ನೆಲೆಯ ಕಾದಂಬರಿಗಳನ್ನು ಓದಿದ ಮೇಲೆ "ದ್ರೌಪದೀ ಸಮೀಕ್ಷೆ" ಓದಿದರೆ ಇದರ ಶಕ್ತಿಯ ಪರಿಚಯವಾದೀತೇನೊ?

ಒಟ್ಟಾರೆಯಾಗಿ, ಅನಾದಿಯಿಂದಲೇ ಸ್ತ್ರೀ ಶೋಷಣೆಯಾಗಿದೆ. ಹೆಣ್ಣಿಗೆ ಸ್ವಂತ ಅಸ್ತಿತ್ವ ದೊರಕದಾಗಿದೆ ಎಂದು ವಾದಿಸಲು ಸ್ಥಾಲೀ ಪುಲಾಕ ನ್ಯಾಯವನ್ನು ಎಲ್ಲರಂತೆ ಮಣಿಮಾಲಿನಿಯವರೂ ಅನುಸಂಧಾನಮಾಡಿದ್ದಾರೆ. ಪುಸ್ತಕದ ಪುಟಗಳನ್ನು ತೆರೆದು ವಾಕ್ಯಗಳನ್ನು ಉದ್ಧರಿಸಿ ವಿಮರ್ಶಿಸುವುದು ಈ ಪುಸಕ್ತದ ಮಟ್ಟಿಗೆ ಅಸಾಧ್ಯ ಸಾಹಸವಾಗುವುದರಿಂದ ಎಲ್ಲ ಕಾಲಕ್ಕೂ ಪ್ರಸ್ತುತವಾಗಿರುವ ಶೋಷಣೆಯ ಕೂಗಿನ ಬಗೆಗೆ ನಾಲ್ಕು ಮಾತುಗಳನ್ನು ಬರೆಯ ಬಯಸುತ್ತೇನೆ.

ರಾಮಾಯಣ–ಮಹಾಭಾರತಾದಿ ಕಾವ್ಯಗಳನ್ನು ಸಮಗ್ರವಾಗಿ ನೋಡದೆ ಅಲ್ಲಲ್ಲಿ ಹಿಚುಕಿ ನೋಡುವ ಪ್ರಯತ್ನ ಪ್ರಯೋಜನ

ಕಾರಿಯಲ್ಲ. ಸೀತೆಯನ್ನು ಸ್ತ್ರೀ ಶೋಷಣೆಯ ಪ್ರತೀಕವೆಂದು ವಾದಿಸುವಾಗ ರಾಮನನ್ನು ಪುರುಷ ಶೋಷಣೆಯ ಪ್ರತೀಕ ಎಂದು ಯಾಕೆ ಕಾಣುವುದಿಲ್ಲ? ರಾಮಾಯಣದಲ್ಲಿ ಸ್ತ್ರೀ ಶೋಷಣೆಗಿಂತ ಹೆಚ್ಚು ಪುರುಷ ಶೋಷಣೆ ನಡೆದಿದೆ. ದಶರಥನಿಗಾದರೂ ದೈಹಿಕ ಕಾಮ ಕಳೆದ ವೃದ್ಧಾಪ್ಯದ ದಿನಗಳು, ದೇವರನ್ನೇ ಮಗನಾಗಿ ಪಡೆದ ಸಂತೃಪ್ತಿಯ ದಿನಗಳು. ಆತ ಯಾವ ರೀತಿಯಲ್ಲೂ ಕೈಕೆಯ ಮಾತಿಗೆ ಒಳಗಾಗಬೇಕಾಗಿರಲಿಲ್ಲ. ಆದರೂ ಆದರ್ಶಕ್ಕಾಗಿ ಸತ್ತ. ರಾಮನೂ ಆದರ್ಶಕ್ಕಾಗಿ ಸೋತ. ಆದರ್ಶ ಏರಬೇಕಾದ ಎತ್ತರ. ವಾಸ್ತವ ಏರಿದ ಎತ್ತರ. ಆದರ್ಶ ಮತ್ತು ವಾಸ್ತವಗಳ ಸಮಗ್ರ ಚಿಂತನೆಯಲ್ಲಿ ಮಹಾನ್ ಪ್ರತ್ಯುತ್ಪನ್ನ ಮತಿ, ಕವಿ ಹೃದಯ ಕುಂಚಿಸಿದ ಈ ಚಿತ್ರಗಳನ್ನು ಅದೇ ಹೃದಯವಂತಿಕೆ ಇಟ್ಟು ನಿಮರ್ಶಿಸಿದಾಗ ಮಾತ್ರ ಅದು ಹೆಚ್ಚಿನ ಆಯಾಮ ನೀಡಬಲ್ಲುದು. ಇಲ್ಲದಿದ್ದರೆ ನೀರಸವೂ ನಿರರ್ಥಕವೂ ಆಗುವುದು.

ಸೀತೆಯನ್ನು ಅಗ್ನಿಪರೀಕ್ಷೆಗೊಡ್ಡಿದ್ದು, ಕಾಡಿಗೆ ಕಳಿಸಿದ್ದು ಸ್ತ್ರೀ ಶೋಷಣೆಯ ಪರಾಕಾಷ್ಠೆ ಎಂಬುದು ಎಲ್ಲೆಡೆಯವಾದ. ಆದರೆ ನಾವು ಗಮನಿಸಬೇಕಾದ ಬಹಳ ಮುಖ್ಯ ಅಂಶವೆಂದರೆ ಇಲ್ಲಿ ಅಗ್ನಿಪರೀಕ್ಷೆಗೊಡ್ಡಿದ್ದು ನಾವು, ನೀವಲ್ಲ—ರಾಮ ಕಾಯಾ, ವಾಚಾ, ಮನಸಾ ಒಂದಾದ ರಾಮ. ಅವನ ನಡೆಯನ್ನು ನಮ್ಮ ನಡೆಯಿಂದ ಮೌಲ್ಯಮಾಪನ ಮಾಡುವುದು ತರವಲ್ಲ. ರಾಮನಂಥ ಗಂಡನಿದ್ದರೆ ಇಂದೂ ಸೀತೆಯ ಅಗ್ನಿಪರೀಕ್ಷೆ ನಡೆದರೆ ತಪ್ಪಲ್ಲ. ತಪ್ಪುತ್ತಿರುವುದು ರಾವಣನಂಥ ಗಂಡ ಸೀತೆಯಂಥಾ ಪತಿವ್ರತೆ ಹೆಂಡತಿಯನ್ನು ನಿರೀಕ್ಷಿಸುವಲ್ಲಿ. ಹಾಗಾಗಿ ಇಂದಿನ ಸ್ತ್ರೀ ಶೋಷಣೆಯನ್ನು ಸ್ತ್ರೀ ಸೀತೆಯ ಪರೀಕ್ಷೆಗಳೊಂದಿಗೆ, ದ್ರೌಪದಿಯ ಕಷ್ಟಗಳೊಂದಿಗೆ ಹೋಲಿಸಿ ವಿಮರ್ಶಿಸುವುದು ಸಾಧುವಾಗುವುದಿಲ್ಲ. ಸೀತೆ, ದ್ರೌಪದಿಯರು ಶೋಷಣೆಯ ಪ್ರತೀಕಗಳಲ್ಲ ಶೋಷಣೆ ಕಡಿಮೆಯಾಗಬೇಕಾದರೆ ಸಾಧಿಸಬೇಕಾದ ಆದರ್ಶದ ಪ್ರತೀಕಗಳು.

ಕುಂತಿಯ, ದ್ರೌಪದಿಯ ಶೋಷಣೆ ನಡೆದಿದೆ ಎಂದು ವಾದಿಸುವಾಗ, ಅವರ ಮಾತುಗಳಿಗೆ ಮನ್ನಣೆಯೂ ಸಿಕ್ಕಿದೆ ಎಂದು ಯಾಕೆ ಯೋಚಿಸಬಾರದು? ಮಾತೃದೇವೋಭವ ಎಂಬುದನ್ನು ಅಕ್ಷರಶಃ ಪಾಂಡವರು ಪಾಲಿಸಿದರಲ್ಲಾ (ಯಾಕೆ? ಕರ್ಣ ಪಾಲಿಸಿದನಲ್ಲಾ!) ದ್ರೌಪದಿಯಂಥ ಸುಂದರಿ, ಒಬ್ಬನ ಹೆಂಡತಿಯಾಗುವುದರಿಂದ ಮುಂದೆ ಅನಾಹುತವೇ ಆಗುವುದೆಂಬ ದೂರದೃಷ್ಟಿಯಿಂದಲೇ ದ್ರೌಪದಿ ಪಂಚವಲ್ಲಭೆಯಾಗಲು ಕುಂತಿ ಅನುವಾದಳು ಎಂಬ ವಾದವನ್ನು ಈ ಪುಸ್ತಕದಲ್ಲೂ ಪಠಿಸಲಾಗಿದೆ. ಸರಿ ಹಾಗಾದರೆ ಕೀಚಕ, ದುರ್ಯೋಧನರಿಂದ, ಅಥವಾ ಇತರೆ ಪಾಂಡವರಿಂದಲೇ ಹೆಚ್ಚಿನ ಶೋಷಣೆಗೆ ಆಕೆ ಒಳಗಾಗುತ್ತಿದ್ದಳಾಗಿ ಸಾಧ್ಯತಮ ಗರಿಷ್ಠ ಗೌರವವೇ ಅವಳಿಗೆ ಸಂದಿದೆ ಎಂದು ಭಾವಿಸಬಹುದಲ್ಲಾ.

ಪಾಂಡವರಿಗಾಗಲೀ, ಕೃಷ್ಣನೇ ಆಗಲೀ ಅನುಭವಿಸಿದ (ನಮ್ಮ ದೃಷ್ಟಿಯಲ್ಲಿ) ಶೋಷಣೆಗಳೇನು ಸಾಮಾನ್ಯವೇ? ಎಲ್ಲ ಸಾಮರ್ಥ್ಯಗಳಿದ್ದು ಎಲ್ಲ ರೀತಿಯಲ್ಲೂ ಸುಖಿಸಬಹುದಾದ ಸಂಭಾವ್ಯತೆಗಳನ್ನೆ

ಆದರ್ಶಕ್ಕಾಗಿ ತ್ಯಾಗ ಮಾಡಿದ ಕಥೆಯಲ್ಲಿ ಶೋಷಣೆಯ ಎಳೆ ಹುಡುಕುವುದು ವಾಸ್ತವ ದೂರವಾದ ತಿರುಗು ನಡೆಯಾಗುವುದು. ಅಣು,ರೇಣು,ತೃಣ,ಕಾಷ್ಠಗಳಲ್ಲಿ,ಸಮಾನತೆಯನ್ನು ಕಾಣುವ ಚಿಂತನೆ, ಸಂಸ್ಕೃತಿ ನಮ್ಮದು, ಹೀಗಿರುತ್ತಾ ಹೆಣ್ಣನ್ನು ಮಾತ್ರ (ಅಸಮಾನತೆಯನ್ನು) ಶೋಷಿಸುವ ಮಾನಸಿಕ ನೀಚತೆ ನಮ್ಮವರಿಗಿತ್ತು ಎಂದು ತರ್ಕಿಸಲು ಬರುವುದಿಲ್ಲ.

ಹೆಣ್ಣನ್ನು ಮಗಳಾಗಿ, ಹೆಂಡತಿಯಾಗಿ, ಅತ್ತೆಯಾಗಿ ಸೊಸೆಯಾಗಿ ಕಾಣಲಾಗುತ್ತದೆ. ಇತರ ಸಾಧ್ಯತೆಗಳಿಗೆ ಅವಕಾಶ ಕೊಡಲಿಲ್ಲ ಎಂಬುದಾಗಿ ವಾದಿಸಲಾಗಿದೆ. ಇದು ಸರಿಯಲ್ಲ. ಬೇರೆ ಏನಾದರೂ ಆಗಿರಲಿ. ಆದರೆ ಆಕೆ ಮಗಳು ಹೆಂಡತಿ ಇದು ಸರಿಯಲ್ಲ. ಬೇರೆ ಏನಾದರೂ ಆಗಿರಲಿ. ಆದರೆ ಆಕೆ ಮಗಳು ಹೆಂಡತಿ ಇತ್ಯಾದಿ ಹೌದೇ ಹೌದಲ್ಲಾ .ಅದೂ ಆಗಬೇಕು ಮುಂದೆಯೂ ಆಗಬೇಕು. ದ್ರೌಪದಿಗೆ ರಾಣಿಯಾಗಿ, ಮಂತ್ರಿಯಾಗಿ, ಮಿತ್ರೆಯಾಗಿ ಧಾರಾಳ ಅವಕಾಶ ಕೊಡಲಾಗಿದೆ. ಭಾರತ ಯುದ್ಧ ಕೊನೆಗೂ ದ್ರೌಪದಿಗಾಗಿಯೇ ಆಗಿದೆ. ಕವಿ ಮನಸ್ಸು ಮಾಡಿದ್ದರೆ ಯುದ್ಧವಾಗದೆ ಐದು ಗ್ರಾಮಗಳಿಗೆ ಪಾಂಡವರು ತೃಪ್ತರಾಗಿ ಜೀವಿಸಿದರು, ದುರ್ಯೋಧನನೂ ಸುಧಾರಿಸಿದ ಎಂಬುದಾಗಿ ಮುಗಿಸಬಹುದಾಗಿತ್ತು. ಆದರ್ಶವನ್ನು ವಾಸ್ತವವನ್ನೂ ಸಮಾಗಮಿಸಿದ ಸ್ಥಿತಿ ಭಾರತ ಯುದ್ಧ.

ದೊಡ್ಡ ಮೀನು ಸಣ್ಣ ಮೀನನ್ನು ತಿನ್ನುವುದು ವಾಸ್ತವ, ಹಾಗೆ ತಿನ್ನುತಾ ಹೋದರೆ ದೊಡ್ಡ ಮೀನಿಗೆ ಮುಂದೊಂದು ದಿನ ಆಹಾರ ಇಲ್ಲವಾಗುವುದು. ಆದ್ದರಿಂದ ಸಣ್ಣ ಮೀನುಗಳಿಗೂ ಅವಕಾಶಕೊಡುವುದು ಆದರ್ಶ. ಇದು ವಾಸ್ತವ ಮತ್ತು ಆದರ್ಶಗಳ ಅಂತರ ಹಾಗೂ ಸಾಮ್ಯ. ಹಾಗಾಗಿ ಪ್ರಕೃತಿಯಲ್ಲಿ ಶೋಷಣೆಯೂ ಇರುತ್ತದೆ. ಗೌರವವೂ ಇರುತ್ತದೆ. ಸಿಕ್ಕಿದ ಗೌರವದ ಸಂದರ್ಭಗಳನ್ನೆಲ್ಲಾ ಮರೆತು (ದಾಖಲಿಸದೆ) ಕೇವಲ ಶೋಷಣೆಯ ಸಂದರ್ಭಗಳನ್ನು ಮಾತ್ರ ನೆನೆಯುವುದು ದುಃಖಕರ, ದೌರ್ಬಲ್ಯ.

ಭಾರಿಯಾದ ಆಲದ ಮರ ಬೆಳೆಯುವಾಗ ಆದರಡಿಯಲ್ಲಿ ಯಾವುದೇ ಹುಲ್ಲು, ಗಿಡ, ಬಳ್ಳಿ ಬೆಳೆಯಲಾರದು. ಹಾಗಾಗಿ ಆಲದ ಮರ ಇತರೆ ಸಸ್ಯಗಳನ್ನು ಶೋಷಿಸಿದೆ ಎನ್ನಲಾದೀತೇ? ಅದೇ ಆಲ ಎಷ್ಟೊಂದು ಹಕ್ಕಿಗಳಿಗೆ, ಮಂಗಗಳಿಗೆ ಅಳಿಲುಗಳಿಗೆ ಆವಾಸವೂ, ಆಹಾರವೂ ಆಗುವುದು. ಆಮ್ಲಜನಕದ ಕಾರ್ಖಾನೆಯಾಗುವುದು. ಅಲ್ಲಿ ಬರಬಹುದಾದ ಹುಲ್ಲು, ಗಿಡ ಬಳ್ಳಿಗಳ ಕೆಲಸವನ್ನೆಲ್ಲಾ ಇದು ಮಾಡುವುದು. ಹಾಗೇ ರಾಮ, ಕೃಷ್ಣ, ಪಾಂಡವರು ಮೊದಲಾಗಿ ಮಹಾನ್ ವ್ಯಕ್ತಿತ್ವಗಳು ವಿಕಸಿಸುವಾಗ ಅನಿವಾರ್ಯವಾಗಿ ಕೆಲವು ವ್ಯಕ್ತಿತ್ವಗಳಿಗೆ ತೊಂದರೆ ಆಗಿರಬಹುದು. ಅದರೆ ಅಂಥಾ ವ್ಯಕ್ತಿತ್ವ ರೂಪುಗೊಳ್ಳದಿದ್ದರೆ ಸಮಗ್ರ ಜನಸಾಂಗಕ್ಕೆ ನಷ್ಟವಾಗುತ್ತದೆ ಎಂಬ ವಾಸ್ತವವನ್ನು ವಿಮರ್ಶಕರು ವಿಚಾರ ಮಾಡಬೇಕು.

ಎ. ಪಿ. ಚಂದ್ರಶೇಖರ
ಕಳಲವಾಡಿ ಗ್ರಾಮ, ಅಂಚೆ ಉದ್ಬೂರು
ಮೈಸೂರು–೫೭೦ ೦೦೮

ಇಡಗುಂಜಿ ಮೇಳ—ಡಾ|| ರಾಮಕೃಷ್ಣ ಜೋಶಿ; ಚಿಂತನ ಪ್ರಕಾಶನ ೫೫೧/ಎಸ್, ೨೪ನೇ ತಿರುವು, ಹೆಬ್ಬಾಳ, ಎರಡನೇ ಹಂತ, ಮೈಸೂರು, ಬೆಲೆ : ೮೦ ರೂ.

ಇದೊಂದು ಪಿಎಚ್‌ಡಿ ಪದವಿ ಪಡೆದ ಮಹಾಪ್ರಬಂಧದ ಕೃತಿ, ಕರಾವಳಿ ಪ್ರದೇಶದ ಅದರಲ್ಲೂ ಉತ್ತರಕನ್ನಡ ಜಿಲ್ಲೆಯ ಯಕ್ಷಗಾನ ಪ್ರಕಾರಕ್ಕಾಗಿ ದುಡಿಯುತ್ತಿರುವ ಮೇಳ ವೊಂದರ ಸಮಗ್ರ ಪರಿಚಯ ಅಧ್ಯಯನದ ಉದ್ದೇಶ. ಕುತೂಹಲಿಗಳಿಗೆ ಪ್ರಯೋಜನ ವಾಗುವ ಹಲವು ಮಾಹಿತಿಗಳು ಇಲ್ಲಿ ಶ್ರಮ ದಾಯಕವಾಗಿ ಸಂಗ್ರಹಗೊಂಡಿವೆ. ಹೇರಳ ವಾದ ಪರಾಮರ್ಶನ, ಮಾಹಿತಿಗಳ ಸಂಗ್ರಹಣೆ, ಸಮೃದ್ಧ ಸಾಮಗ್ರಿ ಸಂಕಲನ ಗಳು ಕೃತಿಯ ವೈಶಿಷ್ಟ.

ಯಕ್ಷಗಾನ ಕಲಾವಿದ, ವಿಮರ್ಶಕ ಎಂ. ಪ್ರಭಾಕರ ಜೋಶಿ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಇಲ್ಲಿ ಕೃತಿಯ ಸೋಲು-ಯಶಸ್ಸುಗಳನ್ನು ಅವರು ಸ್ಥೂಲವಾಗಿ ನೋಡಿದ್ದಾರೆ.

ಈ ಕೃತಿಯಲ್ಲಿ ಯಕ್ಷಗಾನದ ಬಗ್ಗೆ ಹೊಸ ವಿಚಾರಗಳೇನೂ ಇಲ್ಲ. ಕುಕ್ಕಿಲ ಕೃಷ್ಣ ಭಟ್ಟರು, ಕಾರಂತರು ಈ ಮೊದಲಾದವರ ಸಂಶೋಧನೆಯ ಹಿನ್ನೆಲೆಯನ್ನು ಕೃತಿಗೆ ಬಳಸಿಕೊಳ್ಳಲಾಗಿದೆ. ತಾಳಮದ್ದಲೆ ಕುರಿತು ಹೇಳಬಹುದಾದ ಮಾತುಗಳು ಹಾಗೂ ಕೃತಿಯಲ್ಲಿನ ಅಪ್ರಸ್ತುತ ವಿಷಯಗಳ ಬಗ್ಗೆ ಮುನ್ನುಡಿಕಾರರೇ ನೇರವಾಗಿ ಹೇಳಿದ್ದಾರೆ.

ಈ ಅಧ್ಯಯನಕ್ಕೆ ಇಡಗುಂಜಿ ಮೇಳವೇ ವಸ್ತು ಕೇಂದ್ರ. ಆದ್ದರಿಂದ ಮೇಳದ ಇತಿ-ಮಿತಿಗಳನ್ನು ಹಾಗೂ ಮೇಳದ ಅಭಿನಯಾತಿ ರೇಕ ಕುರಿತ ಟೀಕೆಗಳನ್ನು ಸಾಪೇಕ್ಷವಾಗಿ ಕೈಬಿಡಲಾಗಿದೆ. ಏನಿದ್ದರೂ ಹೇಳುವ ಹಾಗೂ ದಾಖಲಿಸುವ ಅಂಶಗಳು ವಸ್ತು ನಿಷ್ಠತೆಯಿಂದ ಹೊರತಾಗಿದ್ದರೂ ಮೇಳಕ್ಕೆ 'ನೋವು'ಂಟಾಗಬಾರದೆಂಬ ಕಾಳಜಿ ಇರು ವಂತೆ ಉದ್ದಕ್ಕೂ ಕಾಣುತ್ತದೆ. ಹೀಗಾಗಿ ಈ ಸಂಶೋಧನೆ ವಸ್ತುನಿಷ್ಠತೆಗೆ ಬದಲಾಗಿ 'ಮೇಳ ನಿಷ್ಠತೆ'ಗೆ ಬದ್ಧವಾಗಿದೆ. ಇದು ಕೃತಿಯ ದೊಡ್ಡ ಸೋಲು.

ಉತ್ತರಕನ್ನಡದ ಯಕ್ಷಗಾನ ಪರಂಪರೆ ಯನ್ನು ಬಡಗುತಿಟ್ಟು ಎಂದು ಗುರುತಿಸಿ ದರೂ ಅದರಲ್ಲೇ ಬಡಬಡಗು, ತೆಂಕುಬಡಗು ತಿಟ್ಟುಗಳಿವೆ. ಪ್ರಸಿದ್ಧವಾದ ಹಾಸ್ಯಗಾರ ಮೇಳವನ್ನು ಈ ಇಡಗುಂಜಿ ಮೇಳದೊಂದಿಗೆ ಎಲ್ಲ ವಿಧದಲ್ಲೂ ಇಟ್ಟುನೋಡಿದಾಗ ಈ ವ್ಯತ್ಯಾಸ ಪ್ರಾಮಾಣಿಕವಾಗಿ ಕಾಣುತ್ತದೆ. ಉತ್ತರಕನ್ನಡದ ಯಕ್ಷಗಾನಕ್ಕೆ ಇಡಗುಂಜಿ ಮೇಳವೇ ಸಾರ್ವಭೌಮ, ಕೇಂದ್ರ ಎಂಬ ಅರ್ಥ ಪ್ರತಿಪಾದನೆಗೆ ಎಲ್ಲ ಅಧ್ಯಾಯಗಳ ಧಾಟಿ ಮೀಸಲು. ಎಲ್ಲ ಪಾತ್ರಗಳು, ಕಲಾವಿದರು ಹಾಗೂ ಉತ್ತರಕನ್ನಡಜಿಲ್ಲೆಯ


ಯಕ್ಷಗಾನದ ಏಳು-ಬೀಳುಗಳೂ ಈ ಮೇಳದ ಸುತ್ತಲೂ ಗಿರಗಟ್ಟಿ ಹೊಡೆಯುತ್ತವೆ. ಇವೆಲ್ಲವುಗಳ ಒಟ್ಟು ಆಶಯ ಮೇಳ ಶ್ರೇಷ್ಠತೆಯ ಪ್ರತಿಪಾದನೆಯೇ ಹೊರತು ಇನ್ನಾವುದೂ ಆಗಿಲ್ಲ. ಯಕ್ಷಗಾನವನ್ನು ಹೊರತು ಪಡಿಸಿ ಇಡಗುಂಜಿ ಮೇಳದ ಬಗ್ಗೆ ಹೆಚ್ಚು ಕುತೂಹಲವಿರುವವರಿಗೆ ಕೃತಿ ಒಂದು ಆಕರವೆ ಸರಿ.

ಈ ಮಾತಿಗೊಂದು ಸಾಮಾನ್ಯ ಉದಾಹರಣೆ 'ಇಡಗುಂಜಿ ಮೇಳದ ಶಿವರಾಮ ಹೆಗಡೆಯವರಿಗೇ ಯಕ್ಷಗಾನಕ್ಕಾಗಿ ಮೊದಲ ರಾಷ್ಟ್ರ ಪ್ರಶಸ್ತಿ ದೊರೆತದ್ದು' ಎಂದು ಹಠತೊಟ್ಟು ಪ್ರತಿಪಾದಿಸಿರುವುದು. ಪ್ರಸಿದ್ಧ ಯಕ್ಷಗಾನ ಕಲಾವಿದರಾದ ಹಾರಾಡಿ ರಾಮಗಾಣಿಗರಿಗೆ ಸಿಕ್ಕ ರಾಷ್ಟ್ರ ಪ್ರಶಸ್ತಿ 'ಸಾಂಪ್ರದಾಯಿಕ ನೃತ್ಯ'ಕ್ಕಾಗಿ ನೀಡಿದ್ದು. ಶಿವರಾಮ ಹೆಗಡೆಯವರಿಗೆ ಅಕಾಡೆಮಿ ನೀಡಿದ ರಾಷ್ಟ್ರಪ್ರಶಸ್ತಿ ಯಕ್ಷಗಾನಕ್ಕಾಗಿಯೇ ಕೊಟ್ಟದ್ದು (ಪು. ೧೯೧) ಎಂಬ ಮಾತುಗಳು 'ಯಕ್ಷಗಾನ ಅಸಾಂಪ್ರದಾಯಿಕ ನೃತ್ಯದ್ದು' ಎಂಬುದನ್ನು ಪರೋಕ್ಷವಾಗಿ ಪ್ರತಿಪಾದಿಸುತ್ತದೆ. ಹಾರಾಡಿಯವರಿಗೆ ಅವರ ಕಲೆಗಾಗಿ ಪ್ರಶಸ್ತಿ ನೀಡಿದೆ. ಅವರೊಬ್ಬ ಮಹಾನ್ ಯಕ್ಷಗಾನ ಕಲಾವಿದ. ಸಾಂಪ್ರದಾಯಕವೋ ಅಸಾಂಪ್ರದಾಯಕವೊ! ಅದು ಯಕ್ಷಗಾನಕ್ಕೆ! ಅಂತಿಮವಾಗಿ ಸಲ್ಲುತ್ತದೆ. ಇದು ಸಾಮಾನ್ಯ ಪ್ರಜ್ಞೆಯ ವಿಷಯ.

ಸುಮಾರು ಇನ್ನೂರು ಪುಟಗಳ ಈ ಕೃತಿಯ ಆರಂಭದ ಬರಹ ಶೈಲಿಗೂ ಮಧ್ಯ ಮತ್ತು ಅಂತಿಮ ಹಂತದ ಬರವಣಿಗೆಗಳ ಶೈಲಿಗೂ ತುಂಬ ವ್ಯತ್ಯಾಸವಿದೆ. ಒಂದೇ ಬಗೆಯ ಶೈಲಿ ಓದುಗನನ್ನು ಧಿಕ್ಕೆಡಿಸುವುದಿಲ್ಲವೆಂಬುದನ್ನು ಮನಗಾಣಬೇಕು. ಪಿಎಚ್‌ಡಿ ಪದವಿಯ ಈ ಕೃತಿಯಲ್ಲಿ ಗೊಂದಲಕಾರಿಯಿಂದ 'ಡ್ಯಾಮೇಜಿಂಗ್' ಎಂಬಂಥ ಹೇಳಿಕೆಗಳೂ ತುಂಬಿವೆ. "ಇಡೀ ಕರ್ನಾಟಕವನ್ನು ಪ್ರತಿನಿಧಿಸುವ ಏಕೈಕ ಜಾನಪದ ಕಲೆ ಯಕ್ಷಗಾನ. ಉಳಿದೆಲ್ಲ ಕಲೆಗಳು ಏಕದೇಶೀಯ" (ಪು. ೨೧೮) ಎಂಬ ಮಾತು ಸಮರ್ಥನೆ ಬೇಡುತ್ತದೆ.

ಮೇಳ ನಿಷ್ಠತೆ ಮೆರೆಯುವ ಈ ಕೃತಿಗೆ ಪ್ರಯತ್ನಿಸುವ ಮುನ್ನ ಸಿಂಧುವಳ್ಳಿ ಅನಂತಮೂರ್ತಿಯವರು 'ಗುಬ್ಬಿ ಕಂಪನಿ' ಕುರಿತು ಮಾಡಿದ ಅಧ್ಯಯನವನ್ನು ಅವಲೋಕಿಸಬೇಕಿತ್ತು. ಹಾಗಾಗಿದ್ದರೆ ಕೃತಿಯ ಸ್ವರೂಪ ಭಿನ್ನವಾಗುತ್ತಿತ್ತೇನೋ. ಇಬ್ಬರು ಪಿಎಚ್‌ಡಿ ಪದವೀಧರರು ಕರಡು ತಿದ್ದಿಯೂ ಉಳಿದ ಅಸಂಖ್ಯಾತ ಅಚ್ಚಿನ ದೋಷಗಳು ಅಸಾಧ್ಯ ಕಿರಿಕಿರಿಯನ್ನುಂಟು ಮಾಡುತ್ತವೆಂಬುದು ಶೈಕ್ಷಣಿಕ ವ್ಯಂಗ್ಯವಾಗಲಾರದು: ಇದು 'ಕಲ್ಲುರಾಶಿಯೊಳಗಿನ ಮೊಸರನ್ನ'.

ಶ್ರೀಪಾದಭಟ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬



“ಯಾವನು ತನ್ನ ಪೂರ್ವಿಕರಿಂದ ತನಗೆ ಅವಮಾನವಾಯಿತೆಂದು ಖಿನ್ನಮನಸ್ಕನಾಗುವನೋ, ಆಗ ಅವನಿಗೆ ಕೊನೆಗಾಲ ಸಮೀಪಿಸಿತೆಂದು ತಿಳಿಯಿರಿ. ಹಿಂದೂ ಜನಾಂಗದಲ್ಲಿ ನಾನೊಬ್ಬ ತೃಣಪ್ರಾಯ, ಆದರೂ ನಿಮ್ಮ ಮುಂದೆ ಧೈರ್ಯವಾಗಿ ನಿಂತಿದ್ದೇನೆ. ಇಷ್ಟು ಧೈರ್ಯ ನನಗೆ ಹೇಗೆ ಬಂತು ? ನಮ್ಮ ಜನಾಂಗದ ವಿಷಯದಲ್ಲಿಯೂ, ನಮ್ಮ ಪೂರ್ವಿಕರ ವಿಷಯದಲ್ಲಿಯೂ, ನನಗಿರುವ ಹೆಮ್ಮೆಯೇ ಇದಕ್ಕೆ ಕಾರಣ. ನಾನು ಹಿಂದೂ ಎಂದು ಹೇಳಿಕೊಳ್ಳುವುದೇ ನನಗೊಂದು ಹೆಮ್ಮೆ. ನಿಮ್ಮ ಸೇವಕರಲ್ಲಿ ನಾನೊಬ್ಬ ಕೀಳು ಸೇವಕನಾಗಿರುವುದೇ ನನಗೊಂದು ಹೆಮ್ಮೆ. ಜಗತ್ತು ಎಂದೂ ಇನ್ನೆಲ್ಲಿಯೂ ಕಾಣದ ಮಹಾಮಹಿಮ ಋಷಿಗಳ ವಂಶಕ್ಕೆ ಸೇರಿದ ನೀವು ನನ್ನ ಬಾಂಧವರಾಗಿರುವುದೇ ನನಗೊಂದು ಹೆಮ್ಮೆ. ಆದ್ದರಿಂದ ಆತ್ಮಶ್ರದ್ಧೆಯುಳ್ಳವರಾಗಿ, ನಿಮ್ಮ ಹಿರಿಯರಿಂದ ನಿಮಗೆ ಅಪಕೀರ್ತಿ ತಾಗಿತೆನ್ನದಿರಿ. ಅವರಿಂದ ನಿಮಗೆ ಕೀರ್ತಿ ಬಂದಿತೆಂದು ಹೆಮ್ಮೆಪಡಿ. ಆದರೆ ದಯವಿಟ್ಟು ವಿಚಾರಮಾಡದೆ, ಕುರುಡರಂತೆ ಇತರರನ್ನು ಅನುಕರಿಸಬೇಡಿ.”

(ಹಿಂದೂ ಧರ್ಮದ ಸಾಮಾನ್ಯ ತತ್ವಗಳು—ಸ್ವಾಮಿ ವಿವೇಕಾನಂದ)

ಓದುಗರ ಅನಿಸಿಕೆ

ಮಾನ್ಯರೆ,

ಡಿಸೆಂಬರ್ ೯೮ರ ಸಂಚಿಕೆಯಲ್ಲಿ ದೇಜಗೌ ಅವರ 'ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೃತ್ಯು ನೃತ್ಯ' ಲೇಖನದಲ್ಲಿ ಈಚೆಗೆ ನಿಧನರಾದ ಸಾಹಿತಿಗಳಿಗೆ ಅಶ್ರುತರ್ಪಣ ಸಲ್ಲಿಸುತ್ತಾ, ಚದುರಂಗ, ಸತ್ಯಕಾಮ ಮತ್ತು ಆರ್. ಸಿ. ಹಿರೇಮಠರ ಬಗ್ಗೆ ಸಂಕ್ಷಿಪ್ತತೆಯಲ್ಲೇ ಸಮಗ್ರತೆ ಅಡಗಿಸಿ ಪರಿಚಯಿಸಿದ್ದಾರೆ. ಮಾನ್ಯ ಲೇಖಕರಿಗೆ ಗೌರವಪೂರ್ವಕ ವಂದನೆಗಳು.

ಎಸ್. ಚಿದಾನಂದ
ಚನ್ನಗಿರಿ

ಸಂಪಾದಕರಿಗೆ,

ಈ ಸಾಲಿನ ನೊಬೆಲ್ ಪ್ರಶಸ್ತಿಯನ್ನು ಭಾರತಕ್ಕೆ ತಂದುಕೊಟ್ಟ ಅಮರ್ತ್ಯಸೇನ್ ಅವರ ಬಗ್ಗೆ ಡಾ॥ ದೇಜಗೌ ಮತ್ತು ಸಿ. ನಾಗಣ್ಣ ಅವರುಗಳು ಬರೆದಿರುವ ಲೇಖನಗಳು ಭಾರತದ ಈ ಹೆಮ್ಮೆಯ ಪುತ್ರನನ್ನು ಹೆಚ್ಚು ತಿಳಿದುಕೊಳ್ಳಲು ಸಹಕಾರಿಯಾಗಿದೆ.

ನಾಗಲಿಂಗಸ್ವಾಮಿ
ಹುಲಿಯೂರುದುರ್ಗ

ಮಾನ್ಯರೇ,

ಕಳೆದ ಡಿಸೆಂಬರ್ ಪುಸ್ತಕ ಪ್ರಪಂಚದಲ್ಲಿ ಬಂದಿರುವ ಹೊರೆಯಾಲ ದೊರೆಸ್ವಾಮಿ ಅವರ 'ಜೀವಕಾರುಣ್ಯದ ವ್ಯಕ್ತಿ ಚದುರಂಗ' ಲೇಖನವು ಹೆಚ್ಚು ಆಪ್ತವಾಗಿದೆ. ಚದುರಂಗರ ಬದುಕು ಬರಹದ ಪರಿಚಯಕ್ಕೆ ಕೊರತೆಯಾಗದಂತೆ ಲೇಖನ ಮೂಡಿಬಂದಿದೆ.

ಗಿರಿಜಾ ಗಿರಿಧರ್
ತುಮಕೂರು

ಮಾನ್ಯ ಸಂಪಾದಕರಿಗೆ,

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಕೆ. ಸುಕನ್ಯ ಭಟ್ ಅವರ 'ನೀರು ನುಂಗಿದ ನಾಣಿ' ಕತೆ ಮನಕಲಕುತ್ತದೆ. ಡಾ॥ ಎಸ್. ಜೆ. ನಾಗಲೋಟಿ ಮಠರ 'ಸ್ಪೀಡ್ ಬ್ರೇಕರ್ಸ್' ಲೇಖನ ನಮ್ಮ ದೇಶದ ಅವ್ಯವಸ್ಥೆ ಪರಮಾವಧಿಯ ಚಿತ್ರಣ. ನೀರದ ನಾಗರಾಜರಾವ್ ಅವರ 'ಸಾಯಲೊಲ್ಲದ ವ್ಯಕ್ತಿ' ಅದ್ಭುತವನ್ನು ನಿರೂಪಿಸುತ್ತದೆ. ಹೀಗೆ ಕರುಣೆ, ಹಾಸ್ಯ, ಅದ್ಭುತ ಈ ಎಲ್ಲ ರಸಗಳನ್ನೂ ಓದುಗರಿಗೆ ಉಣಬಡಿಸುವ ಪುಸ್ತಕ ಪ್ರಪಂಚಕ್ಕೆ ನನ್ನ ಕಿರು ಕಾಣಿಕೆ! ಪ್ರತಿಸಂಚಿಕೆಯನ್ನೂ ತಪ್ಪದೇ ಓದುವುದು.

ಯೋಗೀಶ್ ಭಟ್
ಹಂಪನಕಟ್ಟೆ, ಮಂಗಳೂರು

ತಿದ್ದುಪಡಿ

೧೯೯೮ರ ಡಿಸೆಂಬರ್ ಸಂಚಿಕೆಯ ಪುಟ ೧೪ ಸಾಲು ೨೧ರಲ್ಲಿ ಅಮರ್ತ್ಯಸೇನ್‌ರ ಜನನ ೧೯೩೩ ಎಂಬುದಕ್ಕೆ ಬದಲಾಗಿ ೧೯೨೩ ಎಂದು ಮುದ್ರಣವಾಗಿದೆ. ಇದಕ್ಕಾಗಿ ವಿಷಾದಿಸಿದೆ.

ಸಂ

Reg No. KRNN-29 / WPP 6

LICENCE No. 21
LICENCED TO POST WITH PAYMENT

ಮಾನ್ಯ ಚಂದಾದಾರಲ್ಲಿ ಮನವಿ

ಪುಸ್ತಕ ಪ್ರಪಂಚ ಸದ್ಯದಲ್ಲೇ ಅರ್ಧಶತಮಾನ ದಾಟುತ್ತಿದ್ದು, ಓದುಗ ಬಂಧುಗಳ ಅಭಿಮಾನ, ಲೇಖಕ ಬಳಗದ ಸಹಕಾರ, ಸಂಪಾದಕ ಮಂಡಳಿಯ ಮಾರ್ಗದರ್ಶನ ಈ ಸಾಧನೆಗೆ ಕಾರಣವಾಗಿದೆ.

ವೃದ್ಧಿಸುತ್ತಿರುವ ಓದುಗರ ಮನತಣಿಸಲು 'ಪುಸ್ತಕ ಪ್ರಪಂಚ"ವನ್ನು ಆಕರ್ಷಕವಾಗಿ ಆಫ್‌ಸೆಟ್‌ನಲ್ಲಿ ಮುದ್ರಿಸಲು ಉದ್ದೇಶಿಸಿದೆ. ಈ ಹಿನ್ನಲೆಯಲ್ಲಿ ಮುದ್ರಣ ವೆಚ್ಚದ ಏರಿಕೆ, ಲೇಖಕರ ಗೌರವ ಸಂಭಾವನೆಯ ಹೆಚ್ಚಳ ಮುಂತಾದವನ್ನು ಸರಿದೂಗಿಸಲು ಪುಸ್ತಕ ಪ್ರಪಂಚ ಚಂದಾ ಪರಿಷ್ಕಾರ ಅನಿವಾರ್ಯವಾಗಿದೆ. ಆದ್ದರಿಂದ ದಿನಾಂಕ ೧-೧-೧೯೯೯ ರಿಂದ ಈ ಕೆಳಕಂಡಂತೆ ಪರಿಷ್ಕರಿಸಿದೆ.

೧) ವಾರ್ಷಿಕ ಚಂದಾ	ರೂ. ೧೦೦-೦೦
೨) ಆಜೀವ ಸದಸ್ಯತ್ವ ಚಂದಾ : ವ್ಯಕ್ತಿಗೆ	ರೂ. ೭೦೦-೦೦
೩) ಆಜೀವ ಸದಸ್ಯತ್ವ ಚಂದಾ : ಸಂಸ್ಥೆಗೆ	ರೂ. ೯೦೦-೦೦

ಮೇಲ್ಕಂಡ ಪರಿಷ್ಕೃತ ದರದಲ್ಲಿ ಚಂದಾದಾರರಾಗಿ ಮಾನ್ಯ ಓದುಗರು ಹಿಂದಿನಂತೆ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಡಿ.ಡಿ/ಎಂ.ಒ ಕಳುಹಿಸುವ ವಿಳಾಸ :

ದೂರವಾಣಿ : ೫೧೫೧೨೮
೫೧೫೮೨೮

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
೫/೧ ವಿನೋಬಾ ರಸ್ತೆ
ಮಾನಸಗಂಗೋತ್ರಿ, ಆವರಣ
ಮೈಸೂರು-೫೭೦ ೦೦೬

Edited by Chandrashekhararadhya Printed by Papanna
Printed & Published by Karnataka State Adult Education Council
5/1, Vinoba Road, Manasa Gangothri, Mysore-570 006.